ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 8 ಭಾನುವಾರ 2023

ಸಂಪುಟ: 43 | ಸಂಚಿಕೆ: 262 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಎಸ್‌ಸಿ, ಎಸ್‌ಟಿ ಮೀಸಲಾತಿ ಹೆಚ್ಚಿಸಿದ್ದೆ ನಮ್ಮ ಸರ್ಕಾರ

ಮೈಸೂರು, ಜ.7(ಆರ್‌ಕೆ)–ನಮ್ಮ ಸರ್ಕಾರವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದಿಲ್ಲಿ ಘೋಷಿಸಿದ್ದಾರೆ. ಮೈಸೂರಿನ ಲಲಿತ ಮಹಲ್ ಹೋಟೆಲ್‌ನಲ್ಲಿ ನಡೆಯುತ್ತಿರುವ ಬಿಜೆಪಿ ಎಸ್ಸಿ ಮೋರ್ಚಾ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ಬಿಜೆಪಿ ಸರ್ಕಾರದಲ್ಲಿ ಎಸ್ಸಿ ಎಸ್ಟಿ ಸಮುದಾಯಗಳಿಗಿರುವ ಮೀಸಲಾತಿ ಪ್ರಮಾಣ ಹೆಚ್ಚಿಸಿ ಅವರನ್ನು ಸದೃಢವಾಗಿಸಲು ಪ್ರಯತ್ನಿಸಲಾಗುತ್ತಿದೆ ಎಂದರು. ಈ ಪ್ರಯತ್ನಕ್ಕೆ ಸದನದಲ್ಲಿ ಒಪ್ಪಿಗೆ ದೊರೆತಿದೆ. ಮೀಸಲಾತಿ ಹೆಚ್ಚಳ ಸಂಬಂಧ ಮತ್ತಷ್ಟು ಕಾನೂನು ಬಲಪಡಿಸ ಬೇಕಾಗಿರುವುದರಿಂದ ಸಂವಿಧಾನದ ಅನುಚ್ಛೇದ–14 ಮತ್ತು 15ರಡಿ ಪರಿಶೀಲಿಸಿ ಕ್ರಮ ವಹಿಸಲಾಗುವುದು. ಈ ವಿಚಾರದಲ್ಲಿ ಯಾವುದೇ ಅನುಮಾನ ಬೇಡ. ▶ 9ನೇ ಪುಟಕ್ಕೆ

ಸ್ಯಾಂಟ್ರೋ ರವಿಯಿಂದ ನಿರೀಕ್ಷಣಾ ಜಾಮೀನಿಗೆ ಅರ್ಜಿ



ಮೈಸೂರು, ಜ.7–ಅತ್ಯಾಚಾರ ಮತ್ತು ಪರಿಶಿಷ್ಟ ಜಾತಿ ಮಹಿಳೆ ಮೇಲೆ ದೌರ್ಜನ್ಯ ಆರೋಪ ಎದುರಿಸುತ್ತಿರುವ ವೇಶ್ಯಾವಾಟಿಕೆ ದಂಧೆಯ ಕಿಂಗ್ ಪಿನ್ ಮಂಜುನಾಥ್ ಅಲಿಯಾಸ್ ಸ್ಯಾಂಟ್ರೋ ರವಿ ನಿರೀಕ್ಷಣಾ ಜಾಮೀನಿಗಾಗಿ ಮೈಸೂರು ಸೆಷನ್ಸ್ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದಾನೆ.

ಕೆಲಸ ನೀಡುವುದಾಗಿ ನಂಬಿಸಿ ತನ್ನ ಮೇಲೆ ಅತ್ಯಾಚಾರ ಎಸಗಿದ ನಂತರ ಬ್ಲಾಕ್‌ಮೇಲ್ ಮಾಡಿ ಮದುವೆಯಾಗಿದ್ದಾನೆ ಎಂದು ಪದವೀಧರೆಯೊಬ್ಬಳು ಜನವರಿ 2ರಂದು ರಾತ್ರಿ ವಿಜಯನಗರ ಠಾಣೆಗೆ ದೂರು ಸಲ್ಲಿಸಿದ್ದಾರೆ. ಪರ ಪುರುಷನೊಂದಿಗೆ ಲೈಂಗಿಕ ಸಂಪರ್ಕ ಹೊಂದುವಂತೆ ಸ್ಯಾಂಟ್ರೋ ರವಿ ಒತ್ತಾಯಿಸುತ್ತಿದ್ದ ಅಲ್ಲದೇ, ▶ 9ನೇ ಪುಟಕ್ಕೆ

ಮೈಸೂರಲ್ಲಿ ಬಿಜೆಪಿ ಎಸ್‌ಸಿ ಮೋರ್ಚಾ ರಾಷ್ಟ್ರೀಯ ಕಾರ್ಯಕಾರಣಿ ಉದ್ಘಾಟಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

ಎಸ್‌ಸಿ–ಎಸ್‌ಟಿ ಸಮುದಾಯ ಭಾರತದ ಅಸ್ಮಿತೆ

ದೇಶದ ಸಂಸ್ಕೃತಿಯ ಒಂದು ಭಾಗ: ಸಿಎಂ



ಮೈಸೂರಿನ ಲಲಿತ ಮಹಲ್ ಹೋಟೆಲ್‌ನಲ್ಲಿ ಶನಿವಾರ ಆಯೋಜಿಸಿದ್ದ ಬಿಜೆಪಿ ಎಸ್‌ಸಿ ಮೋರ್ಚಾ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಿದರು. ಬಿಜೆಪಿ ಎಸ್‌ಸಿ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷ ಲಾಲ್‌ಸಿಂಗ್ ಆರ್ಯ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ, ರಾಷ್ಟ್ರೀಯ ಸಂಘಟಕ ದುಶ್ಯಂತಕುಮಾರ್ ಗೌತಮ್, ಡಾ. ಸಂಜಯ್ ಪಾಸ್ವಾನ್, ರಾಮಪಟ್ಟಿ ಶಾಸ್ತ್ರಿ, ಮೇಯರ್ ಶಿವಕುಮಾರ್ ಹಾಗೂ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಜ. 7(ಆರ್‌ಕೆ)– ಪರಿಶಿಷ್ಟ ಜಾತಿ ಮತ್ತು ಪಂಗಡ ಸಮುದಾಯಗಳು ಭಾರತದ ಸಂಸ್ಕೃತಿ ಪ್ರತಿಬಿಂಬಿಸುವ ಪ್ರಮುಖ ಭಾಗವಾಗಿವೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದಿಲ್ಲಿ ತಿಳಿಸಿದ್ದಾರೆ.

ಮೈಸೂರಿನ ಲಲಿತ ಮಹಲ್ ಹೋಟೆಲ್‌ನಲ್ಲಿ ಆಯೋಜಿಸಿರುವ ಬಿಜೆಪಿ ಎಸ್‌ಸಿ ಮೋರ್ಚಾ ರಾಷ್ಟ್ರೀಯ ಕಾರ್ಯಕಾರಿಣಿ ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ಪರಿಶಿಷ್ಟ ಜಾತಿ–ಪಂಗಡ ಸಮುದಾಯವು ಭಾರತದ ಪ್ರಮುಖ ಸಾಮಾಜಿಕ ಅಂಗವಾಗಿದ್ದು, ಇಲ್ಲಿನ ಸಾಮಾಜಿಕ ತಳಹದಿಯೂ ಹೌದು. ಈ ಎರಡೂ ಸಮುದಾಯಗಳು ದೇಶದ ಅಸ್ಮಿತೆಯಾಗಿವೆ ಎಂದರು. ನಾನು ರಸ್ತೆ ಅಭಿವೃದ್ಧಿಗೆ 100 ಕೋಟಿ ರೂ. ಅನುದಾನವನ್ನು ಕೊಡಬಹುದು. ಆದರೆ, ರಸ್ತೆ ನಿರ್ಮಾಣ ಕಾಮಗಾರಿಯಲ್ಲಿ ಜಲ್ಲಿ, ಡಾಂಬರ್ ಹಾಕುವವರು ಕೆಳಸ್ತರದ ಜನರು. ಅವರ ಶ್ರಮ ಏನೆಂಬುದು ನನಗೆ ಗೊತ್ತು. ತಳಹದಿಯಲ್ಲಿ ಕೆಲಸ ಮಾಡುವವರು ಈ ದೇಶದ ಅರ್ಥವ್ಯವಸ್ಥೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ದೇಶದ ಅಭಿವೃದ್ಧಿ, ಬೆಳವಣಿಗೆಯು ಈ ದುಡಿಯುವ ವರ್ಗದ ಕೈಯ್ಯಲ್ಲಿದೆ ಎಂಬುದನ್ನು ಪ್ರತಿಯೊಬ್ಬರೂ ಅರ್ಥ ಮಾಡಿಕೊಳ್ಳಬೇಕು ಎಂದು ಮುಖ್ಯಮಂತ್ರಿಗಳು ನುಡಿದರು.

ಈ ತಳ ಸಮುದಾಯಗಳು ಆರ್ಥಿಕವಾಗಿ, ಸಾಮಾಜಿಕವಾಗಿ ಸದೃಢವಾಗಬೇಕಾಗಿದೆ. ಸಾಮಾಜಿಕ ನ್ಯಾಯ, ಸಮಾನತೆ, ಸ್ವಾವಲಂಬಿಯಾಗಿ, ಗೌರವಯುತವಾಗಿ ಬದುಕುವಂತಾಗಬೇಕು. ಅವರು ಸಮಾಜದ ಮುಖ್ಯವಾಹಿನಿಗೆ ಬರಬೇಕಾಗಿದೆ. ನಾವು ಯಾರಿಗಿಂತಲೂ ಕಡಿಮೆ ಇಲ್ಲ, ನಮಗೆ ಯಾರದೇ ಅನುಕಂಪದ ಅಗತ್ಯ ವಿಲ್ಲ ಎಂಬ ಮನೋಭಾವನೆಯಿಂದ ಮುನ್ನಡೆಯಬೇಕು ಎಂದು ಬಸವರಾಜ ಬೊಮ್ಮಾಯಿ ಇದೇ ▶ 9ನೇ ಪುಟಕ್ಕೆ

ಸ್ಯಾಂಟ್ರೋ ರವಿ ಪ್ರಕರಣ

ತನಿಖೆ ನಡೆಸಿ, ಕಠಿಣ ಕ್ರಮಕ್ಕೆ ಸೂಚಿಸಿದ್ದೇನೆ

- ಮೈಸೂರಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ಪಷ್ಟೋಕ್ತಿ
- ಆತನೊಂದಿಗೆ ಎಲ್ಲಾ ಪಕ್ಷಗಳ ಮುಖಂಡರೂ ಸಂಪರ್ಕ ಹೊಂದಿದ್ದಾರೆ



ಮೈಸೂರು,ಜ.7(ಎಂಟಿವೈ)– ರಾಜ್ಯ ರಾಜಕೀಯದಲ್ಲಿ ಸಂಚಲನವನ್ನುಂಟು ಮಾಡಿರುವ ವೇಶ್ಯಾವಾಟಿಕೆ ದಂಧೆಕೋರ ಸ್ಯಾಂಟ್ರೋ ರವಿ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರತಿಕ್ರಿಯೆ ನೀಡಿದ್ದು, ಆತನ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ಕಠಿಣ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ. ಬೆಂಗಳೂರಿನಿಂದ ವಿಶೇಷ ವಿಮಾನದಲ್ಲಿ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಶನಿವಾರ ಆಗಮಿಸಿದ ಸಿಎಂ ಬಸವರಾಜ ಬೊಮ್ಮಾಯಿ ಪತ್ರಕರ್ತರೊಂದಿಗೆ ಮಾತನಾಡಿ, ಹೆಣ್ಣು ಮಗಳೊಬ್ಬರು ನೀಡಿರುವ ದೂರು ಆಧರಿಸಿ ಮೈಸೂರಲ್ಲಿ ಸ್ಯಾಂಟ್ರೋ ರವಿ ವಿರುದ್ಧ ಪ್ರಕರಣ ದಾಖಲಾಗಿದೆ. ಈತನ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಸಮಗ್ರ ತನಿಖೆ ನಡೆಸಿ, ಆತ ಈ ಹಿಂದಿನಿಂದ ನಡೆಸಿರುವ ಅಕ್ರಮಗಳ ಪತ್ತೆಗೆ ಸೂಚನೆ ನೀಡಲಾಗಿದೆ. ಆತನ ವಿರುದ್ಧ ಸಾಕಷ್ಟು ದೂರು ಕೇಳಿ ಬಂದಿರುವುದರಿಂದ ಈ ಪ್ರಕರಣದಲ್ಲಿ ಯಾರನ್ನು ರಕ್ಷಿಸುವ ಪ್ರಮೇಯ ಒದಗಿ ಬರುವುದಿಲ್ಲ ಎಂದರು. ▶ 9ನೇ ಪುಟಕ್ಕೆ

ನಾನು ಸಿ.ಟಿ.ರವಿ, ಸ್ಯಾಂಟ್ರೋ ರವಿ ಗೊತ್ತಿಲ್ಲ!

ಮೈಸೂರು, ಜ.7(ಆರ್‌ಕೆ)–ನಾನು ಸಿ.ಟಿ.ರವಿ, ಸ್ಯಾಂಟ್ರೋ ರವಿ ಯಾರೋ ನನಗೆ ಗೊತ್ತಿಲ್ಲ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಇಂದಿಲ್ಲಿ ಮಾರ್ಮಿಕವಾಗಿ ನುಡಿದಿದ್ದಾರೆ. ಮೈಸೂರಿನ ಲಲಿತಮಹಲ್ ಹೋಟೆಲ್‌ನಲ್ಲಿ ನಡೆಯುತ್ತಿರುವ ಬಿಜೆಪಿ ಎಸ್ಸಿ ಮೋರ್ಚಾ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ ಪಾಲ್ಗೊಂಡಿದ್ದ ಅವರು, ಸುದ್ದಿಗಾರರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ನಾನು ಸಿ.ಟಿ.ರವಿ, ಸ್ಯಾಂಟ್ರೋ ರವಿ ಯಾರೆಂಬುದು ಗೊತ್ತಿಲ್ಲ. ಈಗ ಯಾರು ಎಲ್ಲಿ ಬೇಕಾದರೂ ಯಾರ ಜೊತೆಗಾದರೂ ಫೋಟೋ ತೆಗೆಸಿಕೊಳ್ಳುತ್ತಾರೆ ಎಂದರು. ಸಾರ್ವಜನಿಕ ಜೀವನದಲ್ಲಿರುವವರು ಹೋದ ಕಡೆಯಲ್ಲೆಲ್ಲಾ ಸೆಲ್ಫಿಗೆ ಪೋಸ್ ಕೊಟ್ಟಿರ್ತಾರೆ, ಫೋಟೋ ತೆಗೆಸಿಕೊಂಡವರ ಜೊತೆಗೆಲ್ಲಾ ಸಂಬಂಧ ಕಲ್ಪಿಸುವುದು ಸರಿಯೇ ಎಂದು ಪ್ರಶ್ನಿಸಿದ ಅವರು, ಸಾರ್ವಜನಿಕರಿಗೆ ಕೋಟ್ಯಾಂತರ ರೂಪಾಯಿ ಪಂಗನಾಮ ಹಾಕಿದ ಐಎಂಎ ಹಗರಣದ ಆರೋಪಿಯು ಹೆಚ್.ಡಿ. ಕುಮಾರಸ್ವಾಮಿ ಜೊತೆ ಫೋಟೋ ತೆಗೆಸಿಕೊಂಡಿದ್ದಾನೆ. ▶ 9ನೇ ಪುಟಕ್ಕೆ

ರಾಜ್ಯ ಬಿಜೆಪಿಗೆ ಪ್ರಧಾನಿ ಮೋದಿ ವರ್ಚಸ್ಸೇ ಸ್ಟ್ರಾಂಗ್ ಎನರ್ಜಿ

- ಮೊದಲಿಗಿಂತ ಈಗ ದುಪ್ಪಟ್ಟಾಗಿರುವ ಮೋದಿ ವರ್ಚಸ್ಸಿನಿಂದ ಅಧಿಕ ಸ್ಥಾನ ಗೆಲ್ಲುವ ತಂತ್ರಗಾರಿಕೆ
- ಸಮೀಕ್ಷಾ ವರದಿಗಳ ಆಧರಿಸಿ ಮೋದಿ ಅವರನ್ನೇ ಆರಾಧಿಸುತ್ತಿರುವ ರಾಜ್ಯ ಬಿಜೆಪಿಗರು



ಬೆಂಗಳೂರು, ಜ.7(ಕೆಎಂಶಿ)–ಮುಂಬರುವ ವಿಧಾನಸಭೆ ಚುನಾವಣೆಗೆ ರಾಜ್ಯ ನಾಯಕರ ವರ್ಚಸ್ಸಿಗಿಂತ ಪ್ರಧಾನಿ ನರೇಂದ್ರ ಮೋದಿ ಅವರ ವರ್ಚಸ್ಸೇ ಕರ್ನಾಟಕ ಬಿಜೆಪಿಗೆ ಆಸರೆ.

ಚುನಾವಣಾ ಪೂರ್ವ ಸಮೀಕ್ಷೆಗಳ ಪ್ರಕಾರ ಮೋದಿ ಅವರ ವರ್ಚಸ್ಸಿನಿಂದಲೇ ಬಿಜೆಪಿ ಕರ್ನಾಟಕದಲ್ಲಿ ಅಧಿಕ ಸ್ಥಾನ ಪಡೆಯಲು ಸಾಧ್ಯ ಎಂದಿದೆ.

2018–19ರಲ್ಲಿ ರಾಜ್ಯ ವಿಧಾನಸಭೆ ಹಾಗೂ ಲೋಕಸಭಾ ಚುನಾವಣೆಯ ನಂತರ ಕಳೆದ ಐದು ವರ್ಷಗಳಲ್ಲಿ ಮೋದಿ ಅವರ ವರ್ಚಸ್ಸು ಕರ್ನಾಟಕದಲ್ಲಿ ದುಪ್ಪಟ್ಟುಗೊಂಡಿದೆ. ಕಾಂಗ್ರೆಸ್ಸೇತರ ಪಕ್ಷಗಳಲ್ಲಿ ಮಾಜಿ ಮುಖ್ಯಮಂತ್ರಿ ದಿವಂಗತ ರಾಮಕೃಷ್ಣ ಹೆಗ್ಡೆ ಉತ್ತರ ಕರ್ನಾಟಕ ಭಾಗ, ಅದರಲ್ಲೂ ವೀರಶೈವ ಸಮುದಾಯದ ಪ್ರಶ್ನಾತೀತ ನಾಯಕರಾಗಿದ್ದರು.

ಹೆಗ್ಡೆ ಕಾಲವಾದ ನಂತರ ಬಿ.ಎಸ್.ಯಡಿಯೂರಪ್ಪ ಆ ಸ್ಥಾನವನ್ನು ತುಂಬಿ ಬಿಜೆಪಿಯನ್ನು ಕರ್ನಾಟಕದಲ್ಲಿ ಎರಡು ಬಾರಿ ಅಧಿಕಾರಕ್ಕೆ ತರಲು ಕಾರಣೀಭೂತರಾದರು. ಬಿಎಸ್‌ವೈ ನಿರ್ಗಮನದ ನಂತರ ಬಿಜೆಪಿಯಲ್ಲಿ ವೀರಶೈವ ಸಮುದಾಯದ ನಾಯಕತ್ವ ಕೊರತೆ ತುಂಬಲು ಯಾರಿಂದಲೂ ಸಾಧ್ಯವಾಗುತ್ತಿಲ್ಲ. ಇದರಿಂದ ವಿಚಲಿತರಾದ ಬಿಜೆಪಿ ವರಿಷ್ಠರು, ಯಡಿಯೂರಪ್ಪ ಮಾರ್ಗದರ್ಶನದಲ್ಲಿ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ಚುನಾವಣೆ ಎದುರಿಸಲು ತೀರ್ಮಾನಿಸಿದ್ದರು. ವರಿಷ್ಠರ ಈ ತೀರ್ಮಾನದಿಂದ ಯಾವುದೇ ಪ್ರಯೋಜನವಾಗಲಿಲ್ಲ. ಆದರೆ ಸಮೀಕ್ಷಾ ವರದಿಗಳ ಪ್ರಕಾರ ಯಡಿಯೂರಪ್ಪ ಅವರ ನಾಯಕತ್ವದ ವರ್ಚಸ್ಸನ್ನು ಪ್ರಧಾನಿ ನರೇಂದ್ರ ಮೋದಿ ಅವರು ತುಂಬುತ್ತಿದ್ದಾರೆ. ಕಾಂಗ್ರೆಸ್ ಪಕ್ಷದಲ್ಲಿ ವೀರಶೈವ ನಾಯಕತ್ವದ ಕೊರತೆ ಇರುವ ಕಾರಣ ಆ ಸಮುದಾಯವು ಪ್ರಧಾನಿಯವರನ್ನು ತಮ್ಮ ನಾಯಕರನ್ನಾಗಿ ಸ್ವೀಕರಿಸುತ್ತಿದ್ದಾರಂತೆ. ಈ ಹಿಂದೆ ರಾಮಕೃಷ್ಣ ಹೆಗ್ಡೆ ವೀರಶೈವ ಸಮುದಾಯದವರಲ್ಲದಿದ್ದರೂ ಅವರನ್ನು ತಮ್ಮ ಪ್ರಶ್ನಾತೀತ ನಾಯಕರನ್ನಾಗಿ ಮಾಡಿಕೊಂಡಿದ್ದರು. ಇದೀಗ ಪ್ರಧಾನಿಯವರಿಗೆ ಆ ಗೌರವ ಸಂದಿದೆ. ಕೇವಲ ಉತ್ತರ ಕರ್ನಾಟಕ, ಕರಾವಳಿ, ಮಲೆನಾಡು ಭಾಗಕ್ಕೆ ಅಷ್ಟೇ ಮೋದಿ ಪ್ರಭಾವ ಸೀಮಿತವಾಗಿಲ್ಲ. ಹಳೇ ಮೈಸೂರು ಭಾಗದಲ್ಲೂ ಅವರ ವರ್ಚಸ್ಸು ಇದೆ. ಆದರೆ ಈ ಭಾಗದಲ್ಲಿ ಬಿಜೆಪಿ ಪರಿಪೂರ್ಣ ನೆಲೆ ಇಲ್ಲದಿರುವುದರಿಂದ ತಮ್ಮ ನಾಯಕನ ವರ್ಚಸ್ಸನ್ನು ಇಲ್ಲಿ ಬಳಸಿಕೊಳ್ಳಲಾಗುತ್ತಿಲ್ಲ.

ಚುನಾವಣಾ ಪೂರ್ವ ಸಮೀಕ್ಷಾ ವರದಿಗಳನ್ನೇ ಆಧಾರವಾಗಿಟ್ಟುಕೊಂಡಿರುವ ಬಿಜೆಪಿ ವರಿಷ್ಠರು, ಕರ್ನಾಟಕದಲ್ಲಿನ ಮುಂದಿನ ವಿಧಾನಸಭಾ ಚುನಾವಣೆಗೆ ರಾಜ್ಯ ನಾಯಕರನ್ನು ಬದಿಗಿಟ್ಟು, ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಷಾ ಹಾಗೂ ಉತ್ತರ ಪ್ರದೇಶದ ಮುಖ್ಯಮಂತ್ರಿ ▶ 2ನೇ ಪುಟಕ್ಕೆ

ಫೆಬ್ರವರಿಯಲ್ಲಿ 2,500 ಪ್ರೌಢಶಾಲಾ ಶಿಕ್ಷಕರ ನೇಮಕಕ್ಕೆ ಅಧಿಸೂಚನೆ

ಬೆಂಗಳೂರು: ರಾಜ್ಯದಲ್ಲಿ 2500 ಪ್ರೌಢಶಾಲಾ ಶಿಕ್ಷಕರ ನೇಮಕಕ್ಕೆ ನಿರ್ಧರಿಸಿದ್ದು, ಫೆಬ್ರವರಿಯಲ್ಲಿ ಅಧಿಸೂಚನೆ ಹೊರಡಿಸಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಬಿ.ಸಿ.ನಾಗೇಶ್ ಹೇಳಿದ್ದಾರೆ.

ಶಿವಮೊಗ್ಗದಲ್ಲಿ ಮಾತನಾಡಿದ ಅವರು, ಹೊಸ ಕಾಯ್ದೆ ಅನ್ವಯ ಪರಿಶಿಷ್ಟ ಜಾತಿ–ಪಂಗಡಕ್ಕೆ ನಿಗದಿಪಡಿಸಿರುವ ಮೀಸಲು ಆಧರಿಸಿ ಶಿಕ್ಷಕರ ನೇಮಕಾತಿ ನಡೆಯಲಿದೆ. ಇದರಲ್ಲಿ 250 ಮಂದಿ ದೈಹಿಕ ಶಿಕ್ಷಕರ ನೇಮಕ ▶ 2ನೇ ಪುಟಕ್ಕೆ

ತಿ.ನರಸೀಪುರ ಬಳಿ ಕಪಿಲಾ ನದಿಗೆ ಹಾರಿ

ವಿವಾಹಿತ ವ್ಯಕ್ತಿ, ಮಹಿಳೆ ಆತ್ಮಹತ್ಯೆ

ಆತ್ಮಹತ್ಯೆಗೂ ಮುನ್ನ ನಡೆದ ಸಿನಿಮೀಯ ಬೆಳವಣಿಗೆ ಸಾಕಷ್ಟು ಅನುಮಾನಕ್ಕೆ ನಾಂದಿ



ಮಣಿಕಂಠ



ವಸಂತ

ತಿ.ನರಸೀಪುರ, ಜ. 7– ವಿವಾಹಿತ ಯುವಕನೋರ್ವ ತನ್ನ ಸೋದರ ಸಂಬಂಧಿ ವಿವಾಹಿತ ಮಹಿಳೆಯೊಂದಿಗೆ ತಿ.ನರಸೀಪುರ ಪಟ್ಟಣದ ಕಬಿನಿ ಸೇತುವೆಯಿಂದ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡ ಬಗ್ಗೆ ವರದಿಯಾಗಿದೆ. ಯುವಕನ ಪತ್ನಿ ನೀಡಿದ ದೂರಿನನ್ವಯ ತಿ.ನರಸೀಪುರ ಠಾಣೆ ಪೊಲೀಸರು, ಅನುಮಾನಾಸ್ಪದ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ಮೂಲತಃ ಗುಂಡ್ಲುಪೇಟೆ ತಾಲೂಕು ಲಕ್ಕೂರು ಗ್ರಾಮದವನಾಗಿದ್ದು, ಹಾಲಿ ಮೈಸೂರಿನ ಜಯದೇವನಗರದಲ್ಲಿ ವಾಸಿಸುತ್ತಿದ್ದ ಮಣಿಕಂಠ(28) ಮತ್ತು ಈತನ ಸೋದರ ಸಂಬಂಧಿ ಮೂಲತಃ ಗುಂಡ್ಲುಪೇಟೆ ತಾಲೂಕು ಆಲಹಳ್ಳಿ ಗ್ರಾಮದ ವಸಂತ(30) ಅನುಮಾನಾಸ್ಪದವಾಗಿ ಸಾವನ್ನಪ್ಪಿದವರು.

ವಿವರ: ಮೃತ ಮಣಿಕಂಠ ಯಳಂದೂರು ತಾಲೂಕು ಹೊನ್ನೂರು ಗ್ರಾಮದ ಕೆ. ಜ್ಯೋತಿ ಎಂಬಾಕೆಯನ್ನು ಪ್ರೀತಿಸಿ ವಿವಾಹವಾಗಿದ್ದ. ಈ ದಂಪತಿ ಮೈಸೂರಿನ ಜಯದೇವನಗರದಲ್ಲಿ ವಾಸವಿದ್ದು, ಮಣಿಕಂಠ ಅಮೇಜಾನ್‌ನಲ್ಲಿ ಆಫೀಸ್ ಬಾಯ್ ಆಗಿ ಕೆಲಸ ಮಾಡುತ್ತಿದ್ದು, ಈತನ ಪತ್ನಿ ಜ್ಯೋತಿ ಎಲ್ ಅಂಡ್ ಟಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಮಣಿಕಂಠನೊಂದಿಗೆ ಅನುಮಾನಾಸ್ಪದವಾಗಿ ಸಾವನ್ನಪ್ಪಿರುವ ವಸಂತ, ನಂಜನಗೂಡು ತಾಲೂಕು ಕೂಡ್ಲಾಪುರದ ಶಿವಮೂರ್ತಿ ಎಂಬಾತನನ್ನು ವಿವಾಹವಾಗಿದ್ದು, ಕಳೆದ 2 ವರ್ಷದಿಂದ ಈ ದಂಪತಿ ಬೇರ್ಪಟ್ಟಿದ್ದಾರೆ. ಈಕೆ ನಂಜನಗೂಡು ತಾಲೂಕು ಬಂಚಳ್ಳಿಹುಂಡಿ ಗ್ರಾಮದಲ್ಲಿ ಬಾಡಿಗೆ ರೂಂನಲ್ಲಿ ವಾಸವಿದ್ದು, ಐಟಿಸಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಳು ಎಂದು ಹೇಳಲಾಗಿದೆ. ವಸಂತಳೊಂದಿಗೆ ಜನವರಿ 5ರಂದು ಮೈಸೂರಿನ ▶ 9ನೇ ಪುಟಕ್ಕೆ

ಮೈಸೂರು ಮಿತ್ರ ಭಾನುವಾರ 8 ಜನವರಿ 2023

ಪ್ರಸಕ್ತ ಸಾಲಿನ ಕ್ಯಾಲೆಂಡರ್ ಬಿಡುಗಡೆ



ಮೈಸೂರು,ಜ.7(ಪಿಎಂ)– ಶ್ರೀ ವಿಶ್ವಕರ್ಮ ಸೇವಾ ಟ್ರಸ್ಟ್‌ನಿಂದ ಹೊರತಂದಿರುವ ಪ್ರಸಕ್ತ ಸಾಲಿನ ಕ್ಯಾಲೆಂಡರ್ ಅನ್ನು ಶನಿವಾರ ಬಿಡುಗಡೆ ಮಾಡಲಾಯಿತು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕ್ಯಾಲೆಂಡರ್ ಬಿಡುಗಡೆಗೊಳಿಸಲಾಯಿತು. ಇದೇ ವೇಳೆ ಮಾತನಾಡಿದ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಕೆ.ಕೆಂಡಗಣ್ಣ ವಿಶ್ವಕರ್ಮ, ಸಮುದಾಯವನ್ನು ಮುಖ್ಯವಾಹಿನಿಗೆ ತರಬೇಕೆಂಬ ಮುಖ್ಯ ಉದ್ದೇಶದೊಂದಿಗೆ ಟ್ರಸ್ಟ್ ಕಾರ್ಯನಿರ್ವಹಿಸುತ್ತಿದೆ. ಜೊತೆಗೆ ಸಮಾಜಮುಖಿ ಕಾರ್ಯಕ್ರಮಗಳನ್ನು ನಡೆಸುತ್ತ ಬಂದಿದೆ ಎಂದು ಹೇಳಿದರು.

ಸಹಕಾರ ಬ್ಯಾಂಕ್ ಸ್ಥಾಪನೆ, ನರ್ಸರಿ ಮತ್ತು ಪ್ರಾಥಮಿಕ ಶಾಲೆ ಆರಂಭ, ಸಮುದಾಯ ಭವನ ನಿರ್ಮಾಣ ಮಾಡಬೇಕೆಂಬ ಉದ್ದೇಶಿತ ಯೋಜನೆಗಳನ್ನು ಟ್ರಸ್ಟ್ ಹೊಂದಿದೆ ಎಂದರು. ಪಾಲಿಕೆ ಸದಸ್ಯರಾದ ರಮೇಶ್ (ರಮಣಿ), ಛಾಯಾದೇವಿ, ಟ್ರಸ್ಟ್ ಗೌರವಾಧ್ಯಕ್ಷೆ ಶಾಂತಮ್ಮ, ಅಧ್ಯಕ್ಷ ಪುಟ್ಟಸ್ವಾಮಾಚಾರ್, ಸಂಘಟನಾ ಕಾರ್ಯದರ್ಶಿಗಳಾದ ಮುಳ್ಳೂರು ರಾಮಲಿಂಗಾಚಾರ್, ಸತೀಶ್ ಆಯರಹಳ್ಳಿ ಮತ್ತಿತರರು ಹಾಜರಿದ್ದರು.

ಉಚಿತ ತಪಾಸಣೆ, ವಿಶೇಷ ಚಿಕಿತ್ಸಾ ಶಿಬಿರ

ಮೈಸೂರು,ಜ.7– ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ವತಿಯಿಂದ ಹೊರರೋಗಿ ಪಂಚಕರ್ಮ ವಿಭಾಗದಲ್ಲಿ (ರೂಮ್ ನಂಬರ್–14) ಜನವರಿ ತಿಂಗಳ ಪ್ರತೀ ಸೋಮವಾರ ಮತ್ತು ಮಂಗಳವಾರದಂದು "Pre-Diabetes and Borderline Diabetes" ತೊಂದರೆಗಳಿಗೆ ಉಚಿತ ತಪಾಸಣಾ ಮತ್ತು ವಿಶೇಷ ಚಿಕಿತ್ಸಾ ಶಿಬಿರವನ್ನು ನಡೆಸಲಾಗುತ್ತಿದೆ. ಶಿಬಿರದಲ್ಲಿ ಉಚಿತ ಆಯುರ್ವೇದ ಔಷಧಿಗಳನ್ನು ವಿತರಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ಪಂಚಕರ್ಮ ವಿಭಾಗದ ಸ್ನಾತಕೋತ್ತರ ವಿದ್ಯಾರ್ಥಿಯಾದ ಡಾ.ಮಾನಸ ಶೆಟ್ಟಿ (ದೂ.ಸಂ: 8867851004) ಅವರನ್ನು ಬೆಳಗ್ಗೆ 9 ರಿಂದ ಸಂಜೆ 4 ಗಂಟೆಯವರೆಗೆ ಸಂಪರ್ಕಿಸಬಹುದು ಎಂದು ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾ ವಿದ್ಯಾಲಯದ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ



ವಿ.ವೀರಪ್ಪ

ಮೈಸೂರು, ಜ.7–ಮೈಸೂರು ಕುವೆಂಪುನಗರ ನಿವಾಸಿ ವಿ.ವೀರಪ್ಪ (72) ಅವರು ಖಾಸಗಿ ಆಸ್ಪತ್ರೆಯಲ್ಲಿ ಶನಿವಾರ ನಿಧನರಾದರು. ಮೃತರು ಪತ್ನಿ, ಪತ್ರಿಕಾ ಏಜೆಂಟ್ ರೋಹಿತ್ ಸೇರಿದಂತೆ ಮೂವರು ಪುತ್ರರು, ಅಪಾರ ಬಂಧು ವರ್ಗ, ಸ್ನೇಹಿತರ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಶನಿವಾರ ಸಂಜೆ ವಿಶ್ವೇಶ್ವರನಗರದ ಆದಿ ಕರ್ನಾಟಕ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ರಾಮಮ್ಮ

ಶ್ರೀರಂಗಪಟ್ಟಣ ಹೆಬ್ಬಾಡಿಹುಂಡಿ ಗ್ರಾಮ ನಿವಾಸಿ ರಾಮಮ್ಮ(85) ಅವರು ನಿನ್ನೆ (ಶುಕ್ರವಾರ) ಸಂಜೆ ಗ್ರಾಮದ ತಮ್ಮ ನಿವಾಸದಲ್ಲಿ ನಿಧನರಾದರು. ಮೃತರು ಶ್ರೀರಂಗಪಟ್ಟಣ ಎಪಿಎಂಸಿ ಸದಸ್ಯರಾದ ಕೆ.ರಾಮೇಗೌಡ(ಬಾಳೆಮಂಡಿ) ಸೇರಿದಂತೆ ಮಕ್ಕಳು, ಅಳಿಯಂದಿರು, ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ ಹೆಬ್ಬಾಡಿಹುಂಡಿ ಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ಪ್ರೌಢಶಾಲಾ ಶಿಕ್ಷಕರ ನೇಮಕಕ್ಕೆ ಅಧಿಸೂಚನೆ

ನಡೆಯಲಿದೆ. ರಾಜ್ಯದಲ್ಲಿ ಹೊಸ ಶಿಕ್ಷಣ ನೀತಿ (ಎನ್‌ಇಪಿ) ಇನ್ನೂ ಜಾರಿಯಾಗಿಲ್ಲ. ರಾಜ್ಯದ 300ರಿಂದ 400 ಆಯ್ದ ಶಾಲೆಗಳಲ್ಲಿ ಜನವರಿ 26ರಿಂದ ಜಾರಿಗೊಳಿಸಲು ಯೋಜಿಸಿದ್ದೇವೆ. ಅದಕ್ಕೆ ಅಗತ್ಯವಿರುವ ಪಠ್ಯಕ್ರಮ ಕೂಡ ರೂಪುಗೊಂಡಿದೆ. ಎನ್‌ಇಪಿ ಪಠ್ಯ ಆಧಾರಿತ ಅಲ್ಲ. ಚಟುವಟಿಕೆ ಆಧಾರಿತ ಶಿಕ್ಷಣ. ಅಲ್ಲಿ ಬಹಳ ಪುಸ್ತಕಗಳು ಇರುತ್ತವೆ ಎಂದೇನೂ ನನಗೆ ಅನ್ನಿಸಿಲ್ಲ. ಪಠ್ಯಕ್ರಮಕ್ಕೆ ತಕ್ಕಂತೆ ಶಿಕ್ಷಕರಿಗೆ ತರಬೇತಿ ನೀಡಿ ಅವರನ್ನು ಸಜ್ಜುಗೊಳಿಸಲಾಗುವುದು ಎಂದು ಹೇಳಿದರು. 15 ಸಾವಿರ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ವಿಚಾರ ಹೈಕೋರ್ಟ್‌ನಲ್ಲಿದೆ. ನ್ಯಾಯಾಲಯದ ಅಂತಿಮ ಆದೇಶಕ್ಕೆ ಒಳಪಟ್ಟು ಷರತ್ತಿನ ಮೇರೆಗೆ ನೇಮಕಾತಿ ಆದೇಶ ನೀಡಿ ಎಂಬುದು ಆಯ್ಕೆಯಾದ ಅಭ್ಯರ್ಥಿಗಳ ಅಳಲು. ಅದು ಕೂಡ ಗಮನದಲ್ಲಿದೆ. ಜನವರಿ 18ಕ್ಕೆ ಈ ವಿಚಾರ ನ್ಯಾಯಾಲಯದಲ್ಲಿ ವಿಚಾರಣೆಗೆ ಬರಲಿದೆ. ಅಲ್ಲಿನ ಪ್ರಕ್ರಿಯೆ ನೋಡಿಕೊಂಡು ಮುಂದಿನ ತೀರ್ಮಾನ ಮಾಡಲಾಗುವುದು ಎಂದು ಪ್ರಶ್ನೆಯೊಂದಕ್ಕೆ ನಾಗೇಶ್ ಪ್ರತಿಕ್ರಿಯಿಸಿದ್ದಾರೆ.

ಮೋದಿ ವರ್ಚಸ್ಸೇ ಸ್ಟ್ರಾಂಗ್ ಎನರ್ಜಿ

ಯೋಗಿ ಆದಿತ್ಯನಾಥ ಅವರ ನೇತೃತ್ವದಲ್ಲೇ ಚುನಾವಣೆ ಎದುರಿಸಲು ಮುಂದಾಗಿದೆ. ವಿಧಾನಸಭಾ ಚುನಾವಣೆ ಸಮೀಪವಾಗುತ್ತಿದ್ದಂತೆ ಮೋದಿ ಅವರು ಈಗಾಗಲೇ ಕರ್ನಾಟಕಕ್ಕೆ ಮೂರು ಬಾರಿ ಪ್ರವಾಸ ಕೈಗೊಂಡಿದ್ದಾರೆ. ಈಗ ಮತ್ತೆ ಜನವರಿ 12 ರಂದು ಹುಬ್ಬಳ್ಳಿಯಲ್ಲಿ ನಡೆಯಲಿರುವ ಯುವಜನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಗಮಿಸುತ್ತಿದ್ದಾರೆ. ಚುನಾವಣಾ ವೇಳಾಪಟ್ಟಿ ಪ್ರಕಟಗೊಳ್ಳುವವರೆಗೂ ಕೇಂದ್ರ ಇಲ್ಲವೇ ರಾಜ್ಯ ಸರ್ಕಾರ ಒಂದಲ್ಲ ಒಂದು ಕಾರ್ಯಕ್ರಮವನ್ನು ರೂಪಿಸಿ, ಆ ಕಾರ್ಯಕ್ರಮಗಳಲ್ಲಿ ಪ್ರಧಾನಿ ಅವರನ್ನು ತೊಡಗಿಸಿಕೊಳ್ಳುವುದು.

ಇದೇ ಸಂದರ್ಭದಲ್ಲಿ ಸಾರ್ವಜನಿಕ ಸಭೆಗಳನ್ನುದ್ದೇಶಿಸಿ, ಭಾಷಣ ಮಾಡುವ ಮೂಲಕ ತಮ್ಮ ವರ್ಚಸ್ಸನ್ನು ಈ ಮೂಲಕ ಚುನಾವಣೆಗೆ ಬಳಕೆ ಮಾಡಿಕೊಳ್ಳುತ್ತಿದ್ದಾರೆ.

ಸ್ಯಾಂಟ್ರೋ ರವಿಯೊಂದಿಗೆ ಬಿಜೆಪಿ ನಾಯಕರ ವ್ಯವಹಾರ–ವಹಿವಾಟು

● ಕಾಂಗ್ರೆಸ್ ನಾಯಕರ ಆರೋಪ ● ಐಎಎಸ್, ಐಪಿಎಸ್ ಅಧಿಕಾರಿಗಳು ಮಾತ್ರವಲ್ಲ, ರಾಜಕಾರಣಿಗಳ ಕೈಗೊಂಬೆ ಮಾಡಿಕೊಂಡಿದ್ದ ಸ್ಯಾಂಟ್ರೋ ರವಿ

ಮೈಸೂರು, ಜ.7(ಎಂಟಿವೈ)– ವೇಶ್ಯಾವಾಟಿಕೆ ದಂಧೆಯ ಪ್ರಮುಖ ಆರೋಪಿ ಸ್ಯಾಂಟ್ರೋ ರವಿಯೊಂದಿಗೆ ಬಿಜೆಪಿ ನಾಯಕರು ನೇರವಾಗಿ ವ್ಯವಹಾರ–ವಹಿವಾಟು ನಡೆಸಿರುವುದು ಜಗಜ್ಜಾಹೀರಾಗಿದೆ ಎಂದು ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಆರೋಪಿಸಿದ್ದಾರೆ.

ಮೈಸೂರಲ್ಲಿ ಶನಿವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಸ್ಯಾಂಟ್ರೋ ರವಿ ಒಂದಲ್ಲಾ ಒಂದು ರೀತಿ ಬಿಜೆಪಿ ನಾಯಕರು, ಸಚಿವರೊಂದಿಗೆ ಒಡನಾಟ ಹಾಗೂ ಸಂಬಂಧ ಇಟ್ಟುಕೊಂಡಿರುವುದು ಬಹಿರಂಗವಾಗಿದೆ. ಅದನ್ನು ಮುಚ್ಚಿಕೊಳ್ಳಲು ಬೇರೆ ಕಥೆ ಕಟ್ಟಲಾರಂಭಿಸಿದ್ದಾರೆ. ಬೇರೆ, ಬೇರೆ ರೀತಿಯಲ್ಲಿ ವ್ಯವಹಾರ ನಡೆಸಿದ್ದಾರೆ. ನೇರವಾಗಿ ಸಂಪರ್ಕವನ್ನಿಟ್ಟುಕೊಂಡಿರುವುದು ಎಲ್ಲರಿಗೂ ತಿಳಿದಿದೆ. ಬಿಜೆಪಿ ನಾಯಕರು ಸ್ಯಾಂಟ್ರೋ ರವಿಯೊಂದಿಗೆ ಇರುವ ಫೋಟೋ ಹಾಗೂ ವಿಡಿಯೋ ವೈರಲ್ ಆಗಿದೆ. ಇಂತಹ ಸಂದರ್ಭದಲ್ಲೂ ಬಿಜೆಪಿ ನಾಯಕರು ನಮಗೂ ಆತನಿಗೂ ಸಂಬಂಧವಿಲ್ಲ ಎಂದರೆ ಹೇಗೆ ಎಂದರು.

ಸ್ಯಾಂಟ್ರೋ ರವಿ ಕೇವಲ ಐಎಎಸ್, ಐಪಿಎಸ್ ಅಧಿಕಾರಿಗಳು ಮಾತ್ರವಲ್ಲದೆ ರಾಜಕಾರಣಿಗಳನ್ನು ದುರ್ಬಳಕೆ ಮಾಡಿಕೊಂಡಿರುವುದು ತಿಳಿದು ಬಂದಿದೆ. ಬಾಂಬೆ ಟೀಮ್ ಜೊತೆ ಸ್ಯಾಂಟ್ರೋ ರವಿ ಹೆಸರು ತಳುಕು ಹಾಕಿಕೊಂಡಿದೆ. ಈ ಸಂಬಂಧ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಅವರು ದಾಖಲೆ ಬಿಡುಗಡೆ ಮಾಡುವುದಾಗಿ ಹೇಳಿದ್ದಾರೆ. ಕಾಂಗ್ರೆಸ್ ದಾಖಲೆ ಬಿಡುಗಡೆ ಮಾಡಲು ಮುಂದಾದರೆ ರಾಜಕೀಯ ಉದ್ದೇಶದಿಂದ ಮಾಡುತ್ತಿದ್ದಾರೆ ಎಂದು ಆರೋಪಿಸುತ್ತಿದ್ದರು. ಈ ಹಿನ್ನೆಲೆಯಲ್ಲಿ ಸ್ಯಾಂಟ್ರೋ ರವಿ ಪ್ರಕರಣದ ಬಗ್ಗೆ ಹೋರಾಟ ಮುಂದುವರೆಸಲು ಕಾಂಗ್ರೆಸ್ ನಿರ್ಧರಿಸಿದೆ ಎಂದು ತಿಳಿಸಿದರು.

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಮಾತನಾಡಿ, ಸ್ಯಾಂಟ್ರೋ ರವಿ ಬಿಜೆಪಿಯ ಪ್ರಾಡಕ್ಟ್, ಡಿವೈಎಸ್ಪಿಗೆ ಧಮ್ಕಿ ಹಾಕಿರುವ ಆಡಿಯೋ ವೈರಲ್ ಆಗಿದೆ. ಅದರಲ್ಲಿ ಆತನಿಗೆ ಎಷ್ಟು ಪ್ರಭಾವವಿದೆ ಎಂದು ತಿಳಿದು ಬರುತ್ತದೆ. ಸಂತ್ರಸ್ತ ಮಹಿಳೆ ನೀಡಿರುವ ದೂರು ಇದೀಗ ಸ್ಯಾಂಟ್ರೋ ರವಿಯ ಕರಾಳ ಮುಖ ಬಹಿರಂಗಗೊಂಡಿದೆ. ರಾಜ್ಯ ಸರ್ಕಾರದ 13 ಜನ ಮಂತ್ರಿಗಳು ಸೆಕ್ಸ್ ಸಿಡಿಗೆ ಸಂಬಂಧಿಸಿದಂತೆ ತಡೆಯಾಜ್ಞೆ ತಂದಿದ್ದಾರೆ. ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ ಇದರ ಬಗ್ಗೆ ಹೇಳಿಕೆ ನೀಡಿದ್ದಾರೆ. ಅಲ್ಲದೆ, ಕೆಲವು ದಾಖಲೆಯೊಂದಿಗೆ ಆರೋಪ ಮಾಡಿದ್ದಾರೆ ಎಂದರು.

ಬಿಜೆಪಿಗರು ಪ್ರತಿದಿನ ಸುಳ್ಳು ಹೇಳಿಕೊಂಡು ತಿರುಗಾಡುವ ಮೂಲಕ ಜನರನ್ನು ದಿಕ್ಕು ತಪ್ಪಿಸುತ್ತಿದ್ದಾರೆ. 60 ರೌಡಿ ಶೀಟರ್‌ಗಳನ್ನು ಪಕ್ಷಕ್ಕೆ ಸೇರಿಸಿಕೊಳ್ಳಲು ಬಿಜೆಪಿ ಮುಂದಾಗಿದೆ. ಚುನಾವಣೆ ಸಮೀಪಿಸುತ್ತಿದ್ದಂತೆ ಗೊಂದಲ ಸೃಷ್ಟಿಸಿ ಅಶಾಂತಿ ವಾತಾವರಣ ನಿರ್ಮಿಸಲು ಸಂಸದ ಪ್ರತಾಪ ಸಿಂಹ, ಸಿ.ಟಿ.ರವಿ, ನವೀನ್‌ಕುಮಾರ್ ಕಟೀಲ್ ಅವರನ್ನು ತರಬೇತಿ ನೀಡಿ ಸಜ್ಜುಗೊಳಿಸಲಾಗಿದೆ. ಸುಳ್ಳು ಹೇಳಿ, ರಾಜಕೀಯ ನೈತಿಕತೆ ಬದಿಗೊತ್ತಿ ಮಾತನಾಡುವ ಮೂಲಕ ಕೆರಳಿಸುವ ಸಂಚಿನಲ್ಲಿ ತೊಡಗಿದ್ದಾರೆ ಎಂದು ಆರೋಪಿಸಿದರು. ಮೈಸೂರು–ಬೆಂಗಳೂರು ದಶಪಥ ಹೈವೆ ಕಾಮಗಾರಿಯಲ್ಲಿ ಕೇಂದ್ರದ ಮಾಜಿ ಸಚಿವ ಆಸ್ಕರ್ ಫರ್ನಾಂಡಿಸ್, ಮಾಜಿ ಸಿಎಂ ಸಿದ್ದರಾಮಯ್ಯ, ಮಾಜಿ ಸಚಿವ ಡಾ.ಹೆಚ್.ಸಿ.ಮಹಾದೇವಪ್ಪ ಅವರ ಶ್ರಮವೂ ಇದೆ. ಬಿಜೆಪಿ ಸರ್ಕಾರ ಆ ಯೋಜನೆಯನ್ನು ಅನುಷ್ಠಾನಗೊಳಿಸಿರಬಹುದು. ಆದರೆ, ಕಾಂಗ್ರೆಸ್ ಕೊಡುಗೆಯೂ ಇದೆ. ಈ ರಸ್ತೆಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರಿಡಲು ನಮ್ಮ ಸಹಮತವಿದೆ ಎಂದರು.

ಹೊಲಿಗೆ ಯಂತ್ರ ವಿತರಣಾ ಯೋಜನೆಗೆ ಅರ್ಜಿ ಆಹ್ವಾನ

ಮೈಸೂರು, ಜ.7– ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ 2022–23ನೇ ಸಾಲಿನಲ್ಲಿ ಸ್ವಾವಲಂಬಿ ಯೋಜನೆಯಲ್ಲಿ ಮಹಿಳೆಯರಿಗೆ ಹೊಲಿಗೆ ಯಂತ್ರಗಳನ್ನು ವಿತರಿಸಲು ಸೇವಾ ಸಿಂಧು ಪೋರ್ಟಲ್ ಮುಖಾಂತರ ಆನ್‌ಲೈನ್ ಅರ್ಜಿ ಆಹ್ವಾನಿಸಲಾಗಿದೆ. ಯೋಜನೆಯಲ್ಲಿ ಸೌಲಭ್ಯ ಪಡೆಯಬಯಸುವವರು ಹಿಂದುಳಿದ ವರ್ಗಗಳ ಪ್ರವರ್ಗ–1, 2ಎ, 3ಎ ಮತ್ತು 3ಬಿಗೆ ಸೇರಿದವರಾಗಿರಬೇಕು. (ವಿಶ್ವಕರ್ಮ, ಸವಿತಾ ಸಮಾಜ, ಉಪ್ಪಾರ, ಮಡಿವಾಳ, ಅಂಬಿಗ, ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯ, ಒಕ್ಕಲಿಗ, ಲಿಂಗಾಯಿತ, ಕಾಡುಗೊಲ್ಲ, ಹಟ್ಟಿಗೊಲ್ಲ, ಮರಾಠ ಮತ್ತು ಇದರ ಸಮುದಾಯಗಳು ಹೊರತುಪಡಿಸಿ) ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ಪ್ರದೇಶದವರಿಗೆ ರೂ.98,000/–ಗಳು ಪಟ್ಟಣ ಪ್ರದೇಶದವರಿಗೆ ರೂ.1,20,000/–ಗಳ ಒಳಗಿರಬೇಕು. ಅರ್ಜಿದಾರರ ವಯಸ್ಸು 18 ರಿಂದ 55 ವರ್ಷಗಳ ಮಿತಿಯಲ್ಲಿರಬೇಕು. ಮಾಹಿತಿಗಾಗಿ www.dbcdc.karnataka.gov.in, ಸಹಾಯವಾಣಿ ಸಂಖ್ಯೆ: 080–22374832, 8050770004, 7090400100, 7090400900, ದೂಸಂಖ್ಯೆ: 0821–2341194 ಸಂಪರ್ಕಿಸಬಹುದಾಗಿದೆ.



ಹುಟ್ಟುಹಬ್ಬ ಆಚರಿಸಿಕೊಂಡ ನಂಜನಗೂಡು ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕ ಬಿ.ಹರ್ಷವರ್ಧನ್ ಅವರನ್ನು ಭೀಮಸದನದ ಅವರ ನಿವಾಸದಲ್ಲಿ ಅಭಿನಂದಿಸಲಾಯಿತು. ಈ ವೇಳೆ ಬಿಜೆಪಿ ಮುಖಂಡರಾದ ಮಂಜುನಾಥ್, ವೆಂಕಟೇಶ್, ಸಂತೋಷ್, ದೀಪಕ್, ಕುಮಾರ್, ಭರತ್ ಕೆಂಡ, ನವೀನ್, ನಿಕಿಲ್ ಇನ್ನಿತರರು ಆತ್ಮೀಯವಾಗಿ ಅಭಿನಂದಿಸಿದರು.

ಸಾಹಿತ್ಯ ಸಮ್ಮೇಳನಕ್ಕೆ ಬಂದ ಮಂಡ್ಯ ಶಿಕ್ಷಕ ಹೃದಯಾಘಾತದಿಂದ ಸಾವು



ಹಾವೇರಿ: ಹಾವೇರಿಯಲ್ಲಿ ನಡೆಯುತ್ತಿರುವ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಂಡ್ಯ ಶಿಕ್ಷಕರೊಬ್ಬರು ಹೃದಯಾಘಾತದಿಂದ ನಿಧನರಾಗಿದ್ದಾರೆ. ಸಾಹಿತ್ಯ ಸಮ್ಮೇಳನಕ್ಕೆ ಜನವರಿ 5ರಂದು ಹಾವೇರಿಗೆ ಬಂದಿದ್ದ 34 ವರ್ಷದ ಶಿಕ್ಷಕ ಸಂಗನಗೌಡ ಮೃತಪಟ್ಟವರು. ರಾತ್ರಿ 12 ಗಂಟೆಗೆ ಹೃದಯಾಘಾತವಾಗಿದೆ. ಅವರನ್ನು ಕೂಡಲೇ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಿಸದೆ ಅವರು ಮೃತಪಟ್ಟಿದ್ದಾರೆ. ಶಿಕ್ಷಕ ಸಂಗನಗೌಡ ಅವರು ಮಂಡ್ಯ ಜಿಲ್ಲೆಯ ಕೆ.ಆರ್ ಪೇಟೆಯ ಮತ್ತಿಕೇರಿ ಶಾಲೆಯಲ್ಲಿ ಶಿಕ್ಷಕರಾಗಿದ್ದಾರೆ. ಅವರಿಗೆ ಹಾವೇರಿಯ ಅಶ್ವಿನಿನಗರದ ಗೆಳೆಯರ ಬಳಗ ಶಾಲೆಯಲ್ಲಿ ವಾಸ್ತವ್ಯ ಕಲ್ಪಿಸಲಾಗಿತ್ತು. ಅಲ್ಲೇ ಹೃದಯಾಘಾತ ಸಂಭವಿಸಿದೆ.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು,ಜ.7–ಅಶೋಕಪುರಂ ರೈಲ್ವೆ ನಿಲ್ದಾಣದಲ್ಲಿನ ಕಂಬಗಳನ್ನು ತೆರವುಗೊಳಿಸುವ ಕಾಮಗಾರಿ ಕೈಗೊಂಡಿರುವುದರಿಂದ ಜ.9ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 4ರವರೆಗೆ ಜಯನಗರ 1ನೇ ಕ್ರಾಸ್‌ನಿಂದ 20ನೇ ಕ್ರಾಸ್‌ವರೆಗೆ, ಜಯನಗರ ಕೆ.ಬ್ಲಾಕ್, ಚೆನ್ನಗಿರಿಕೊಪ್ಪಲು, ಚಿಕ್ಕಹರದನಹಳ್ಳಿ, ಶಿವರಾಂ ಬಡಾವಣೆ, ಶ್ರೀರಾಂಪುರ 2ನೇ ಹಂತ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ವಿ.ವಿ.ಮೊಹಲ್ಲಾ ವಿಭಾಗದ, ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮೈಸೂರು ಜಿಲ್ಲಾ ಮತ್ತು ನಗರ ಗಾಣಿಗರ ಜನಾಂಗ ಮಠದ ಭಕ್ತಾದಿಗಳಿಂದ ಶ್ರೀ ಕ್ಷೇತ್ರ ತೈಲೇಶ್ವರ ಗಾಣಿಗರ ಮಹಾಸಂಸ್ಥಾನ ಮಠದ 2023ನೇ ಸಾಲಿನ ಕ್ಯಾಲೆಂಡರ್ ಅನ್ನು ಶ್ರೀ ಪೂರ್ಣಾನಂದಪುರಿ ಸ್ವಾಮೀಜಿ ಬಿಡುಗಡೆ ಮಾಡಿದರು. ಈ ವೇಳೆ ಅಖಿಲ ಕರ್ನಾಟಕ ಗಾಣಿಗರ ಸಂಘದ ಅಧ್ಯಕ್ಷ ರಾಜಶೇಖರ್, ಉಪಾಧ್ಯಕ್ಷರಾದ ರಂಗರಾಜು, ನರಸಿಂಹಯ್ಯ, ಜಂಟಿ ಕಾರ್ಯದರ್ಶಿ ಚನ್ನಕೇಶವಶೆಟ್ಟಿ, ವಿಜಯಕುಮಾರ್, ಮುಖಂಡರಾದ ವೆಂಕಟೇಶ್, ಮಾದಶೆಟ್ಟಿ, ಸುಬ್ರಹ್ಮಣ್ಯ, ಮಂಜುನಾಥ್, ಮುತ್ತುರಾಜು, ಮಂಜುನಾಥ್, ಭಾಸ್ಕರ್, ಲೋಕೇಶ್, ಮಹದೇವಶೆಟ್ಟಿ ಹಾಜರಿದ್ದರು.

ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

ಮೈಸೂರು, ಜ.7– ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ 2022–23ನೇ ಸಾಲಿನ ಉದ್ಯಮಶೀಲತಾ ಯೋಜನೆ (ದ್ವಿ ಚಕ್ರ ಹಾಗೂ ತ್ರಿ ಚಕ್ರ ಸರಕು ಸಾಗಾಣಿಕೆ ವಾಹನ) ಮತ್ತು ನೇರಸಾಲ ಯೋಜನೆ, ಈ ಎರಡೂ ಯೋಜನೆಯ ಅರ್ಜಿ ಸಲ್ಲಿಸುವ ಅವಧಿಯನ್ನು ಜ.16ರವರೆಗೆ ವಿಸ್ತರಿಸಲಾಗಿದೆ ಎಂದು ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಅರುಣಕುಮಾರಿಗೆ ಪಿಹೆಚ್.ಡಿ ಪದವಿ



ಡಾ. ಆರ್.ಎನ್.ದಿನೇಶ್ ಅವರ ಮಾರ್ಗದರ್ಶನದಲ್ಲಿ ಎಸ್.ಕೆ.ಅರುಣಕುಮಾರಿ ರಾಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧಿಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಸಾವಿತ್ರಿಬಾಯಿ ಫುಲೆ ಅವರ ನಿಸ್ವಾರ್ಥ ಸೇವೆ ಶಿಕ್ಷಕರಿಗೆ ಮಾದರಿ

ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರ ರಾಜೇ ಅರಸ್



ಮೈಸೂರು,ಜ.7(ಪಿಎಂ)– ಸಮಾಜದಲ್ಲಿ ಉನ್ನತ ಬದಲಾವಣೆ ತರುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದಾಗಿದ್ದು, ಈ ನಿಟ್ಟಿನಲ್ಲಿ ಸಾವಿತ್ರಿಬಾಯಿ ಫುಲೆ ಅವರ ನಿಸ್ವಾರ್ಥ ಸೇವೆ ಶಿಕ್ಷಕರಿಗೆ ಮಾದರಿ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರ ರಾಜೇ ಅರಸ್ ಹೇಳಿದರು.

ತಿ.ನರಸೀಪುರ ಪಟ್ಟಣದ ಗುರುಭವನದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ವತಿಯಿಂದ ಇತ್ತೀಚೆಗೆ ಹಮ್ಮಿಕೊಂಡಿದ್ದ ಸಾವಿತ್ರಿಬಾಯಿ ಫುಲೆ ಅವರ ಜಯಂತಿ, ಕ್ಯಾಲೆಂಡರ್ ಬಿಡುಗಡೆ ಮತ್ತು ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು. ಜಾತೀಯತೆ ತಾಂಡವವಾಡುತ್ತಿದ್ದ ಕಾಲದಲ್ಲೇ ಸಾವಿತ್ರಿಬಾಯಿ ಫುಲೆಯವರು ಎಲ್ಲಾ ವರ್ಗದ ಜನತೆಗೆ ಅಕ್ಷರ ಜ್ಞಾನ ನೀಡಿದರು. ಹಲವು ಅಡೆತಡೆಗಳ ನಡುವೆಯೂ ಅವರು ಅಕ್ಷರ ಕಲಿಸಿದರು. ಶಿಕ್ಷಣದಿಂದ ವಂಚಿತವಾಗಿದ್ದ ಜನಸಮುದಾಯದ ಶ್ರೇಯೋಭಿವೃದ್ಧಿಗೆ ಅವರು ನೀಡಿದ ಅಪಾರ ಕೊಡುಗೆ ನಮಗೆ ಮಾದರಿಯಾಗಬೇಕು. ಅವರಂತೆ ಶಿಕ್ಷಕರು ಸಮಾಜದ ಪರಿವರ್ತನೆ ಮತ್ತು ಮಕ್ಕಳ ಏಳಿಗೆಗಾಗಿ ಶ್ರಮಿಸಬೇಕಿದೆ ಎಂದು ತಿಳಿಸಿದರು.

ಮೈಸೂರು ವಿಭಾಗದ ಪ್ರಾದೇಶಿಕ ಸಹಾಯಕ ಆಯುಕ್ತ ಪಿ.ಶಿವರಾಜು ಮಾತನಾಡಿ, ಎಷ್ಟೇ ಅಧಿಕಾರ ಪಡೆದರೂ ಶಿಕ್ಷಕ ವೃತ್ತಿಗೆ ಸಿಗುವ ಗೌರವ ಮತ್ತೊಂದಕ್ಕಿಲ್ಲ. ಅಕ್ಷರದ ಅವ್ವ ಸಾವಿತ್ರಿಬಾಯಿ ಫುಲೆಯವರ ನಿಸ್ವಾರ್ಥ ಸೇವೆಯನ್ನು ಸಮಾಜ ಅರಿತುಕೊಳ್ಳುವಂತಾಗಬೇಕು. ಜ್ಞಾನದಾತೆ ಸಾವಿತ್ರಿಬಾಯಿ ಫುಲೆಯವರು ದೇಶದ ಮೊದಲ ಶಿಕ್ಷಕಿಯಾಗಿ ಮಾಡಿದ ಸೇವೆ, ಸಾಧನೆ ಅತ್ಯಂತ ಶ್ರೇಷ್ಠ. ಅವರ ಆದರ್ಶದ ವ್ಯಕ್ತಿತ್ವ, ಚಿಂತನೆಯನ್ನು ಇಂದಿನ ಪೀಳಿಗೆ ಅನುಸರಿಸಬೇಕು ಎಂದು ಹೇಳಿದರು.

ವಿಧಾನಪರಿಷತ್ ಮಾಜಿ ಸದಸ್ಯ ಆರ್. ಧರ್ಮಸೇನ ಮಾತನಾಡಿದರು. ಇದೇ ವೇಳೆ ಪಿ.ಶಿವರಾಜು ಹಾಗೂ ಪಿರಿಯಾಪಟ್ಟಣ ಪುರಸಭಾ ಮುಖ್ಯಾಧಿಕಾರಿ ಬಿ.ಮಹೇಂದ್ರ ಅವರನ್ನು ಸನ್ಮಾನಿಸಲಾಯಿತು. ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ (ಅಭಿವೃದ್ಧಿ) ನಾಗರಾಜಯ್ಯ, ತಹಸೀಲ್ದಾರ್ ಸಿ.ಜಿ.ಗೀತಾ, ಕ್ಷೇತ್ರ ಶಿಕ್ಷಣಾಧಿಕಾರಿ ಮರಿಸ್ವಾಮಿ, ಕ್ಷೇತ್ರ ಸಂಪನ್ಮೂಲ ಸಮನ್ವಯ ಅಧಿಕಾರಿ ನಾಗೇಶ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಹೆಚ್.ಡಿ. ಮಾದಪ್ಪ ಮತ್ತಿತರರು ಹಾಜರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ಅಭಯದಾಂಯಕ ಶ್ರೀ ಅಂಯ್ಯಪ್ಪ ಸ್ವಾಮಿ ದೇವಸ್ಥಾನಂ :** ಶ್ರೀ ಅಭಯಾಂಜನೇಯ ದರ್ಶನಾ ಮಂಟಪಂ ಉದ್ಘಾಟನಾ ಸಮಾರಂಭ, ಸಾನ್ನಿಧ್ಯ: ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಉದ್ಘಾಟನೆ: ಮೈಸೂರು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಅಧ್ಯಕ್ಷತೆ: ಲಯನ್ ಡಾ.ಎಸ್. ವೆಂಕಟೇಶ್, ಉಪಸ್ಥಿತರು: ಎಂ.ಎಸ್. ಮುರಳೀಧರ ಶಾಸ್ತ್ರಿ, ಉಪಮೇಯರ್ ರೂಪ, ಪಾಲಿಕೆ ಸದಸ್ಯೆ ಅಶ್ವಿನಿ ಅನಂತು, ಜಿ.ಸಿ.ಪುಟ್ಟಸ್ವಾಮಿ, ಡಿ.ಗೋಪಾಲ್, ಸ್ಥಳ:ದೇವಸ್ಥಾನದ ಆವರಣ, ರಾಘವೇಂದ್ರನಗರ, ಬೆಳಗ್ಗೆ 11ಕ್ಕೆ.

■ **ಎಸ್‌ಡಿಎಂ–ಎಂಎಂಕೆ ಮಹಿಳಾ ಮಹಾವಿದ್ಯಾಲಯ:** ಸ್ವರ್ಣಾಮೃತ ಪ್ರಾಶನ, ಸ್ಥಳ: ಮಹಾವಿದ್ಯಾಲಯ, ಕೃಷ್ಣಮೂರ್ತಿಪುರಂ, ಬೆಳಗ್ಗೆ 7 ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಸುವರ್ಣಪ್ರಾಶನ ಅಭಿಯಾನ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 8ರಿಂದ.


■ **ಪ್ರಕೃತಿ ಆಯುರ್ವೇದ ಪ್ರತಿಷ್ಠಾನ:** ತಜ್ಞ ಆಯುರ್ವೇದ ಮನೋವೈದ್ಯರಿಂದ ತಪಾಸಣಾ ಶಿಬಿರ, ಸ್ಥಳ: ಶ್ರೀರಂಗ ಆಯುರ್ವೇದ ಚಿಕಿತ್ಸಾ ಮಂದಿರ, ನೇತಾಜಿ ಸರ್ಕಲ್ ಹತ್ತಿರ, ಬೆಳಗ್ಗೆ 9.30 ರಿಂದ.

■ **ನಮೋ ಯೋಗಭವನ:** ಉಚಿತ ಆರೋಗ್ಯ ತಪಾಸಣೆ ಶಿಬಿರ, ಅಧ್ಯಕ್ಷತೆ: ಕೀರ್ತಿಕುಮಾರ್ ಶೆಟ್ಟಿ, ಪ್ರಾಸ್ತಾವಿಕ ನುಡಿ: ಶ್ರೀ ಯೋಗ ಪ್ರಕಾಶ, ಮುಖ್ಯ ಅತಿಥಿಗಳು: ಡಾ.ಚಂದ್ರಶೇಖರ್, ಬಿ.ವಿ.ಮಂಜುನಾಥ್, ಪ್ರದೀಪ್ ಶೆಟ್ಟಿ, ಸ್ಥಳ: ನಮೋ ಯೋಗ ಭವನ ಸಭಾಂಗಣ, ರಾಮಾನುಜ ರಸ್ತೆ ಬೆಳಗ್ಗೆ 10ಕ್ಕೆ

■ **ಹಾಸನ ಜಿಲ್ಲಾ ಬಳಗ:** ಪ್ರತಿಭಾ ಪುರಸ್ಕಾರ, ಸರ್ವ ಸದಸ್ಯರ ಸಭೆ, ಉದ್ಘಾಟನೆ: ಶಾಸಕ ಜಿ.ಟಿ.ದೇವೇಗೌಡ, ಕ್ಯಾಲೆಂಡರ್ ಬಿಡುಗಡೆ: ಶಾಸಕ ಎಸ್.ಎ.ರಾಮದಾಸ್, ಪ್ರಶಸ್ತಿ ಪ್ರದಾನ: ಶಾಸಕ ಸಿ.ಎನ್.ಮಂಜೇಗೌಡ, ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಮುಖ್ಯ ಅತಿಥಿಗಳು: ಸಿ.ಜಿ.ಗಂಗಾಧರ್, ಡಾ.ಮಂಜೇಗೌಡ ಅಧ್ಯಕ್ಷತೆ: ಬಳಗದ ಅಧ್ಯಕ್ಷೆ ಪಿ.ಶಾರದಮ್ಮ, ಸ್ಥಳ: ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಬೆಳಗ್ಗೆ 10ಕ್ಕೆ

■ **ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ, ದಕ್ಷಿಣ ಕನ್ನಡ ಮತ್ತು ಕರಾವಳಿ ಜಿಲ್ಲಾ ಸಂಘಗಳ ಒಕ್ಕೂಟ, ಯೋಗನರಸಿಂಹಸ್ವಾಮಿ ದೇವಸ್ಥಾನ:** ಉಚಿತ ಆಯುರ್ವೇದ ತಪಾಸಣಾ ಶಿಬಿರ, ಸಾನ್ನಿಧ್ಯ: ಪ್ರೊಭಾಷ್ಯಂ ಸ್ವಾಮೀಜಿ, ಉದ್ಘಾಟನೆ: ಶಾಸಕ ಎಲ್.ನಾಗೇಂದ್ರ, ಅತಿಥಿಗಳು: ಮೇಯರ್ ಶಿವಕುಮಾರ್, ಪಾಲಿಕೆ ಸದಸ್ಯ ಸುಬ್ಬಯ್ಯ, ಪತ್ರಕರ್ತರ ಸಂಘದ ಅಧ್ಯಕ್ಷ ರವಿಕುಮಾರ್, ಗ್ರೇಸಿಯನ್ ರೋಡ್ರಿಗಸ್, ನಾರಾಯಣಗೌಡ, ಯೋಗಾತ್ಮ ಶ್ರೀ ಹರಿ, ನಾರಾಯಣ ಹೆಗಡೆ, ಡಾ. ಲಕ್ಷ್ಮೀನಾರಾಯಣ ಶೆಣೈ, ರವೀಂದ್ರ ಗೋರೆ, ಸ್ಥಳ: ಯೋಗನರಸಿಂಹಸ್ವಾಮಿ ದೇವಸ್ಥಾನ, ಬೆಳಗ್ಗೆ 10 ರಿಂದ

■ **ಪ್ರೊ.ಕೆ.ವೆಂಕಟಗಿರಿಗೌಡ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಪರಿಷತ್, ಹನ್ಯಾಳು ಪ್ರಕಾಶನ:** ಆಲಕೆರೆ ಜೆ.ರಾಮಲಿಂಗೇಗೌಡ ಅವರು ರಚಿಸಿರುವ 'ಎಲ್ಲಮ್ಮ: ದಕ್ಷಿಣ ಭಾರತದ ದೇವತೆ' ಮತ್ತು 'ದೃಶ್ಯ–ಕಾವ್ಯ' ಲೋಕಾರ್ಪಣೆ ಸಮಾರಂಭ, ಕೃತಿ ಕುರಿತು ಮಾತನಾಡುವವರು: ಶ್ರೀಮತಿ ಲೋಲಾಕ್ಷಮ್ಮ ಕೆರೋಡಿ, ಕೃತಿ ಬಿಡುಗಡೆ : ವಿಶ್ರಾಂತ ಜಂಟಿ ಆಯುಕ್ತ ಎ.ಟಿ.ದಾಸೇಗೌಡ, ಅಧ್ಯಕ್ಷತೆ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ವಿಶ್ರಾಂತ ನಿರ್ದೇಶಕ ಡಾ. ಡಿ.ಕೆ. ರಾಜೇಂದ್ರ, ಸ್ಥಳ: ರೋಟರಿ ವೆಸ್ಟ್, ಸರಸ್ವತಿಪುರಂ, ಬೆಳಗ್ಗೆ 10.30ಕ್ಕೆ



ಇಂದಿನ ಪಂಚಾಂಗ

8.1.2023 ಭಾನುವಾರ, ಮಳೆ ನಕ್ಷತ್ರ: ಪೂಷಾ, 30.12.2022ರಿಂದ 10.01.2023 ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಪುಷ್ಯ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಮೈಸೂರು ಜಿಲ್ಲಾ ಗಾಣಿಗರ ಸಂಘ :** ಪ್ರತಿಭಾ ಪುರಸ್ಕಾರ, ಕ್ಯಾಲೆಂಡರ್ ಬಿಡುಗಡೆ, ಅಭಿನಂದನಾ ಸಮಾರಂಭ, ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಉಪಸ್ಥಿತರು: ಶಾಸಕರಾದ ಜಿ.ಟಿ. ದೇವೇಗೌಡ, ಸಾ.ರಾ.ಮಹೇಶ್, ಮಾಜಿ ಸಭಾಪತಿ ವಿ.ಆರ್.ಸುದರ್ಶನ್, ಮಾಜಿ ಮೇಯರ್ ಅನಂತು, ಕೌಟಿಲ್ಯ ರಘು, ಮಿರ್ಲೆ ಶ್ರೀನಿವಾಸಗೌಡ, ಎಂ.ಆರ್.ರಾಜಶೇಖರ್, ಬಿ.ವಿ.ನರಸಿಂಹಯ್ಯ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಎನ್.ಸಿ. ಉಮೇಶ್, ಸ್ಥಳ:ಶ್ರೀರಂಗಚಾರ್ಲು ಪುರಭವನ, ಬೆಳಗ್ಗೆ 10.30ಕ್ಕೆ

■ **ಭಾರತೀಯ ಸಾಂಸ್ಕೃತಿಕ ವಿಕಾಸ ವೇದಿಕೆ :** ಗಣೇಶ ಪುತ್ಥಳಿಯ ಸಮರ್ಪಣೆ ಸಾರ್ಥಕ ಸೇವಾಭೂಷಣ, ಸಾನ್ನಿಧ್ಯ: ಬಸವ ಧ್ಯಾನ ಕೇಂದ್ರದ ಶ್ರೀ ಮಾತೆ ಬಸವಾಂಜಲಿದೇವಿ, ಉದ್ಘಾಟನೆ: ಮೇಯರ್ ಶಿವಕುಮಾರ್, ಅಧ್ಯಕ್ಷತೆ: ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಉಪಸ್ಥಿತರು : ಮಾಜಿ ಸಚಿವ ಸಿ.ಹೆಚ್. ವಿಜಯಶಂಕರ್, ಸಾರ್ಥಕ ಸೇವಾಭೂಷಣ ಪ್ರಶಸ್ತಿ ಪುರಸ್ಕೃತರು: ಮುಡಾ ಅಧ್ಯಕ್ಷ ಯಶಸ್ವಿ ಸಿ.ಸೋಮಶೇಖರ್, ಕಾಂಗ್ರೆಸ್ ಮುಖಂಡ ಎನ್.ಎಂ. ನವೀನ್‌ಕುಮಾರ್, ಪ್ರಧಾನ ಪುರೋಹಿತ ಮಹೇಶ್, ಸ್ಥಳ: ವೀರಭದ್ರೇಶ್ವರ ದೇವಾಲಯ, ಬನುಮಯ್ಯ ರಸ್ತೆ, ಬೆಳಗ್ಗೆ 11ಕ್ಕೆ.

■ **ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ :** ಕಾಂ. ಕೆ. ವೆಂಕಟರಾಮಯ್ಯನವರ 10ನೇ ವರ್ಷದ ಸ್ಮರಣೆ, ಕಾಂ. ಹೆಚ್.ಆರ್. ಶೇಷಾದ್ರಿ ಮತ್ತು ಹೆಚ್.ಬಿ.ರಾಮಕೃಷ್ಣ ಅವರಿಗೆ ಅಭಿನಂದನಾ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಡಾ. ಸಿದ್ದನಗೌಡ ಪಾಟೀಲ್, ಎಐಟಿಯುಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ. ವಿಜಯ ಭಾಸ್ಕರ್, ಸ್ಥಳ: ಆಲಮ್ಮನವರ ಛತ್ರ, ಕುಂಚಿಟಿಗರ ಸಂಘದ ಆವರಣ, ಬೆಳಗ್ಗೆ 11.30ಕ್ಕೆ

■ **ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್, ಮೈಸೂರು ಜಿಲ್ಲಾ ಸಮಿತಿ :** ಕರ್ನಾಟಕದ ಅಭಿವೃದ್ಧಿಗೆ ಕೈಗಾರಿಕೆಗಳು ಮತ್ತು ದುಡಿಯುವ ಜನತೆಯ ಕೊಡುಗೆ ಕುರಿತು ವಿಚಾರ ಸಂಕಿರಣ, ಅಧ್ಯಕ್ಷತೆ : ಸಿಐಟಿಯು ಅಧ್ಯಕ್ಷ ಜಿ. ಜಯರಾಮ್, ಪ್ರಾಸ್ತಾವಿಕ ನುಡಿ : ಪ್ರಧಾನ ಕಾರ್ಯದರ್ಶಿ ಎನ್.ಕೆ. ಬಾಲಾಜಿರಾವ್, ವಿಚಾರ ಮಂಡನೆ : ಕಾಂ. ವಿ.ಜೆ.ಕೆ. ನಾಯರ್, ಜಂಟಿ ಕಾರ್ಮಿಕ ಆಯುಕ್ತ ಡಾ. ರವಿಕುಮಾರ್, ಅತಿಥಿಗಳು : ಹೆಚ್.ಎಸ್. ಸುನಂದಾ, ಸ್ಥಳ: ಮೈಸೂರು ಸಿಟಿ ಕೋ–ಆಪರೇಟಿವ್ ಹೌಸಿಂಗ್ ಸೊಸೈಟಿ ಸಭಾಂಗಣ, ಚಾಮರಾಜ ಜೋಡಿ ರಸ್ತೆ, ಬೆಳಗ್ಗೆ 11ಕ್ಕೆ.

■ **ಬಸವೇಶ್ವರ ಬಳಗ :** ಮಂಡ್ಯದ ಮಲ್ಲಮ್ಮ ಸಿದ್ದಲಿಂಗಯ್ಯ ಸ್ಮಾರಕ ದತ್ತಿ, ದೇವರಾಜು ಪಿ. ಚಿಕ್ಕಹಳ್ಳಿ ಅವರಿಂದ ಅಕ್ಕನ ವೈರಾಗ್ಯದ ವೈಶಿಷ್ಟ್ಯತೆ ಕುರಿತು ದತ್ತಿ ಉಪನ್ಯಾಸ, ಅಧ್ಯಕ್ಷತೆ : ಡಾ. ಸಿ. ಶರತ್ ಕುಮಾರ್, ಮುಖ್ಯ ಅತಿಥಿಗಳು : ಬಸವ ಬಳಗ ಗೌರವಾಧ್ಯಕ್ಷ ಕೆ.ಬಿ. ಪ್ರಭುಪ್ರಸಾದ್, ಮಾಜಿ ಮೇಯರ್ ಸುನಂದ ಪಾಲನೇತ್ರ, ಸ್ಥಳ: ಸತ್ಯಸಾಯಿ ಬಾಬಾ ಶಾಲೆ, ಮಹಾಜನ ಕಾಲೇಜು ಎದುರು, ಜಯಲಕ್ಷ್ಮಿಪುರಂ, ಬೆಳಗ್ಗೆ 11.30ಕ್ಕೆ

■ **ಕಲ್ಪವೃಕ್ಷ ಸಾಂಸ್ಕೃತಿಕ ಪರಿಷತ್:** ಕ್ರಿಕೆಟ್ ಪಂದ್ಯಾವಳಿ ಬಹುಮಾನ ವಿತರಣೆ, ಟ್ರೋಫಿ ವಿತರಣೆ: ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ನಗದು ಬಹುಮಾನ ವಿತರಣೆ: ಭಾರತಿ ಕನ್ವೆನ್ಷನ್ ಹಾಲ್ ಮಾಲೀಕ ಶಕ್ತಿ ಜೀವನ್, ಮುಖ್ಯ ಅತಿಥಿಗಳು: ಜಿ.ಬಿ.ಅಮರೇಶ್ ಶಾಸ್ತ್ರಿ, ಪ್ರದೀಪ್, ಎನ್.ಎಸ್. ನವೀನ, ಉಮೇಶ್, ಶ್ರೀಕಂಠಸ್ವಾಮಿ, ಸ್ಥಳ: ಶ್ರೀ ಪುಟ್ಟರಾಜ ಗವಾಯಿ ಕ್ರೀಡಾಂಗಣ, ಜೆ.ಪಿ.ನಗರ, ಮಧ್ಯಾಹ್ನ 3ಕ್ಕೆ.

■ **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ:** ವಿದುಷಿ ಬಿ.ಕೆ.ಸೀತಾಲಕ್ಷ್ಮಿ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ದೇವಸ್ಥಾನ ಆವರಣ, ಸಂಜೆ 6 ಗಂಟೆಗೆ.

■ **ಶ್ರೀರಾಮಕೃಷ್ಣ ಆಶ್ರಮ:** ಸ್ವಾಮಿ ಅಘಹರಾನಂದ ಅವರಿಂದ ಸ್ವಾಮಿ ಬ್ರಹ್ಮಾನಂದರೊಂದಿಗೆ ವಿವೇಕಾನಂದರು ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜೀ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಮಾಲಿನಿ ನೃತ್ಯಶಾಲೆ ಮತ್ತು ಸಾಂಸ್ಕೃತಿಕ ಕೇಂದ್ರ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ:** ಡಾ.ಮಾಲಿನಿ ಅವರಿಂದ ಹರಿಕಥೆ, ಅತಿಥಿಗಳು: ಮಣಿ ದೀಕ್ಷಿತ್, ಸ್ಥಳ: ಶ್ರೀ ರೇಣುಕಾದೇವಿ ಕರಗ ದೇವಸ್ಥಾನ ಸಭಾಂಗಣ, ಸಂಜೆ 6ಕ್ಕೆ

■ **ಶ್ರೀ ಮಹಾಜನ ಸಭಾ :** ಪ್ರವಚನ ಪ್ರವೀಣ ವಿದ್ವಾನ್ ಮುಡುಂಬೈ ರಾಮಾನುಜ ಶರ್ಮ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಕೃಷ್ಣಮೂರ್ತಿಪುರಂ, ಕಾಂತರಾಜ ಅರಸು ರಸ್ತೆ, ಸಂಜೆ 6.15ರಿಂದ.

■ **ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ, ಕೆ.ಆರ್. ವನಂ:** ಡಾ.ಎನ್.ಕೆ.ರಾಮಶೇಷನ್ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಡಾ.ಕಮಲಾ ರಾಮನ್ ಅವರ ಮಂದಿರ, ಅಂಬೇಡ್ಕರ್ ರಸ್ತೆ, ಸಂಜೆ 6.15 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–6.15 ಗೀತಾರಾಧನ, 6.35 ಬದುಕು ಮಣ್ಣಿನೊಂದಿಗೆ–ಬಾನುಲಿ ಸರಣಿ, ಲೇಖನ ಮತ್ತು ಪ್ರಸ್ತುತಿ–ಎ.ಪಿ.ಚಂದ್ರಶೇಖರ್, 6.45 ಅರಿವಿನ ಶಿಖರ, ಗಾಯನ– ನಿತಿನ್ ರಾಜಾರಾಂ ಶಾಸ್ತ್ರಿ, ಜಿ. ಪುಷ್ಪಲತಾ ಅಂಬಯ್ಯನುಲಿ ವ್ಯಾಖ್ಯಾನ–ಡಾ.ಮ.ರಾಮಕೃಷ್ಣ, 9.05 ಹಾವೇರಿಯಲ್ಲಿ ನಡೆಯುತ್ತಿರುವ 83ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ 2ನೇ ದಿನದ ಗೋಷ್ಠಿಗಳ ಬಾನುಲಿ ವರದಿ, 9.40 ನಮ್ಮ ಆರೋಗ್ಯ–ಆತಂಕ ಮತ್ತು ಬಾಯಿಯ ಆರೋಗ್ಯ ಕುರಿತು ಡಾ. ಸ್ಮಿತಾ ಜೆ.ಡಿ. ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ 'ಕಥೆಕೇಳು ಪುಟ್ಟಾ' ಪಂಚತಂತ್ರದ ಕಥೆ ಹೇಳುತ್ತಾರೆ ಬಿ.ಜಿ. ಕವಿತಾ, 10.30 ಮಕ್ಕಳ ಮಂಟಪ 'ಪ್ರತಿಭಾ ಪಲ್ಲವ' ಹಾಡುವ ಪ್ರತಿಭೆ ಅಭಿಜ್ವಲ್ ಎಂ.ಕೆ. ಪರಿಚಯ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ–ಡಾ.ಆರ್.ಎನ್.ಶ್ರೀಲತಾ, ಎಸ್. ಶಂಕರ್ 12.45 ಜನಪದ ಸಂಗೀತ –ಮಾದಮ್ಮ ಮತ್ತು ತಂಡ, 1.20 ಭಾವಗೀತೆ–ಎನ್.ಹೇಮಾ, 3.00 ಸ್ವರಾಜ್– ಭಾರತದ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರ ಗಾಥೆ, 3.45 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ–ಹಿಡಿಂಬಾ ವಿವಾಹ ಪ್ರಸ್ತುತಿ–ಉಡುಪಿ ಅಂಬಲಪಾಡಿಯ ಶ್ರೀ ಲಕ್ಷ್ಮೀ ಜನಾರ್ಧನ ಯಕ್ಷಗಾನ ಕಲಾ ಮಂಡಳಿಯ ಕಲಾವಿದರು, 6.50 ಕೃಷಿರಂಗ–ಗೋ ಸಂರಕ್ಷಣೆ ಯೋಜನೆಗಳು ಹಾಗೂ ಗೋಹತ್ಯೆ ನಿಷೇಧ ಕಾಯ್ದೆ ಕುರಿತು ಡಾ.ವೈ.ಡಿ.ರಾಜಣ್ಣ ಅವರೊಂದಿಗೆ ಸಂದರ್ಶನ, 8.00 ಯುವವಾಣಿ –ಶ್ರೀರಂಗ ಪಟ್ಟಣದ ರಂಜನ್ ಬೆಳ್ಳರ್‌ಪಾಡಿ ಅವರೊಂದಿಗೆ ಮಾತುಕತೆ, 9.15 ರಂಗ ಗೀತೆಗಳು –ಸುಭದ್ರಾ ಕಲ್ಯಾಣ ನಾಟಕದ ಹಾಡುಗಳು, 9.30 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ– ರಾಜೇಶ್ವರಿ ಪಾಠಕ್ – ಲಘು ಶಾಸ್ತ್ರೀಯ ಸಂಗೀತ.

■ **ಶ್ರೀ ಆಂಡಾಳ್ ಮಂದಿರಂ :** ಧನುರ್ಮಾಸ ಪೂಜೆ, ವಿದ್ವಾನ್ ಎಂ.ಕೆ. ಶೆಲ್ವನಾರಾಯಣ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ಆಂಡಾಳ್ ಮಂದಿರಂ ಆವರಣ, ವಿವಿ ಮೊಹಲ್ಲಾ, ಸಂಜೆ 6ರಿಂದ 7.30 ರವರೆಗೆ

■ **ರಂಗಾಯಣ :** ಭಾರತೀಯ ರಂಗವಿದ್ಯಾಲಯದ ವಿದ್ಯಾರ್ಥಿಗಳಿಂದ ಧರ್ಮವೀರ ಭಾರತಿಯವರ 'ಅಂಧಯುಗ' ನಾಟಕ ಪ್ರದರ್ಶನ, ಸ್ಥಳ: ಭೂಮಿಗೀತ, ರಂಗಾಯಣದ ಆವರಣ, ಸಂಜೆ 6.30ಕ್ಕೆ.

■ **ನಟನ ರಂಗಶಾಲೆ :** ಹಾಸನ ಕಲಾವಿದರಿಂದ 'ತಾಯಿಯಾಗುವುದೆಂದರೆ', 'ರಂಗ ಹೃದಯ', ನಾಟಕ ಪ್ರದರ್ಶನ, ನಿರ್ದೇಶನ : ಕೃಷ್ಣಮೂರ್ತಿ ಕವತ್ತಾರ್, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ

ಮೈಸೂರಲ್ಲಿ ಬಿಜೆಪಿ ಎಸ್ಸಿ ಮೋರ್ಚಾ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ

ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್, ಜೆಡಿಎಸ್ ಮಣಿಸಲು ಬಿಜೆಪಿ ರಣತಂತ್ರ



ಮೈಸೂರು ಲಲಿತ ಮಹಲ್ ಹೋಟೆಲ್‌ನಲ್ಲಿ ನಡೆಯುತ್ತಿರುವ ಬಿಜೆಪಿ ಎಸ್‌ಸಿ ಮೋರ್ಚಾ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಗಣ್ಯರಿಗೆ ಮಾಡಿರುವ ಆಸನ ವ್ಯವಸ್ಥೆ.

ಮೈಸೂರು, ಜ.7(ಆರ್‌ಕೆ)–ಮೈಸೂರಲ್ಲಿ ನಡೆಯುತ್ತಿರುವ ಬಿಜೆಪಿ ಎಸ್ಸಿ ಮೋರ್ಚಾ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ ಮುಂದಿನ ಚುನಾವಣೆಗೆ ಹಳೇ ಮೈಸೂರು ಭಾಗದಲ್ಲಿ ಕಾಂಗ್ರೆಸ್, ಜೆಡಿಎಸ್ ಮಣಿಸಿ ಅತೀ ಹೆಚ್ಚು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಲು ಬಿಜೆಪಿ ರಣತಂತ್ರ ರೂಪಿಸುತ್ತಿದೆ.

ದಕ್ಷಿಣ ಕರ್ನಾಟಕದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸೇರಿದಂತೆ ಕೆಳಸ್ತರದ ಸಮುದಾಯಗಳನ್ನು ಸೆಳೆಯಲು ಕರ್ನಾಟಕ ಸೇರಿದಂತೆ ದೇಶಾದ್ಯಂತ ಬಿಜೆಪಿ ಎಸ್ಸಿ ಮೋರ್ಚಾ ಪ್ರಮುಖ ನಾಯಕರುಗಳು ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಸುತ್ತಿದ್ದಾರೆ.

ಶುಕ್ರವಾರದಿಂದ ಮೈಸೂರಿನ ಲಲಿತ ಮಹಲ್ ಹೋಟೆಲ್‌ನಲ್ಲಿ ಸಭೆ ನಡೆಯುತ್ತಿದ್ದು, ಇಂದು ಮಧ್ಯಾಹ್ನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವಿಧ್ಯುಕ್ತವಾಗಿ ಉದ್ಘಾಟಿಸಿದರು. ಬಿಜೆಪಿ ಎಸ್ಸಿ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷ ಲಾಲ್‌ಸಿಂಗ್ ಆರ್ಯ ಅವರ ಅಧ್ಯಕ್ಷತೆಯಲ್ಲಿ ನಡೆಯುತ್ತಿರುವ ಸಭೆಯಲ್ಲಿ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ನೇತೃತ್ವ ವಹಿಸಿದ್ದಾರೆ.



ಬಿಜೆಪಿ ಮಹಿಳಾ ಮೋರ್ಚಾದಿಂದ ಗಣ್ಯರಿಗೆ ಸ್ವಾಗತ.

ಬಿಜೆಪಿ ರಾಷ್ಟ್ರೀಯ ಸಂಘಟಕ ವಿ.ಸತೀಶ್, ದುಶ್ಯಂತಕುಮಾರ್ ಗೌತಮ್, ಕೇಂದ್ರ ಸಚಿವರಾದ ವೀರೇಂದ್ರಕುಮಾರ್, ಕೌಶಲ್ ಕಿಶೋರ್, ಎಸ್ಸಿ ಮೋರ್ಚಾ ರಾಜ್ಯಾಧ್ಯಕ್ಷ ಛಲವಾದಿ ನಾರಾಯಣ ಸ್ವಾಮಿ, ಎಸ್ಸಿ ಮೋರ್ಚಾ ಮಾಜಿ ರಾಷ್ಟ್ರೀಯ ಅಧ್ಯಕ್ಷ ಡಾ. ಸಂಜಯ್ ಪಾಸ್ವಾನ್, ರಾಮ್‌ಪತಿ ಶಾಸ್ತ್ರಿ, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಮೇಯರ್ ಶಿವಕುಮಾರ್, ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್, ಮೈಲ್ಯಾಕ್ ಅಧ್ಯಕ್ಷ ಆರ್.ರಘು ಕೌಟಿಲ್ಯ, ನಗರ ಬಿಜೆಪಿ ಅಧ್ಯಕ್ಷ ಶ್ರೀವತ್ಸ, ಸೇರಿದಂತೆ ದೇಶದ ವಿವಿಧ ರಾಜ್ಯಗಳ ಬಿಜೆಪಿ ಎಸ್ಸಿ ಮೋರ್ಚಾ ಪದಾಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದಾರೆ.

ಹೊರ ರಾಜ್ಯಗಳಿಂದ ಆಗಮಿಸಿರುವ ಪ್ರತಿನಿಧಿಗಳಿಗೆ ಶಾಲು, ಮೈಸೂರು ಪೇಟ ಹಾಗೂ ಶ್ರೀಗಂಧದ ಹಾರ ಹಾಕಿ ಗೌರವ ಸಲ್ಲಿಸಲಾಯಿತು. ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ಹಿನ್ನೆಲೆಯಲ್ಲಿ ಲಲಿತ ಮಹಲ್ ಪ್ಯಾಲೇಸ್ ಹೋಟೆಲ್‌ನ ಪಾರಂಪರಿಕ ಕಟ್ಟಡದಲ್ಲಿ ಪ್ರಧಾನಿ ಮೋದಿ ಸೇರಿದಂತೆ ರಾಷ್ಟ್ರ ಮತ್ತು ರಾಜ್ಯಮಟ್ಟದ ಬಿಜೆಪಿ ನಾಯಕರ ಫ್ಲೆಕ್ಸ್‌ಗಳನ್ನು ಅಳವಡಿಸಿರುವುದಲ್ಲದೆ, ಲಲಿತ ಮಹಲ್ ರಸ್ತೆ, ಪ್ರಮುಖ ಸರ್ಕಲ್‌ಗಳಲ್ಲೂ ಬಿಜೆಪಿ ನಾಯಕರ ಫ್ಲೆಕ್ಸ್ ಮತ್ತು ಪಕ್ಷದ ಬಾವುಟಗಳನ್ನು ಹಾಕಲಾಗಿದೆ ನಾಳೆ(ಜ.8) ಸಭೆ ಮುಕ್ತಾಯಗೊಳ್ಳುತ್ತದೆ.

ವಿಧಾನಸೌಧದ ಮುಂದೆ ಶೀಘ್ರವೇ ಬಸವೇಶ್ವರ, ಕೆಂಪೇಗೌಡರ ಪ್ರತಿಮೆ

ಬೆಂಗಳೂರು, ಜ.7(ಕೆಎಂಶಿ)– ಶಕ್ತಿಸೌಧ ವಿಧಾನಸೌಧದ ಮುಂದೆ ಈಗಿರುವ ಮಹನೀಯರ ಪ್ರತಿಮೆಗಳ ಜೊತೆಗೆ ಇನ್ನೆರಡು ಪ್ರತಿಮೆಗಳು ತಲೆಯೆತ್ತಲಿವೆ. ನಾಡಪ್ರಭು ಕೆಂಪೇಗೌಡ ಹಾಗೂ ಜಗಜ್ಯೋತಿ ಬಸವೇಶ್ವರರ ಪ್ರತಿಮೆಗಳು ವಿಧಾನಸೌಧದ ಎದುರು ಪ್ರತಿಷ್ಠಾಪನೆಗೊಳ್ಳಲಿವೆ. ರಾಜ್ಯ ವಿಧಾನಸಭಾ ಚುನಾವಣೆ ಸಮೀಪವಾಗುತ್ತಿದ್ದಂತೆ ಈ ಎರಡೂ ಪ್ರತಿಮೆಗಳ ಅನಾವರಣಗೊಳಿಸಲು ಸರ್ಕಾರ ಮುಂದಾಗಿದೆ.





ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸೂಚನೆಯಂತೆ ಕಂದಾಯ ಸಚಿವ ಆರ್. ಅಶೋಕ್ ಮತ್ತು ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ್ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಪ್ರತಿಮೆ ಸ್ಥಾಪಿಸುವ ಸಂಬಂಧ ನೀಲನಕ್ಷೆ ಪರಿಶೀಲಿಸಿ, ಸ್ಥಳಕ್ಕೆ ಜಂಟಿಯಾಗಿ ಭೇಟಿ ನೀಡಿ ತಪಾಸಣೆ ನಡೆಸಿದರು.

ಬಸವಣ್ಣನವರ ಮತ್ತು ಕೆಂಪೇಗೌಡರ ಪ್ರತಿಮೆಗಳ ಮಾದರಿಯನ್ನು ಸಿದ್ಧಪಡಿಸಿ ವಿಧಾನಸೌಧದ ಮುಂಭಾಗದಲ್ಲಿ ಸೂಕ್ತ ಸ್ಥಳ ನಿಗದಿಪಡಿಸುವಂತೆ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಿಗೆ ಈಗಾಗಲೇ ಸೂಚಿಸಲಾಗಿತ್ತು. ಅದರಂತೆ ಅವರು ಇಂದು ಸಿದ್ಧಪಡಿಸಿಕೊಂಡು ತಂದಿರುವ ನೀಲನಕ್ಷೆ ಮತ್ತು ಪ್ರತಿಮೆಗಳ ಮಾದರಿಗಳನ್ನು ಉಭಯ ಸಚಿವರೂ ಪರಿಶೀಲಿಸಿ ಅಗತ್ಯ ಸಲಹೆ ಸೂಚನೆಗಳನ್ನು ನೀಡಿದರು.

ಪ್ರತಿಮೆಗಳನ್ನು ಆದಷ್ಟು ಶೀಘ್ರವೇ ನಿರ್ಮಿಸಿ, ವಿಧಾನಸೌಧದ ಮುಂಭಾಗ ಈ ತಿಂಗಳಿನಲ್ಲಿಯೇ ಶಂಕುಸ್ಥಾಪನೆ ನೆರವೇರಿಸಲು ಅನುಕೂಲವಾಗುವಂತೆ ಕ್ರಮ ಕೈಗೊಳ್ಳಬೇಕೆಂದು ಉಭಯ ಸಚಿವರೂ ಅಧಿಕಾರಿಗಳಿಗೆ ಸೂಚಿಸಿದರು. ತಲಾ ನಾಲ್ಕು ಮೀಟರ್ ಎತ್ತರದ ಈ ಎರಡು ಪ್ರತಿಮೆಗಳನ್ನು ಅಶ್ವಾರೂಢ ಭಂಗಿಗಳಲ್ಲಿ ಸ್ಥಾಪಿಸಬೇಕು ಮತ್ತು ಸುತ್ತಮುತ್ತ ಹಸಿರು ಸೂಸುವ ಪರಿಸರವನ್ನು ಕಾಪಾಡಿಕೊಳ್ಳಬೇಕೆಂದು ಅಶೋಕ್ ಮತ್ತು ಸಿ.ಸಿ.ಪಾಟೀಲರು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಬಿಜೆಪಿ ದಲಿತರ ವಿರೋಧಿಯಲ್ಲ: ಸಿ.ಟಿ.ರವಿ

ಮೈಸೂರು, ಜ.7(ಆರ್‌ಕೆ)– ಭಾರತೀಯ ಜನತಾ ಪಾರ್ಟಿ ಎಂದೂ ದಲಿತರ ವಿರೋಧಿಯಾಗಿಲ್ಲ ಎಂದು ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಇಂದಿಲ್ಲಿ ತಿಳಿಸಿದ್ದಾರೆ.



ಮೈಸೂರಿನ ಲಲಿತ ಮಹಲ್ ಹೋಟೆಲ್‌ನಲ್ಲಿ ಆರಂಭವಾಗಿರುವ ಬಿಜೆಪಿ ಎಸ್ಸಿ ಮೋರ್ಚಾ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ ಪಾಲ್ಗೊಂಡು ಮಾತನಾಡುತ್ತಿದ್ದ ಅವರು, ರಾಜ್ಯದಲ್ಲಾಗಲೀ, ದೇಶದಲ್ಲಾಗಲೀ ಬಿಜೆಪಿ ಎಂದೂ ದಲಿತರ ವಿರೋಧಿಯಾಗಿಲ್ಲ. ಆ ಸಮುದಾಯದ ಅಭಿವೃದ್ಧಿಗೆ ವಿರುದ್ಧವಾಗಿ ನಡೆದುಕೊಂಡಿಲ್ಲ ಎಂದು ಹೇಳಿದರು.

ದಲಿತ ಸಮುದಾಯದ ಏಳ್ಗೆಗಾಗಿ ಹಲವು ಕಾರ್ಯಕ್ರಮ ನೀಡುತ್ತಾ ಬಂದಿದ್ದಾಗ್ಯೂ ಕಾಂಗ್ರೆಸ್ ನಾಯಕರು ಬಿಜೆಪಿ ಪಕ್ಷ ದಲಿತ ವಿರೋಧಿ ಎಂದು ಬಿಂಬಿಸುತ್ತಿದ್ದಾರೆ. ಈ ವರ್ಗ ಉದ್ಧಾರ ಮಾಡಲು ಮುಂದಾಗದ ಕಾಂಗ್ರೆಸ್ ಪಕ್ಷವು ಹಿಂದಿನಿಂದಲೂ ದಲಿತರನ್ನು ಓಟ್ ಬ್ಯಾಂಕ್ ಮಾಡಿಕೊಂಡು ಬಂದ ಇತಿಹಾಸವಿದೆ. ಸಂವಿಧಾನ ಕೊಟ್ಟ ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಚುನಾವಣೆಯಲ್ಲಿ ಸೋಲಿಸಿದ್ದು ಕಾಂಗ್ರೆಸ್ಸಿಗರು. ಅವರು ಬದುಕಿದ್ದಷ್ಟೂ ದಿನ ಕಾಂಗ್ರೆಸ್ ಅವರನ್ನು ತುಳಿಯುತ್ತಲೇ ಬಂದಿರುವುದನ್ನು ಈ ಸಮುದಾಯ ಮರೆತಿಲ್ಲ ಎಂದು ಹೇಳಿದರು.


ಅವರು ಕಾಲವಾದ ನಂತರ ದಲಿತರ ಮತ ಗಳಿಸಲು ಕಾಂಗ್ರೆಸ್ ಡಾ.ಬಿ.ಆರ್.ಅಂಬೇಡ್ಕರ್ ಅವರ ಗುಣಗಾನ ಮಾಡುತ್ತಾ ಬಂದಿತು. ಈಗಲೂ ಅವರ ಹೆಸರನ್ನು ಬಳಸಿಕೊಂಡೇ ರಾಜಕೀಯ ಮಾಡುತ್ತಿದ್ದಾರೆ. ಆದರೆ ಬಿಜೆಪಿ ಎಂದೂ ದಲಿತರ ವಿರೋಧಿಯಾಗಿಲ್ಲ. ಅಂಬೇಡ್ಕರ್‌ಗೆ ಅಪಮಾನವಾಗುವ ರೀತಿ ನಡೆದುಕೊಂಡಿಲ್ಲ. ಬದಲಾಗಿ ಈ ಸಮುದಾಯದ ಅಭಿವೃದ್ಧಿಗಾಗಿ ಬಿಜೆಪಿ ಸರ್ಕಾರ ಹಲವು ಯೋಜನೆಗಳನ್ನು ಹಮ್ಮಿಕೊಂಡಿದೆ ಎಂದು ನುಡಿದರು.

ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿ ಬಗ್ಗೆ ಚರ್ಚೆ ನಡೆಯುತ್ತಿದೆ. ಆದರೆ ತುಷ್ಟೀಕರಣ ರಾಜಕೀಯ ಮಾಡುತ್ತಿರುವವರು ಇದಕ್ಕೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಸಹ ಏಕರೂಪ ನಾಗರಿಕ ಸಂಹಿತೆ ಜಾರಿ ಪರವಿದ್ದರು ಎಂದ ಅವರು, ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರೂ ಈ ಸಂಹಿತೆ ಜಾರಿಗೆ ತರಲು ಪ್ರಯತ್ನಿಸಿದ್ದರು ಎಂದು ಸಿ.ಟಿ.ರವಿ ತಿಳಿಸಿದರು.

ಕಾಂಗ್ರೆಸ್ಸಿನ ಜಾತಿ ರಾಜಕಾರಣ, ಸಾಮಾಜಿಕ ನ್ಯಾಯ ವಿರೋಧಿ ಆಡಳಿತ, ಬಡವರು, ದೀನ ದಲಿತರ ಪರವಾಗಿದ್ದೇವೆ ಎಂದು ಹೇಳಿಕೊಂಡೇ ಅಧಿಕಾರ ಹಿಡಿದು ಪ್ರಮುಖ ದಲಿತ ಸಮುದಾಯವನ್ನು ಕಾಂಗ್ರೆಸ್ ನಿರಂತರವಾಗಿ ವಂಚಿಸುತ್ತಾ ಬಂದಿದೆ. ಅವರಿಗೆ ಡಾ.ಬಿ.ಆರ್.ಅಂಬೇಡ್ಕರ್ ಹೆಸರೇ ಬಂಡವಾಳವಾಗಿದೆ. ಆದರೆ, ಬಿಜೆಪಿ ಪಕ್ಷವು ದಲಿತರೂ ಸೇರಿದಂತೆ ಸಮಾಜದ ಎಲ್ಲಾ ವರ್ಗದ ಸಮುದಾಯದ ಏಳ್ಗೆಗೆ ನೂರಾರು ಕಾರ್ಯಕ್ರಮಗಳನ್ನು ನೀಡಿದೆ ಎಂದು ಸಿ.ಟಿ.ರವಿ ತಿಳಿಸಿದರು.

ಭಾರತೀಯ ಮಾನವ ವಿಜ್ಞಾನ ಸರ್ವೇಕ್ಷಣ ದಕ್ಷಿಣ ಕ್ಷೇತ್ರಿಯ ಕೇಂದ್ರಕ್ಕೆ ಕೇಂದ್ರ ಸಂಸ್ಕೃತಿ ಸಚಿವರ ಭೇಟಿ

ಮೈಸೂರು, ಜ.7(ಎಂಕೆ)– ಮೈಸೂರಿನ ಬೋಗಾದಿ 2ನೇ ಹಂತದಲ್ಲಿರುವ(ನಿರ್ಮಿತಿ ಕೇಂದ್ರದ ಸಮೀಪ) ಭಾರತೀಯ ಮಾನವ ವಿಜ್ಞಾನ ಸರ್ವೇಕ್ಷಣ ದಕ್ಷಿಣ ಕ್ಷೇತ್ರಿಯ ಕೇಂದ್ರ(Anthropology survey of India, southern regional center)ಕ್ಕೆ ಭೇಟಿ ನೀಡಿದ ಸಂಸ್ಕೃತಿ ಸಚಿವಾಲಯ ಹಾಗೂ ಸಂಸದೀಯ ವ್ಯವಹಾರಗಳ ರಾಜ್ಯ ಸಚಿವ ಅರ್ಜುನ್ ರಾಮ್ ಮೇಘವಾಲ್ ಕೇಂದ್ರದ ಕಾರ್ಯಚಟುವಟಿಕೆಗಳ ಪರಿಶೀಲನೆ ನಡೆಸಿದರು.



ಶನಿವಾರ ಸಂಜೆ ಕೇಂದ್ರಕ್ಕೆ ಆಗಮಿಸಿದ ಸಚಿವರು, ಮಾನವ ಭವನದ ಆವರಣದಲ್ಲಿರುವ ಹೊರಾಂಗಣ ಮ್ಯೂಸಿಯಂನಲ್ಲಿ ನಿರ್ಮಿಸಿರುವ ಬೆಟ್ಟಕುರುಬ ಸಮುದಾಯದ ಜನರ ಗುಡಿಸಲು ಉದ್ಘಾಟಿಸಿದರು. ಬಳಿಕ ಒಳಾಂಗಣದಲ್ಲಿರುವ ಮ್ಯೂಸಿಯಂ ವೀಕ್ಷಿಸಿ, ನಂತರ ಕೇಂದ್ರದ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಕಾರ್ಯಚಟುವಟಿಕೆಗಳ ಕುರಿತು ಮಾಹಿತಿ ಪಡೆದರು.

ಮನವಿ: ಭಾರತೀಯ ಮಾನವ ವಿಜ್ಞಾನ ಸರ್ವೇಕ್ಷಣ ದಕ್ಷಿಣ ಕ್ಷೇತ್ರಿಯ ಕೇಂದ್ರದ ಅಕ್ಕ–ಪಕ್ಕ ಬಡಾವಣೆಗಳಲ್ಲಿ ಬೀದಿದೀಪ, ಅಚ್ಚುಕಟ್ಟಾದ ಡಾಂಬರ್ ರಸ್ತೆ ಇದೆ. ಆದರೆ ಕೇಂದ್ರಕ್ಕೆ ಬರುವ ಮಾರ್ಗದಲ್ಲಿ ರಸ್ತೆ ಹಾಳಾಗಿದ್ದು, ಬೀದಿದೀಪಗಳಿಲ್ಲದೇ ರಾತ್ರಿ ಸಂಚಾರ ಕಷ್ಟಕರವಾಗಿದೆ. ಸುತ್ತಮುತ್ತಲೂ ಗಿಡ–ಗಂಟಿಗಳು ಬೆಳೆದುನಿಂತಿದ್ದು, ಸಾಕಷ್ಟು ಸಮಸ್ಯೆಗಳಿದ್ದು, ಬಗೆಹರಿಸುವಂತೆ ಮನವಿ ಮಾಡಿದರು. ಇದಕ್ಕೂ ಮುನ್ನ ಲಲಿತ ಮಹಲ್ ಹೋಟೆಲ್‌ನಿಂದ ಸಚಿವರನ್ನು ಆತ್ಮೀಯವಾಗಿ ಸ್ವಾಗತಿಸಲಾಯಿತು. ಭಾರತೀಯ ಮಾನವ ವಿಜ್ಞಾನ ಸರ್ವೇಕ್ಷಣ ದಕ್ಷಿಣ ಕ್ಷೇತ್ರಿಯ ಕೇಂದ್ರದ ಮುಖ್ಯಸ್ಥ ಡಾ.ಮಿಥುನ್ ಸಿಕ್ದರ್, ಮಾನವಶಾಸ್ತ್ರಜ್ಞ ಡಾ.ಸಿ.ರಘು, ಸಹಾಯಕ ಮಾನವ ಶಾಸ್ತ್ರಜ್ಞರಾದ ಡಾ.ವೇಣುಗೋಪಾಲ್, ಡಾ.ಬಿ.ಆರ್.ವಿಜಯೇಂದ್ರ ಮತ್ತಿತರರು ಉಪಸ್ಥಿತರಿದ್ದರು.

ನೇಣು ಬಿಗಿದುಕೊಂಡು ಟೆಕ್ಕಿ ಆತ್ಮಹತ್ಯೆ

ಮೈಸೂರು, ಜ.7(ಎಂಕೆ)– ವರ್ಕ್ ಫ್ರಂ ಹೋಂನಲ್ಲಿದ್ದ ಸಾಫ್ಟ್‌ವೇರ್ ಇಂಜಿನಿಯರ್ ನೇಣುಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮೈಸೂರಿನ ಹೆಬ್ಬಾಳ್‌ನಲ್ಲಿ ನಡೆದಿದೆ. ನಂಜನಗೂಡು ಮೂಲದ ಯತೀಶ್(25) ಆತ್ಮಹತ್ಯೆ ಮಾಡಿಕೊಂಡ ವ್ಯಕ್ತಿ. ಇನ್ಫೋಟೆಕ್ ಕಂಪನಿಯಲ್ಲಿ ಉದ್ಯೋಗಿಯಾಗಿದ್ದ ಯತೀಶ್ ಹೆಬ್ಬಾಳಿನ ಸಂಕ್ರಾಂತಿ ಸರ್ಕಲ್ ಬಳಿ ಬಾಡಿಗೆ ಮನೆಯಲ್ಲಿ ವರ್ಕ್ ಫ್ರಂ ಹೋಂ ಕೆಲಸ ಮಾಡುತ್ತಿದ್ದರು. ಮನೆಯ ಕೊಠಡಿಯಲ್ಲಿ ನೇಣುಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ಹೆಬ್ಬಾಳ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಕ್ಕರೆ ಅದೇ ಸ್ವರ್ಗ

ಕವಿ : ನಾನು ಕವನ ಓದುತ್ತಿದ್ದಾಗ ಎಲ್ಲರೂ ಎದ್ದು ಹೋದರೂ ನೀನ್ಯಾಕೆ ಕುಳಿತುಕೊಂಡಿರುವೆ?

ಗುಂಡ : ನಿಮ್ಮ ನಂತರ ಕವನ ಓದುವ ಸರದಿ ನನ್ನದು!

ಮೈಸೂರು ಮಿತ್ರ

ಭಾನುವಾರ, 8 ಜನವರಿ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಸಂದರ್ಭ ಬಂದಾಗ ಮಕ್ಕಳ ಮಾತನ್ನೂ ಸಹ ಜ್ಞಾನಿಯಾದವನು ಉಪಯೋಗಿಸಿಕೊಳ್ಳಬೇಕು. –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ವ್ಯಾಪಾರಕ್ಕೆ ನಿಮಿಷ / ಬೇಸಾಯಕ್ಕೆ ವರುಷ

ನಿಮ್ಮ ಪತ್ರಗಳು

ನಿಮ್ಮ ಅಭಿವೃದ್ಧಿ ಪರ್ವ ಇರಲಿ; ಈಗ ಮೊದಲು ತ್ರಿನೇತ್ರ ವೃತ್ತದ ಯಮ ಸ್ವರೂಪಿ ರಸ್ತೆ ದುರಸ್ತಿ ಮಾಡಿ



ಮಾನ್ಯರೆ,

ಮೈಸೂರು ನಗರದ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಬಳಿ ಇರುವ ಪಿ.ಎಂ.ಚಿಕ್ಕಬೋರಯ್ಯ ರಸ್ತೆ (ತ್ರಿನೇತ್ರ ವೃತ್ತದಿಂದ ವಿಜಯನಗರ ವಾಟರ್ ಟ್ಯಾಂಕ್‌ಗೆ ಹೋಗುವ ಹೈ ಟೆನ್ಶನ್ ರಸ್ತೆ) ಹದಗೆಟ್ಟು ಹಲವಾರು ತಿಂಗಳುಗಳೇ ಕಳೆದಿದ್ದು ಈಗ ದುರಸ್ತಿ ಕಾರ್ಯ ನಡೆಯುತ್ತಿರುವುದು ಸರಿಯಷ್ಟೆ, ಇದು ಅತ್ಯಂತ ಹೆಚ್ಚು ವಾಹನ ಸಂಚಾರವಿರುವ ರಸ್ತೆಯಾಗಿದ್ದು ಸುತ್ತಮುತ್ತಲಿನ ನಿವಾಸಿಗಳು ಮಕ್ಕಳನ್ನು ಶಾಲೆಗೆ ಬಿಡಲು, ಕೆಲಸಕ್ಕೆ ತೆರಳಲು ಇದೇ ರಸ್ತೆಯನ್ನು ಅವಲಂಭಿಸ ಬೇಕಾಗಿದೆ. ಪ್ರಸ್ತುತ ಈ ರಸ್ತೆಯ ಸ್ಥಿತಿಯು ಅತ್ಯಂತ ಹೀನಾಯವಾಗಿದ್ದು, ವಾಹನ ಸವಾರರಿಗೆ ಯಮಸ್ವರೂಪಿಯಾಗಿ ಪರಿಣಮಿಸಿದೆ. ಈ ರಸ್ತೆಯಲ್ಲಿ ವಾಹನ ಸವಾರರು ಅನೇಕ ತಿಂಗಳುಗಳಿಂದ ನಿತ್ಯವೂ ಆತಂಕದಲ್ಲೇ ಸಾಗಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ರಸ್ತೆಯಲ್ಲಿ ನಿರ್ಮಾಣವಾಗಿರುವ ದೊಡ್ಡ ದೊಡ್ಡ ಹಳ್ಳಕೊಳ್ಳಗಳಿಂದಾಗಿ ವಾಹನ ಸವಾರರು ಆಯತಪ್ಪಿ ಬೀಳುವುದು ಸರ್ವೇ ಸಾಮಾನ್ಯವಾಗಿಬಿಟ್ಟಿದೆ. ಚುನಾವಣೆ ಎದುರಾದಾಗ ಮತದಾರರ ಮನೆ ಬಾಗಿಲಿಗೆ ಬಂದು ಕೈ ಮುಗಿದು ನಾವು ಪ್ರಜಾ ಸೇವಕರೆಂದು ಹೇಳಿ ಮತ ಕೇಳುವ ಜನಪ್ರತಿನಿಧಿಗಳಿಗೆ ಮತದಾರರ ನಿತ್ಯದ ನರಕಯಾತನೆ ಕಾಣುತ್ತಿಲ್ಲವೇ? ಯಾವುದಾದರೂ ಗಣ್ಯ ವ್ಯಕ್ತಿಗಳು (ಪ್ರಧಾನ ಮಂತ್ರಿ, ಮುಖ್ಯ ಮಂತ್ರಿ, ಸಚಿವರು, ಇತ್ಯಾದಿ) ಈ ರಸ್ತೆಯಲ್ಲಿ ಒಮ್ಮೆ ಸಾಗಲು ಸಿದ್ಧರಿರುವರೇ? ಯಾವಾಗಲೂ ಡಬಲ್ ಇಂಜಿನ್ ಸರ್ಕಾರದ ಬಗ್ಗೆ ಮಾತನಾಡುವವರು, ಮೈಸೂರು ನಗರದಲ್ಲೂ ಅವರದೇ ಆಡಳಿತವಿದ್ದು (ತ್ರಿಬಲ್ ಇಂಜಿನ್) ಜನರ ನಿತ್ಯದ ಗೋಳು ಕಂಡೂ ಕಾಣದಂತಿರುವುದು ಆಶ್ಚರ್ಯವೇ ಸರಿ. ಈ ರಸ್ತೆ ದುರಸ್ತಿ ಕಾರ್ಯ ಮುಗಿದು ಡಾಂಬರೀಕರಣವಾಗುವವರೆಗೆ ಕನಿಷ್ಠ ಹಳ್ಳಗಳನ್ನು ಮುಚ್ಚಿ ಸಮತಟ್ಟು ಮಾಡಿ ಇದನ್ನು ಸಂಚಾರ ಯೋಗ್ಯವನ್ನಾಗಿ ಮಾಡಬೇಕಾಗಿ ಸಂಬಂಧಪಟ್ಟವರಲ್ಲಿ ಕಳಕಳಿಯ ಮನವಿ.

–ರಾಕೇಶ್.ಎಲ್, ಮಹದೇಶ್ವರ ಬಡಾವಣೆ, ಮೈಸೂರು

ಅವೈಜ್ಞಾನಿಕ ಯುಜಿಡಿ ಕಾಮಗಾರಿ

ಮಾನ್ಯರೆ,

ಮೈಸೂರಿನ ಹಂಚ್ಯ ಸಾತಗಳ್ಳಿ 'ಬಿ' ವಲಯದಲ್ಲಿ ರಾಜ ಕಾಲುವೆ ಅಕ್ಕ–ಪಕ್ಕ ಮುಡಾ ವತಿಯಿಂದ ಸುಮಾರು ಒಂದು ತಿಂಗಳಿನಿಂದ ಯುಜಿಡಿ ಕಾಮಗಾರಿ ನಡೆಯುತ್ತಿದೆ. ಆದರೆ ಹೊಸ ಯುಜಿಡಿ ಪೈಪ್ ಹಾಕಿದ ನಂತರ ಸರಿಯಾಗಿ ಹಳ್ಳಗಳನ್ನು ಮುಚ್ಚಿಲ್ಲ. ಎಲ್ಲಾ ಕಡೆ ರಸ್ತೆಗಳನ್ನು ಮಧ್ಯೆ ಮಧ್ಯೆ ಅಗೆದು ದ್ವಿಚಕ್ರ ವಾಹನಗಳು ಮತ್ತು ಪಾದಚಾರಿಗಳು ಓಡಾಡದಂತೆ ಮಾಡಿದ್ದಾರೆ. ಯುಜಿಡಿ ಹಳ್ಳ ತೆಗೆಯುವಾಗ ವಿದ್ಯುತ್ ಕೇಬಲ್ ಮತ್ತು ವಾಟರ್ ಲೈನ್ ಅನ್ನು ಜೆಸಿಬಿಯಿಂದ ಕಿತ್ತು ಬಿಸಾಕಿದ್ದಾರೆ. ಅಲ್ಲಲ್ಲಿ ನೀರು ಪೋಲಾಗುತ್ತಿದೆ. ಈ ಬಗ್ಗೆ ಕೇಳಿದರೆ ಮುಡಾಗೆ ದೂರು ನೀಡಿ ಎಂದು ಹೇಳುತ್ತಾರೆ.

ಮನೆ ಮುಂದೆ ಕಾಲುವೆಗೆ ಮಣ್ಣು ಸುರಿದು, ಸರಿಯಾಗಿ ನೀರು ಹರಿದು ಹೋಗದಂತೆ ಮಾಡಿದ್ದಾರೆ. ಚರಂಡಿ, ಕಾಲುವೆ ಕುಸಿದು ಏರುಪೇರಾಗಿದೆ. ಇನ್ನು ಹಂದಿಗಳ ಕಾಟ ಹೆಚ್ಚಾಗಿದ್ದು ಓಡಿಸಲು ಹೋದರೆ ಜನರಿಗೆ ತಿರುಗಿಬೀಳುತ್ತವೆ. ನಂತರ ವಿದ್ಯುತ್ ದೀಪಗಳ ಕತೆ ಅಧೋಗತಿಯಾಗಿದೆ. ಈ ಎಲ್ಲದರ ಬಗ್ಗೆ ಮುಡಾ ಅಧಿಕಾರಿಗಳನ್ನು ಕೇಳಿದರೆ ಸುಳ್ಳು ಭರವಸೆ ನೀಡುತ್ತಿದ್ದಾರೆ. ಆದ್ದರಿಂದ ಈ ಎಲ್ಲಾ ತೊಂದರೆಗಳ ಬಗ್ಗೆ ಮುಡಾ ಅಧಿಕಾರಿಗಳು ತುರ್ತು ಕ್ರಮ ಕೈಗೊಂಡು ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಗಳನ್ನು ಸರಿಪಡಿಸಲು ಈ ಮೂಲಕ ಕೋರಲಾಗಿದೆ.

– ಡಿ.ಆರ್. ಜಯಸ್ವಾಮಿ, ನಿವೃತ್ತ ಇನ್ಸ್‌ಪೆಕ್ಟರ್, ಮೈಸೂರು.

ನವನವ

ಮಾನ್ಯರೆ,

'ಮಿತ್ರ'ನ 4ನೇ ಪುಟದಲ್ಲಿ ನಿತ್ಯವೂ ಒಳ್ಳೊಳ್ಳೆ ಗಾದೆಗಳ ಉದ್ಧರಣ ಸ್ವಾಗತಾರ್ಹ. ಮಾನ, ಮರ್ಯಾದೆ, ನಾಚಿಕೆ, ಹೇಸಿಕೆ ಏನೂ ಇಲ್ಲದ ಕೆಲವರು– ಎಲ್ಲರೂ ಅಲ್ಲ– ರಾಜಕಾರಣಿಗಳಿಗೆ ಮತ್ತು ಇತರರಿಗೆ ಅನ್ವಯಿಸುವ ಮಾರ್ಮಿಕ ಗಾದೆಯೊಂದನ್ನು ಇಲ್ಲಿ ಉದ್ಧರಿಸಬಯಸುತ್ತೇನೆ : "ಈಚೆ ಬೀದಿಯಲ್ಲಿ ಎಕ್ಕಡದಲ್ಲಿ ಹೊಡೆದರೆ, ಆಚೆ ಬೀದಿಯಲ್ಲಿ ಹೊಸ ಆಳು!" (ಇವರು 'ನವನವೋನ್ಮೇಷಶಾಲಿ'ಗಳು).

'ನಿದ್ರಾಮುದ್ರಿತೇಕ್ಷಣ'ರು : ರಾಜ್ಯೋತ್ಸವ ಮಾಸ ನವಂಬರ್ ಕಳೆದು, ಡಿಸೆಂಬರ್ ನಲ್ಲೂ ಅಲ್ಲಲ್ಲಿ ಸಡಗರದಿಂದ ಆಚರಿಸಲಾಯಿತು. ಇನ್ನು ಹನ್ನೊಂದು ತಿಂಗಳು ಹಾಯಾಗಿ ನಿದ್ರಿಸಬಹುದು! ಕುವೆಂಪು 'ಕರ್ನಾಟಕ ಹೃದಯ ಶಿವ'ನಿಗೆ ಇಟ್ಟ ಮೊರೆ ಸ್ಮರಣೀಯ : "ಸತ್ತಂತಿಹರನು ಬಡಿದೆಚ್ಚರಿಸು" (ಅಂದ ಹಾಗೆ ಡಿ. 29 ರಂದು ಕುವೆಂಪು ಜಯಂತಿ).

ಇಲ್ಲೊಂದು ಸೂಕ್ಷ್ಮವಿದೆ. ಸತ್ತವರನ್ನು ಎಚ್ಚರಿಸುವ ಪ್ರಶ್ನೆಯೇ ಇಲ್ಲ. ಆದರೆ ಸತ್ತಂತೆ ನಟಿಸುವವರನ್ನು ಎಚ್ಚರಿಸುವುದು ಹೇಗೆ?

ಗ್ರೀಕ್ ತತ್ತ್ವಜ್ಞಾನಿಯೊಬ್ಬ ಅರ್ಥವತ್ತಾಗಿ ಹೇಳುತ್ತಾನೆ: "ನಾವು ಸತ್ತವರನ್ನು ಮಾತ್ರವಲ್ಲ, ಬದುಕಿರುವವರನ್ನು ಎಬ್ಬಿಸಲು ಹೋಗುತ್ತೇವೆ!". ರಾಜ್ಯೋದಯವಾಗಿ 69 ವರ್ಷಗಳಾದವು; ವಿಪರ್ಯಾಸವೆಂದರೆ ಸರ್ವೋದಯವಿನ್ನೂ ಆಗಿಲ್ಲ!

ವಿಸ್ಮಯ : ಲಿಂಗದೇವರು ಹಳೆಮನೆಯವರ ಸ್ಮರಣಾರ್ಥ 'ಹಿತಚಿಂತಕ' ಎಂಬ ಗ್ರಂಥ ಇತ್ತೀಚೆಗೆ ನಗರದಲ್ಲಿ ಬಿಡುಗಡೆಗೊಂಡಿತಷ್ಟೆ. ಬಹಳ ಹಿಂದೆ ಹಳೆಮನೆಯವರು ನನ್ನನ್ನು 'ಮಿತ್ರ' ಲೇಖನವೊಂದರಲ್ಲಿ "ನಮ್ಮ ಮಧ್ಯದ ವಿಸ್ಮಯ" ಎಂದು ಕರೆದರು ! ಅದಕ್ಕಿಂತ ದೊಡ್ಡ ಪ್ರಶಂಸೆ ಏನಿದ್ದೀತು? (ಅವರಿಗೆ ನಮನ).

–ಸಿಪಿಕೆ, ದತ್ತಪೀಠ ಆಸ್ಥಾನ ವಿದ್ವಾನ್, ಮೈಸೂರು.



ಪ್ರೊ. ಎ.ವಿ.ನರಸಿಂಹಮೂರ್ತಿ

ಮಾಜಿ ಮುಖ್ಯಸ್ಥರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಶಾಸ್ತ್ರ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ.

ಇತಿಹಾಸದ ಪುಟಗಳು

ಕನ್ನಡ ನಾಡಿನ ಇಬ್ಬರು 'ರೆಡ್ಡಿ' ಶ್ರೇಷ್ಠರು

ಕನ್ನಡ ನಾಡಲ್ಲಿ ಕಟ್ಟಮಂಚಿ ರಾಮಲಿಂಗಾರೆಡ್ಡಿ ಹಾಗೂ ಚೆಂಗಲರಾಯ ರೆಡ್ಡಿ ಅವರು ಭಾರೀ ಪ್ರಸಿದ್ಧರು. ಶಿಕ್ಷಣ, ಸಾಹಿತ್ಯ, ರಾಜಕೀಯದಲ್ಲಿ ಸಾಧನೆ ಮಾಡಿದವರು. ಇವರ ಬಗ್ಗೆ ವಿವರಣೆ ಇಲ್ಲಿದೆ.

ಮೊದಲನೆಯವರೇ ಸಿ.ಆರ್.ರೆಡ್ಡಿ: ಇವರ ಪೂರ್ತಿ ಹೆಸರು **ಕಟ್ಟಮಂಚಿ ರಾಮಲಿಂಗಾರೆಡ್ಡಿ**. ಇವರು ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಕಟ್ಟಮಂಚಿ ಎಂಬ ಹಳ್ಳಿಯಲ್ಲಿ 10.12.1880ರಲ್ಲಿ ಜನಿಸಿದರು. ಇವರ ತಂದೆ ಸುಬ್ರಹ್ಮಣ್ಯ ರೆಡ್ಡಿ, ಚಿತ್ತೂರಿನಲ್ಲಿ ಪ್ರಾಥಮಿಕ ಹಾಗೂ ಹೈಸ್ಕೂಲು ವಿದ್ಯಾಭ್ಯಾಸವನ್ನು ಮುಗಿಸಿ, ನಂತರ ಮದ್ರಾಸಿನ ಕ್ರಿಶ್ಚಿಯನ್ ಕಾಲೇಜಿನಿಂದ 1901ರಲ್ಲಿ ಬಿ.ಎ. ಪದವಿಯನ್ನು ಪಡೆದರು. 1903ರಲ್ಲಿ ಕೆಂಬ್ರಿಡ್ಜಿನ ಸೇಂಟ್ ಜಾನ್ಸ್ ಕಾಲೇಜಿನಲ್ಲಿ ಇವರು ಹೆಚ್ಚಿನ ವ್ಯಾಸಂಗ ಮಾಡಿದರು. ತದನಂತರ ಸಂದರ್ಶಕ ಪ್ರಾಧ್ಯಾಪಕರಾದರು. 1903ರಲ್ಲಿ ಲಿಬರಲ್ ಕ್ಲಬ್ಬಿನ ಕಾರ್ಯದರ್ಶಿಯಾಗಿ ಮತ್ತು 1905ರಲ್ಲಿ ಕೇಂಬ್ರಿಡ್ಜ್ ಯೂನಿಯನ್ನಿನ ಉಪಾಧ್ಯಕ್ಷರಾಗಿದ್ದರು. ರೆಡ್ಡಿಯವರು ಯೂನಿಯನ್ನಿಗೆ ಆಯ್ಕೆಗೊಂಡ ಭಾರತೀಯರಲ್ಲಿ ಮೊದಲನೆಯವರು. ಕೇಂಬ್ರಿಡ್ಜ್ ಯೂನಿಯನ್ನಿನ ಸಭೆಗಳಿಗೆ, ಲಾಲಾ ಲಜಪತರಾಯ್, ಗೋಖಲೆ ಮುಂತಾದವರನ್ನು ಸಂದರ್ಶಕ ಭಾಷಣಕಾರರಾಗಿ ಆಹ್ವಾನಿಸಿದ ರೆಡ್ಡಿಯವರು ತಮ್ಮ ದೇಶಪ್ರೇಮವನ್ನು ತೋರಿದರು.

ರೆಡ್ಡಿಯವರು ಇಂಗ್ಲೆಂಡಿನಿಂದ ಭಾರತಕ್ಕೆ ಹಿಂದಿರುಗಿದ ಮೇಲೆ, 1908ರಲ್ಲಿ ಬರೋಡದ ಗಾಯಕ್ವಾಡ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾದರು. ಇವರು ಇದೇ ಕಾಲೇಜಿನ ವೈಸ್ ಪ್ರಿನ್ಸಿಪಾಲರಾದರು. ಇಂಗ್ಲಿಷ್ ಸಾಹಿತ್ಯ, ಯೂರೋಪಿನ ಸಾಹಿತ್ಯ, ಇತಿಹಾಸ ಹಾಗೂ ಭಾರತೀಯ ಅರ್ಥಶಾಸ್ತ್ರ (ಎಕನಾಮಿಕ್ ಹಿಸ್ಟರಿ) ಮುಂತಾದವುಗಳನ್ನು ಬೋಧಿಸುತ್ತಿದ್ದ ರೆಡ್ಡಿಯವರಿಂದ ವಿದ್ಯಾರ್ಥಿಗಳು ಪ್ರಭಾವಿತರಾದರು. ಬರೋಡಾ ಗಾಯಕ್ವಾಡದ ಒತ್ತಾಯದ ಮೇರೆಗೆ ಕೆನಡಾ, ಜಪಾನ್ ಮತ್ತು ಫಿಲಿಫೈನ್ಸ್ ದ್ವೀಪಗಳಿಗೆ ಇವರು ಶೈಕ್ಷಣಿಕ ಪ್ರವಾಸ ಕೈಗೊಂಡರು.

1909ರಲ್ಲಿ ವಿಶ್ವವಿದ್ಯಾನಿಲಯದ ಸುಧಾರಣೆ ಕುರಿತು ಉಪನ್ಯಾಸ ನೀಡಲು ಮೈಸೂರಿಗೆ ಆಹ್ವಾನಿತರಾದ ರೆಡ್ಡಿಯವರನ್ನು ದಿವಾನ್ ಪಿ.ವಿ. ಮಾಧವರಾಯರು ಮೈಸೂರು ರಾಜ್ಯ ಸೇವೆಗೆ (ಎಂಆರ್‌ಎಸ್) ಈಗಿನ ಐ.ಎ.ಎಸ್.(ಇದ್ದಂತೆ) ಸೇರಲು ಒತ್ತಾಯಿಸಿದರು. ಮಾಧವರಾಯರ ಇಷ್ಟದ ಪ್ರಕಾರ, ರೆಡ್ಡಿಯವರು ಮಹಾರಾಜ ಕಾಲೇಜಿನ ಪ್ರಾಧ್ಯಾಪಕರಾದರು. 1913ರಲ್ಲಿ ರೆಡ್ಡಿಯವರು ಮೈಸೂರಿನ ಯುವರಾಜರ ಜೊತೆ ಯೂರೋಪ್ ಪ್ರವಾಸ ಕೈಗೊಂಡು, ವಿದೇಶದ ಶೈಕ್ಷಣಿಕ ಸಂಸ್ಥೆಗಳಿಗೆ ಭೇಟಿ ನೀಡಿದರು.

ಒರಿಯೆಂಟಲ್ ವಿದ್ಯೆ ಹಾಗೂ ಪಾಶ್ಚಾತ್ಯ ಶಿಕ್ಷಣ ವಿಧಾನಗಳ ಬಗ್ಗೆ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ಮೈಸೂರು ಸರ್ಕಾರಕ್ಕೆ 1915ರಲ್ಲಿ ಒಂದು ವರದಿಯನ್ನು ಇವರು ನೀಡಿದರು. ರೆಡ್ಡಿಯವರ ಪ್ರಯತ್ನದಿಂದಾಗಿ ಬೋಧನೆ (ಟೀಚಿಂಗ್), ಸಂಶೋಧನೆ (ರಿಸರ್ಚ್) ಹಾಗೂ ಕೆಲವು ಕಾಲೇಜುಗಳ ಸೇರ್ಪಡೆಯೊಂದಿಗೆ ಹೊಸ ವಿಶ್ವವಿದ್ಯಾನಿಲಯ (ಮೈಸೂರು ವಿಶ್ವವಿದ್ಯಾನಿಲಯ) ಸ್ಥಾಪನೆಯೂ ಆಯಿತು. ನಂತರ ರೆಡ್ಡಿಯವರು 1916ರಿಂದ 17ರವರೆಗೆ ಮಹಾರಾಜ ಕಾಲೇಜಿನ ಪ್ರಿನ್ಸಿಪಾಲರಾದರು. ಮಹಾರಾಜ ಕಾಲೇಜಿನ ಹಳೆಯ ವಿಭಾಗಗಳಿಗೆ ಹೊಸ ರೂಪ ಕೊಟ್ಟು ಭಾರತೀಯ ಭಾಷೆಗಳ ಹೊಸ ವಿಭಾಗಗಳನ್ನೂ ಪ್ರಾರಂಭಿಸಿದರು. ಇವರು 1918ರಲ್ಲಿ ಮೈಸೂರು ರಾಜ್ಯಕ್ಕೆ ಉನ್ನತ ಶಿಕ್ಷಣಾಧಿಕಾರಿಯಾಗಿ ನೇಮಕಗೊಂಡರು. ಹೊಸ ಹುದ್ದೆಗೆ ಬಂದ ಕೂಡಲೇ ಹಳೆಯ ಶಿಕ್ಷಣ ವ್ಯವಸ್ಥೆಯನ್ನು ಸುಧಾರಿಸಲು, ಶಾಲೆಯಿಲ್ಲದ ಪ್ರತಿಯೊಂದು ಹಳ್ಳಿಯಲ್ಲಿಯೂ ಶಾಲೆಯನ್ನು ತೆರೆಯುವ ಕಾರ್ಯಕ್ರಮವನ್ನು ರೆಡ್ಡಿಯವರು ಪ್ರಾರಂಭಿಸಿದರು. ಶಿಕ್ಷಣ ವಿಭಾಗಕ್ಕೆ ಧನ ಸಹಾಯ ಹೆಚ್ಚಳ ಮಾಡುವಂತೆ ಸರ್ಕಾರವನ್ನು ರೆಡ್ಡಿಯವರು ಕೇಳಿಕೊಂಡರು. ಇವರ ಪ್ರಾರ್ಥನೆಯನ್ನು ಮನ್ನಿಸಿ ಶಿಕ್ಷಣಕ್ಕೆ ಧನ ಸಹಾಯ ಹೆಚ್ಚಾಯಿತು. ಗಾಂಧೀಜಿಯವರ ಅಸ್ಪೃಶ್ಯತಾ ಕಾರ್ಯಕ್ರಮಕ್ಕೆ ಮುಂಚೆಯೇ ರೆಡ್ಡಿಯವರು ಹರಿಜನರಿಗೆ ಎಲ್ಲಾ ಶಾಲೆಗಳಲ್ಲಿಯೂ ಪ್ರವೇಶದ ಅವಕಾಶವನ್ನು ಕಲ್ಪಿಸಿದರು.

ರೆಡ್ಡಿಯವರು, 1921ರಲ್ಲಿ ಉನ್ನತ ಶಿಕ್ಷಣಾಧಿಕಾರಿ ಹುದ್ದೆಗೆ ರಾಜೀನಾಮೆ ನೀಡಿ, ಮದರಾಸಿನಲ್ಲಿ ರಾಜಕೀಯ ಪ್ರವೇಶಿಸಿದರು. 1922ರಲ್ಲಿ ಮದರಾಸಿನ ವಿಧಾನಪರಿಷತ್ತಿಗೆ ಆಯ್ಕೆಗೊಂಡರು. 1924ರಲ್ಲಿ ರೆಡ್ಡಿಯವರು ಆಂಧ್ರ ಮಹಾಸಭೆಯ ಅಧ್ಯಕ್ಷರಾದರು. 1925ರಲ್ಲಿ ಮೈಸೂರಿನಿಂದ ಮದರಾಸಿಗೆ ಹೋದ ನಂತರ ಮದರಾಸಿನಲ್ಲಿ ಇವರು ಯುನೈಟೆಡ್ ನ್ಯಾಷನಲ್ ಪಕ್ಷವನ್ನು ಸ್ಥಾಪಿಸಿದರು.



ಕಟ್ಟಮಂಚಿ ರಾಮಲಿಂಗಾರೆಡ್ಡಿ



ಚೆಂಗಲರಾಯ ರೆಡ್ಡಿ

1926ರಲ್ಲಿ ಹೊಸದಾಗಿ ಸ್ಥಾಪನೆಗೊಂಡ ಆಂಧ್ರ ವಿಶ್ವವಿದ್ಯಾನಿಲಯಕ್ಕೆ ಕುಲಪತಿಯಾಗಿ (ವೈಸ್ ಛಾನ್ಸಲರ್) ಆಗಿ 1930ರಲ್ಲಿ ನೇಮಕಗೊಂಡರು. ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಳ್ಳಲು 1935ರಲ್ಲಿ ಕುಲಪತಿ ಸ್ಥಾನಕ್ಕೆ ರೆಡ್ಡಿಯವರು ರಾಜೀನಾಮೆ ನೀಡಿದರು. ಸ್ವಲ್ಪ ಸಮಯದ ಬಳಿಕ ರಾಜಕೀಯಕ್ಕೆ ಬಂದು, ಚಿತ್ತೂರು ಜಿಲ್ಲಾ ಮಂಡಳಿಯ ಅಧ್ಯಕ್ಷರಾಗಿ 1936ರಲ್ಲಿ ಆಯ್ಕೆಗೊಂಡರು. ಮತ್ತೆ ಅದೇ ವರ್ಷ ಡಿಸೆಂಬರ್ ತಿಂಗಳಿನಲ್ಲಿ ಪುನಃ ಆಂಧ್ರ ವಿಶ್ವವಿದ್ಯಾನಿಲಯದ ಕುಲಪತಿಯಾದರು. 1937ರಲ್ಲಿ ಅಂತರ ರಾಜ್ಯ ವಿಶ್ವವಿದ್ಯಾನಿಲಯಗಳ ಮಂಡಳಿಯ ಅಧ್ಯಕ್ಷರಾದರು. 1949ರಲ್ಲಿ ಮೈಸೂರು ರಾಜ್ಯದ ಶಿಕ್ಷಣ ಪರಿಸ್ಥಿತಿಯ ಬಗ್ಗೆ ವರದಿ ಸಲ್ಲಿಸಲು ರೆಡ್ಡಿಯವರನ್ನು ಮೈಸೂರಿಗೆ ಆಹ್ವಾನಿಸಲಾಯಿತು. ಅದೇ ವರ್ಷ ರೆಡ್ಡಿಯವರನ್ನು ಮೈಸೂರು ವಿಶ್ವವಿದ್ಯಾನಿಲಯದ ಪ್ರೊ. ವೈಸ್ ಛಾನ್ಸಲರ್ ಆಗಿ (ಕುಲಾಧಿಪತಿಗಳನ್ನಾಗಿ) ನೇಮಕ ಮಾಡಲಾಯಿತು. ರೆಡ್ಡಿಯವರು ತೆಲುಗು ಭಾಷೆಯಲ್ಲಿ ಅನೇಕ ಗ್ರಂಥಗಳನ್ನು ರಚಿಸಿದ್ದಾರೆ. 'ಮುಸಲಮ್ಮ ಮರಣಮು' ಎಂಬುದು ನೂರೇಳು ಪದ್ಯಗಳಿರುವ ಗೀತೆ. 1899 ಆಂಧ್ರ ಭಾಷಾ ರಂಜನಿ ಸಂಘ ಏರ್ಪಡಿಸಿದ್ದ ಸ್ಪರ್ಧೆಯಲ್ಲಿ ಈ ಗೀತೆ ಬಹುಮಾನ ಗಳಿಸಿತು. ರೆಡ್ಡಿಯವರು 1913ರಲ್ಲಿ 'ಪೀಠಿಕಾ ಪದ್ಯಗಳು', 'ದತ್ತು ಪುತ್ರಿಯ ಮದುವೆ' (1919). 'ಅಂತಕಾಲು' ಪದ್ಯ ಹಾಗೂ ತೆಲುಗು ಮಹಾ ಭಾರತಕ್ಕೆ ಬರೆದ ಭಾರತ ಪ್ರಶಂಸೆ ಸೇರಿ ಹತ್ತು ಕವಿತೆಗಳಾಗಿವೆ. 'ನವಯಾಮಿನಿ' ಎಂಬ ಮೂವತ್ತು ಪದ್ಯಗಳಿರುವ ಕೃತಿಯೇ 'ಬಿಲ್ಹಣ' ಎಂಬ ಕವಿಗೂ ಮತ್ತು ಕಾಶ್ಮೀರದ ಯುವರಾಣಿ ಸಂಬಂಧಿಸಿದ ರಹಸ್ಯ ಕಥೆಯೇ ನವಯಾಮಿನಿಯ ಕಥಾವಸ್ತು.

ರೆಡ್ಡಿಯವರು ಬರೆದ 'ಕವಿತ್ವ ತತ್ವ ವಿಚಾರಮು' ಕೃತಿ ಆಧುನಿಕ ತೆಲುಗು ವಿಮರ್ಶೆಯಲ್ಲಿ ಮುಖ್ಯವಾದ ಕೃತಿ. ವ್ಯಾಸಮಂಜರಿ ಬೇರೆಯವರು ಬರೆದ ಕೃತಿಗಳಿಗೆ ಪೀಠಿಕೆ, ಮುನ್ನುಡಿ ಮತ್ತು ಭಾಷಣಗಳಿರುವ ಪ್ರಬಂಧ ಸಂಕಲನ. ರೆಡ್ಡಿಯವರು ಬರೆದ ಭಾರತ ಅರ್ಥಶಾಸ್ತ್ರಮು (ತೆಲುಗು ಭಾಷೆಯಲ್ಲಿ) ಭಾರತದ ಅರ್ಥಶಾಸ್ತ್ರವನ್ನು ಕುರಿತಾದ ಗ್ರಂಥವಾದರೂ, ಭಾರತೀಯ ಸಮಾಜದ ಸಂಪ್ರದಾಯವನ್ನು ಕುರಿತ ವ್ಯಾಖ್ಯಾನ ಗ್ರಂಥವೇ ಆಗಿದೆ. 1909–12ರ ಸಮಯದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ನೀಡಿದ ಉಪನ್ಯಾಸಗಳೇ ಭಾರತ ಅರ್ಥಶಾಸ್ತ್ರಮು ಕೃತಿ. ಸಾಮಾಜಿಕ ವಿಜ್ಞಾನವನ್ನು ತೆಲುಗು ಭಾಷೆಯಲ್ಲಿ ಬಳಸುವುದಕ್ಕೇ ರೆಡ್ಡಿಯವರು ಕಾರಣ. ಹಿಂದೂ ಪದ್ಧತಿಯ ಯೋಚನೆಯನ್ನು ಕುರಿತಾದ ಗಂಭೀರ ಪ್ರಯತ್ನ ಹಾಗೂ ಹಿಂದೂ ಪದ್ಧತಿಯ ಯೋಚನಾ ಸರಣಿಯ ಆಧಾರದಿಂದ ಸಾಂಪ್ರದಾಯಿಕ ಭಾರತೀಯ ಸಮಾಜವನ್ನು ಕುರಿತು ರೆಡ್ಡಿಯವರು ಬರೆದ ವಿಮರ್ಶೆಯು ಅರ್ಥಶಾಸ್ತ್ರ ಕೃತಿಯಲ್ಲಿದೆ.

ರೆಡ್ಡಿಯವರಿಗೆ 1903ರಲ್ಲಿ ಕೇಂಬ್ರಿಡ್ಜ್ ಯೂನಿವರ್ಸಿಟಿಯ ರೈಟ್ ಬಹುಮಾನ, 1938ರಲ್ಲಿ ಆಂಧ್ರ ವಿಶ್ವವಿದ್ಯಾನಿಲಯದ ಡಾಕ್ಟರ್ ಆಫ್ ಲೆಟರ್ಸ್ ಗೌರವ ಮತ್ತು ಬ್ರಿಟಿಷ್ ಸರ್ಕಾರದಿಂದ 1942ರಲ್ಲಿ 'ಸರ್' ಗೌರವವನ್ನು ಪಡೆದಿದ್ದಾರೆ. ಕಟ್ಟಮಂಚಿ ರಾಮಲಿಂಗಾರೆಡ್ಡಿಯವರು 24.2.1951ರಂದು ಮದರಾಸಿನಲ್ಲಿ ನಿಧನರಾದರು.

ಚೆಂಗಲರಾಯ ರೆಡ್ಡಿ: ಇವರು ಕೋಲಾರ ಜಿಲ್ಲೆಯ ಕ್ಯಾಸಂಬಳ್ಳಿಯಲ್ಲಿ 4.5.1902ರಂದು ಜನಿಸಿದರು. ಇವರು ಮೈಸೂರು ರಾಜ್ಯದ ಪ್ರಥಮ ಮುಖ್ಯಮಂತ್ರಿ (1947ರಿಂದ 52)ಯಾಗಿದ್ದರು. ಮಧ್ಯ ಪ್ರದೇಶದ ರಾಜ್ಯಪಾಲರೂ (ಗವರ್ನರ್) ಆಗಿದ್ದರು. ಚೆಂಗಲರಾಯ ರೆಡ್ಡಿಯವರ ತಂದೆ ವೆಂಕಟರೆಡ್ಡಿಯವರು. ಇವರು ಚಿಕ್ಕಂದಿನಿಂದಲೂ ಪರೀಕ್ಷೆಯಲ್ಲಿ ಉನ್ನತ ವರ್ಗಗಳಲ್ಲಿ ತೇರ್ಗಡೆಯಾಗುತ್ತಿದ್ದರು. ನಂತರ ಮದರಾಸಿನ ಪಚ್ಚಯಪ್ಪ ಕಾಲೇಜಿನಲ್ಲಿ ವ್ಯಾಸಂಗ ಮಾಡಿ, ಬಿ.ಎ. ಪದವಿಯನ್ನು ಗಳಿಸಿದರು. ಇವರು ಪಚಯಪ್ಪ ಕಾಲೇಜಿನಲ್ಲಿ ಎಲ್‌ಎಲ್‌ಬಿ ಪದವಿ ಪಡೆದರು.

ನಂತರ ಚೆಂಗಲರಾಯ ರೆಡ್ಡಿಯವರು ವಕೀಲಿ ವೃತ್ತಿಯನ್ನು ಆರಂಭಿಸುವುದರೊಂದಿಗೆ ಸಾರ್ವಜನಿಕ ಜೀವನವನ್ನು ಪ್ರವೇಶಿಸಿದರು. ಇವರು 1934ರಿಂದ 1940ರವರೆಗೆ ಕೋಲಾರ ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿದ್ದರು. ಮೈಸೂರು ಸಂಸ್ಥಾನದ ಪ್ರಜಾಪಕ್ಷದ ಅಧ್ಯಕ್ಷರೂ ಆಗಿದ್ದರು. ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಹೋರಾಟ ಹೆಚ್ಚಿದಾಗ, ಮಹಾರಾಜರ ಆಶ್ರಯದಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಯ ಬೇಡಿಕೆಯನ್ನು ಮೈಸೂರು ಕಾಂಗ್ರೆಸ್ ಮಂಡಿಸಿತು. ಚೆಂಗಲರಾಯರು, ಈ ಚಳುವಳಿಯ ಮುಖ್ಯ ನಾಯಕರಾದರು. ರಾಜ್ಯಾದ್ಯಂತ ಜನತೆಯಲ್ಲಿ ಹೊಸ ಚೇತನ ತುಂಬಿದರು. ಈ ಹೋರಾಟಕ್ಕೆ ತೀವ್ರ ಗತಿ ಬರುವಂತೆ ಮಾಡುವುದರಲ್ಲಿ ಚೆಂಗಲರಾಯರು ಮುಖ್ಯ ಪಾತ್ರವನ್ನು ವಹಿಸಿದರು. 1937–38ರಲ್ಲಿ ಇವರು ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದರು. ಇದೇ ಸಮಯದಲ್ಲಿ ಚೆಂಗಲರಾಯರು ಸೆರೆಮನೆಯ ವಾಸವನ್ನು ಅನುಭವಿಸಬೇಕಾಗಿ ಬಂತು. ಗಾಂಧೀಜಿಯವರ ಸೇವಾ ಗ್ರಾಮ ಆಶ್ರಯದಲ್ಲಿ ಮೈಸೂರಿನ ಕಾಂಗ್ರೆಸ್ಸಿನ ಪ್ರತಿನಿಧಿಯಾಗುವ ಅವಕಾಶವೂ ಇವರಿಗೆ ಲಭಿಸಿತು. 1944–45ರ ಸಮಯದಲ್ಲಿ ಅಖಿಲ ಭಾರತ ದೇಶೀಯ ಸಂಸ್ಥಾನಗಳ ಪ್ರಜಾ ಪರಿಷತ್ತಿನ ಕಾರ್ಯಕಾರೀ ಮಂಡಳಿಯಲ್ಲಿ ಚೆಂಗಲರಾಯರು ಚುನಾಯಿತ ಸದಸ್ಯರಾಗಿದ್ದರು. ಇವರು 1946–47ರ ಸಮಯದಲ್ಲಿ ಮೈಸೂರು ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದರು.

ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ, ದೇಶೀಯ ಸಂಸ್ಥಾನಗಳಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ಹೋರಾಟ ಉಗ್ರರೂಪವನ್ನು ತಾಳಿತು. 19.9.1947ರಂದು ಚೆಂಗಲರಾಯರ ನಾಯಕತ್ವದಲ್ಲಿ ಸತ್ಯಾಗ್ರಹ ಆರಂಭವಾಯಿತು. ಕೊನೆಗೆ ದೇಶೀಯ ಸಂಸ್ಥಾನಗಳ ಸರ್ಕಾರಗಳು ಪ್ರಜೆಗಳ ಬೇಡಿಕೆಗಳನ್ನು ಈಡೇರಿಸಬೇಕಾಯಿತು. ಕಾಂಗ್ರೆಸ್ ಪಕ್ಷದ ನಾಯಕರಾಗಿದ್ದ ಚೆಂಗಲರಾಯರು, ಮೈಸೂರು ಸಂಸ್ಥಾನದ ದಿವಾನರಾಗಿದ್ದ ಆರ್ಕಾಟ್ ರಾಮಸ್ವಾಮಿ ಮೊದಲಿಯರ್ ಅವರಿಗೂ ರಾಜಕೀಯ ಒಪ್ಪಂದವಾಗಿ ಮೈಸೂರಿನಲ್ಲಿ ಪ್ರಜಾಪ್ರತಿನಿಧಿಗಳ ಮಂತ್ರಿ ಮಂಡಲ ರಚನೆಗೆ ನಾಂದಿಯಾಯಿತು. ಚೆಂಗಲರಾಯರು ಪ್ರಥಮ ಮುಖ್ಯಮಂತ್ರಿಯಾಗಿ, ಸಚಿವ ಸಂಪುಟವನ್ನು ರಚಿಸಿ 1952ರವರೆಗೂ ಅಧಿಕಾರದಲ್ಲಿದ್ದರು. 1952–1957ರ ಸಮಯದಲ್ಲಿ ಚೆಂಗಲರಾಯರು ಲೋಕಸಭೆಯ ಸದಸ್ಯರಾಗಿದ್ದರು. 1952ರಿಂದ 1961ರವರೆಗೆ ಗೃಹ ನಿರ್ಮಾಣ ಮತ್ತು ಸರಬರಾಜು (ಸಪ್ಲೈ) ಸಚಿವರಾಗಿ, 1961 ರಿಂದ 1963ರವರೆಗೆ ಭಾರತ ಸರ್ಕಾರದಲ್ಲಿ ವಾಣಿಜ್ಯ ಮತ್ತು ಗೃಹ (ಹೋಂ) ಸಚಿವರಾಗಿದ್ದರು. ಇವರು 1963–64ರ ಸಮಯದಲ್ಲಿ ಲೋಕಸಭೆಯ ಕಾಂಗ್ರೆಸ್ ಪಕ್ಷದ ಉಪನಾಯಕರಾಗಿ ಆಯ್ಕೆಯಾಗಿದ್ದರು. ಇವರು 1965ರಿಂದ 1971ರವರೆಗೆ ಮಧ್ಯ ಪ್ರದೇಶದ ರಾಜ್ಯಪಾಲರೂ ಆಗಿದ್ದರು.

ಅರ್ಥಶಾಸ್ತ್ರದಲ್ಲಿ ಪಂಡಿತರೂ ಮತ್ತು ಅನುಭವಿಗಳೂ ಎಂದು ಹೆಸರಾಗಿದ್ದ ಚೆಂಗಲರಾಯರು ದೆಹಲಿ ಅರ್ಥಶಾಸ್ತ್ರ ಶಾಲೆಯ (ಡೆಲ್ಲಿ ಸ್ಕೂಲ್ ಆಫ್ ಎಕನಾಮಿಕ್ಸ್) ಸಂಸ್ಥಾಪಕ ಸದಸ್ಯರಲ್ಲಿ ಒಬ್ಬರಾಗಿದ್ದರು. ಇವರು ಕನ್ನಡ ಪತ್ರಿಕೋದ್ಯಮದಲ್ಲೂ ಉತ್ತಮ ಕೆಲಸವನ್ನು ಮಾಡಿದ್ದಾರೆ. ಜನವಾಣಿ ದಿನಪತ್ರಿಕೆಯ ಸಂಪಾದಕರಾಗಿದ್ದರು. ಚೆಂಗಲರಾಯರು 1976ರಲ್ಲಿ ಬೆಂಗಳೂರಿನಲ್ಲಿ ನಿಧನರಾದರು.

ಸ್ಯಾಂಟ್ರೊ ರವಿ ಪ್ರಕರಣ: ಕುಮಾರಕೃಪ ಅತಿಥಿಗೃಹ ಅಧಿಕಾರಿ ಎತ್ತಂಗಡಿ

ಬೆಂಗಳೂರು: ರಾಜ್ಯ ರಾಜಕಾರಣದಲ್ಲಿ ಭಾರೀ ಸಂಚಲನ ಸೃಷ್ಟಿಸಿರುವ ಸ್ಯಾಂಟ್ರೋ ರವಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕುಮಾರಕೃಪ ಅತಿಥಿಗೃಹ ಅಧಿಕಾರಿಯನ್ನು ಎತ್ತಂಗಡಿ ಮಾಡಲಾಗಿದೆ ಎಂದು ತಿಳಿದುಬಂದಿದೆ.



ಸ್ಯಾಂಟ್ರೊ ರವಿ

ಮೂಲಗಳ ಪ್ರಕಾರ ಸ್ಯಾಂಟ್ರೊ ರವಿ ಕಾರ್ಯಸ್ಥಾನ ಬೆಂಗಳೂರಿನ ಕುಮಾರ ಕೃಪ ಅತಿಥಿಗೃಹ ಆಗಿತ್ತು ಎಂಬ ವರದಿಗಳ ಹಿನ್ನೆಲೆಯಲ್ಲಿ ರಾಜ್ಯಸರ್ಕಾರ ಕುಮಾರಕೃಪ ಅತಿಥಿಗೃಹದ ಅಧಿಕಾರಿಯನ್ನು ಎತ್ತಂಗಡಿ ಮಾಡಿದೆ. ಸ್ಯಾಂಟ್ರೊ ರವಿ ಕುಮಾರ ಕೃಪ ಅತಿಥಿ ಗೃಹದಲ್ಲೇ ವರ್ಗಾವಣೆ ಸೇರಿದಂತೆ ಕೆಲ ವ್ಯವಹಾರಗಳನ್ನು ಮಾಡುತ್ತಿದ್ದ ವರದಿಗಳ ಹಿನ್ನೆಲೆಯಲ್ಲಿ ಕುಮಾರಕೃಪ ಅತಿಥಿ ಗೃಹ ಸಹಾಯಕ ವ್ಯವಸ್ಥಾಪಕ ದೇವರಾಜ್ ಅವರನ್ನು ಸರ್ಕಾರ ವರ್ಗಾವಣೆ ಮಾಡಲಾಗಿದೆ ಎಂದು ತಿಳಿದುಬಂದಿದೆ.

ಕುಮಾರಕೃಪ ಅತಿಥಿ ಗೃಹ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ವ್ಯಾಪ್ತಿಗೆ ಸೇರಿದ್ದಾಗಿದ್ದು, ದೇವರಾಜ್ ಅವರನ್ನು ವರ್ಗಾಯಿಸಿ ಅವರಿಗೆ ಯಾವುದೇ ಹುದ್ದೆ ನೀಡದೆ ಕೇಂದ್ರ ಕಚೇರಿಯಲ್ಲಿ ವರದಿ ಮಾಡಿಕೊಳ್ಳುವಂತೆ ಆದೇಶ ಹೊರಡಿಸಲಾಗಿದೆ ಎನ್ನಲಾಗಿದೆ.

ಸ್ಯಾಂಟ್ರೋ ರವಿ ಬಂಧನಕ್ಕೆ ತೀವ್ರ ಶೋಧ: ಇನ್ನು ಸ್ಯಾಂಟ್ರೋ ರವಿ ಬಂಧನಕ್ಕೆ ನಗರ ಪೊಲೀಸರು ತೀವ್ರ ಶೋಧ ಕೈಗೊಂಡಿದ್ದಾರೆ. ಕೆ.ಎಸ್.ಮಂಜುನಾಥ್ ಅಲಿಯಾಸ್ ಸ್ಯಾಂಟ್ರೋ ರವಿ ವಿರುದ್ಧ ವರದಕ್ಷಿಣೆ ಕಿರುಕುಳ, ವಂಚನೆ, ಅತ್ಯಾಚಾರ ಪ್ರಕರಣಗಳು ದಾಖಲಾಗಿದ್ದು, ಪ್ರಕರಣ ದಾಖಲಾಗಿ 5 ದಿನಗಳು ಕಳೆದರೂ ಸ್ಯಾಂಟ್ರೋ ರವಿ ಮಾತ್ರ ಪೊಲೀಸರ ಕೈಗೆ ಸಿಕ್ಕಿಲ್ಲ.. ಸದ್ಯ ತಲೆಮರೆಸಿಕೊಂಡಿರುವ ಸ್ಯಾಂಟ್ರೋ ರವಿ ಬಂಧನಕ್ಕೆ ಪೊಲೀಸರು ಶೋಧಕಾರ್ಯ ನಡೆಸುತ್ತಿದ್ದಾರೆ. ವಂಚನೆ, ವರದಕ್ಷಿಣೆ, ಕಿರುಕುಳ, ಅತ್ಯಾಚಾರ ಆರೋಪದಡಿ ಸ್ಯಾಂಟ್ರೋ ರವಿ ವಿರುದ್ಧ ಜ.2ರಂದು ವಿಜಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ತನ್ನ ವಿರುದ್ಧ ದೂರುಗಳು ದಾಖಲಾಗುತ್ತಿದ್ದಂತೆ ಆರೋಪಿ ಸ್ಯಾಂಟ್ರೋ ರವಿ ಪರಾರಿಯಾಗಿದ್ದಾನೆ.

ಪೊಲೀಸ್ ವಿಶೇಷ ತಂಡ ರಚನೆ: ರವಿ ಬಂಧನಕ್ಕೆ ಈತನ ಪತ್ತೆಗಾಗಿ ಡಿಸಿಪಿ ಮುತ್ತುರಾಜ್ ಮಾರ್ಗದರ್ಶನದಲ್ಲಿ ಎಸಿಪಿ ಶಿವಶಂಕರ್ ನೇತೃತ್ವದಲ್ಲಿ ರಚಿಸಿರುವ ವಿಶೇಷ ತಂಡದಲ್ಲಿ ಮೂವರು ಇನ್ಸಪೆಕ್ಟರ್, ಐದಕ್ಕೂ ಹೆಚ್ಚು ಸಬ್‌ಇನ್ಸಪೆಕ್ಟರ್‌ಗಳು ಒಳಗೊಂಡಿರುವ ವಿಶೇಷ ತಂಡಗಳನ್ನು ರಚಿಸಲಾಗಿದ್ದು, ಈ ತಂಡಗಳು ಶೋಧ ಕೈಗೊಂಡಿವೆ. ಪೊಲೀಸರು ಬೆಂಗಳೂರು ಹಾಗೂ ಮೈಸೂರಿನಲ್ಲಿ ಸ್ಯಾಂಟ್ರೋ ರವಿಗಾಗಿ ಹುಡುಕಾಟ ನಡೆಸುತ್ತಿದ್ದು, ಒಡನಾಡಿ ಸಂಸ್ಥೆಯಿಂದಲೂ ಮಾಹಿತಿ ಕಲೆ ಹಾಕುತ್ತಿದ್ದಾರೆ. ಈ ನಡುವೆ ಸ್ಯಾಂಟ್ರೋ ರವಿ ತನ್ನ ವಕೀಲರ ಮೂಲಕ ಮೈಸೂರು ಸೆಷನ್ ಕೋರ್ಟ್‌ಗೆ ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದಾನೆ.

ವೈರಲ್ ಆಡಿಯೋ ಬಳಿಕ ಭಾರಿ ಸುದ್ದಿಗೆ ಗ್ರಾಸ: ವರ್ಗಾವಣೆ ವಿಚಾರದಲ್ಲಿ ಡಿವೈಎಸ್‌ಪಿ ಜೊತೆಗಿನ ಮಾತುಕತೆಯ ಆಡಿಯೋ ವೈರಲ್ ಆದ ನಂತರ ರಾಜ್ಯದಲ್ಲಿ ಸ್ಯಾಂಟ್ರೋ ರವಿ ಹೆಸರು ಮುನ್ನಲೆಗೆ ಬಂದಿತ್ತು. ಇದಾದ ನಂತರ ಹಲವು ಪ್ರಭಾವಿ ರಾಜಕೀಯ ನಾಯಕರ ಜೊತೆ ಚಾಟಿಂಗ್ ನಡೆಸಿರುವ ಹಾಗೂ ತೆಗೆಸಿಕೊಂಡಿದ್ದ ಫೋಟೋಗಳು ವೈರಲ್ ಆದವು. ಸಿಎಂ ಬಸವರಾಜ ಬೊಮ್ಮಾಯಿ, ಗೃಹಸಚಿವ ಆರಗ ಜ್ಞಾನೇಂದ್ರ, ಸಚಿವ ಎಸ್.ಟಿ. ಸೋಮಶೇಖರ್, ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಜೊತೆ ಮಾತ್ರವಲ್ಲದೆ ಉನ್ನತ ಹುದ್ದೆಗಳಲ್ಲಿ ಇರುವ ಅಧಿಕಾರಿಗಳೊಂದಿಗೆ ಮಾಡಿದ್ದಾನೆ ಎನ್ನಲಾದ ವಾಟ್ಸ್‌ಆಪ್ ಚಾಟ್‌ಗಳು ಹರಿದಾಡುತ್ತಿವೆ. ಇದನ್ನೇ ಅಸ್ತ್ರವನ್ನಾಗಿಸಿಕೊಂಡಿರುವ ವಿಪಕ್ಷಗಳಾದ ಕಾಂಗ್ರೆಸ್ ಮತ್ತು ಜೆಡಿಎಸ್, ಬಿಜೆಪಿ ವಿರುದ್ಧ ಟೀಕಾಪ್ರಹಾರ ನಡೆಸುತ್ತಿವೆ.

ನಾಳೆ ರೋಟರಿ ಆರೋಗ್ಯಸಿರಿಯಡಿ ವಿಶೇಷಚೇತನರಿಗೆ ಉಚಿತ ಸೌಲಭ್ಯ ವಿತರಣೆ

ಮೈಸೂರು,ಜ.7(ಪಿಎಂ)–ರೋಟರಿ ಕ್ಲಬ್ ಆಫ್ ಮೈಸೂರು ಸೌತ್ ಈಸ್ಟ್ ವತಿಯಿಂದ ಜ.9ರಂದು ಕ್ಲಬ್‌ನ ಆರೋಗ್ಯಸಿರಿ ಯೋಜನೆಯಡಿ ವಿಕಲಚೇತನರಿಗೆ ಉಚಿತವಾಗಿ ಕೃತಕ ಕಾಲು, ಹೊಲಿಗೆ ಯಂತ್ರ, ಬ್ರೈಲ್ ವಾಚ್ ಮತ್ತು ವಿಕಲಚೇತನರ ಗಾಯನ ತಂಡಕ್ಕೆ ಮ್ಯೂಸಿಕ್ ಸಿಸ್ಟಮ್ ವಿತರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಕ್ಲಬ್ ಅಧ್ಯಕ್ಷ ಎಂ.ಮೋಹನ್ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವಿದ್ಯಾರಣ್ಯಪುರಂನ ನಿತ್ಯಾನಂದ ಕಲ್ಯಾಣ ಮಂಟಪದಲ್ಲಿ ಅಂದು ಬೆಳಗ್ಗೆ 11ಕ್ಕೆ ಕಾರ್ಯಕ್ರಮ ನಡೆಯಲಿದೆ. ಮುಖ್ಯ ಅತಿಥಿಯಾಗಿ ರೋಟರಿ ಜಿಲ್ಲಾ ಗೌರ್ನರ್ (3181) ಪ್ರಕಾಶ್ ಕಾರಂತ್ ಪಾಲ್ಗೊಳ್ಳಲಿದ್ದಾರೆ ಎಂದರು.

ಜಿಲ್ಲಾ ಅಂಗವಿಕಲರ ಪುನರ್‌ವಸತಿ ಕೇಂದ್ರದಲ್ಲಿ ನೋಂದಾಯಿಸಲ್ಪಟ್ಟ ವಿಶೇಷಚೇತನರಿಗೆ ಈ ಸೌಲಭ್ಯ ನೀಡಲಾಗುತ್ತಿದೆ. 50 ಮಂದಿಗೆ ಕೃತಕ ಕಾಲುಗಳನ್ನು ನೀಡುತ್ತಿದ್ದು, 25 ಮಂದಿಗೆ ಹೊಲಿಗೆ ಯಂತ್ರ ಮತ್ತು 20 ಮಂದಿಗೆ ಬ್ರೈಲ್ ವಾಚ್ ವಿತರಣೆ ಮಾಡಲಾಗುವುದು. ಜೊತೆಗೆ ಅಂಧ ಗಾಯಕ ತಂಡವೊಂದಕ್ಕೆ ಮ್ಯೂಸಿಕ್ ಸಿಸ್ಟಮ್ ಅನ್ನು ಕೊಡುಗೆಯಾಗಿ ನೀಡಲಾಗುವುದು ಎಂದರು. ರೋಟರಿ ಜಿಲ್ಲೆ 3181ರ ಸಹಾಯಕ ಗೌರ್ನರ್ ಎಸ್.ವಾಸುದೇವನ್, ವಲಯ–8ರ ವಲಯ ಸೇನಾಧಿಕಾರಿ ರವೀಂದ್ರ, ರೋಟರಿ ಕ್ಲಬ್ ಆಫ್ ಮೈಸೂರು ಸೌತ್ ಈಸ್ಟ್ ಕಾರ್ಯದರ್ಶಿ ಕೆ.ಎನ್.ಮುರಳಿಧರ್ ಗೋಷ್ಠಿಯಲ್ಲಿದ್ದರು.

ನಾಳೆ ಜಯಂತಿ ಆಚರಣೆಗಳ ಪೂರ್ವಭಾವಿ ಸಭೆ

ಮೈಸೂರು,ಜ.7–ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಜನವರಿ ಮಾಹೆಯಲ್ಲಿ ಆಚರಿಸುವ ವಿವಿಧ ಜಯಂತಿಗಳನ್ನು ಆಚರಿಸುವ ಸಂಬಂಧ ಡಿಸಿ ಕಚೇರಿಯಲ್ಲಿ ಜ.9ರಂದು ಎಡಿಸಿ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ಹಮ್ಮಿಕೊಳ್ಳಲಾಗಿದೆ. ಅಂದು ಬೆಳಗ್ಗೆ 10.30ಕ್ಕೆ ಮಹಾಯೋಗಿ ವೇಮನ ಜಯಂತಿ ಆಚರಣೆ ಕುರಿತು, ಬೆಳಗ್ಗೆ 11ಕ್ಕೆ ಅಂಬಿಗರ ಚೌಡಯ್ಯ ಜಯಂತಿ ಆಚರಣೆ ಮತ್ತು ಬೆಳಗ್ಗೆ 11.30 ಗಂಟೆಗೆ ಶ್ರೀ ಶಿವಯೋಗಿ ಸಿದ್ಧರಾಮೇಶ್ವರ ಜಯಂತಿ ಆಚರಣೆ ಕುರಿತು ಪೂರ್ವಭಾವಿ ಸಭೆ ನಡೆಯಲಿದೆ.



ಇತ್ತೀಚೆಗೆ ಮೈಸೂರಿನ ಪುರಭವನದಲ್ಲಿ ನಡೆದ ಸಮಾರಂಭದಲ್ಲಿ ಸಮಾಜ ಸೇವಕ ಹಾಗೂ ಚಾಮುಂಡೇಶ್ವರಿ ಕ್ಷೇತ್ರದ ಎಸ್.ಟಿ. ಮೋರ್ಚಾ ಅಧ್ಯಕ್ಷ ಕೆ.ನಾಗೇಶ್ ನಾಯ್ಕ ಅವರಿಗೆ ಕಾವೇರಿ ಕರ್ನಾಟಕ ಪ್ರಶಸ್ತಿ ಪ್ರದಾನ ಮಾಡಲಾಯಿತು. ಬೆಳಗಾವಿಯ ಹಿರೇಮಠದ ಶ್ರೀ ಕಲ್ಮೇಶ್ವರ ಸ್ವಾಮಿಗಳು ಸಮಾರಂಭದ ಸಾನ್ನಿಧ್ಯ ವಹಿಸಿದ್ದರು. ಹಿರಿಯ ಗಜಲ್ ಕವಿ ಸಿದ್ದರಾಮ ಹೊನ್ಕಲ್ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಶಾಸಕ ಇ.ಮಾರುತಿರಾವ್ ಪವಾರ್, ಚಿತ್ರನಟ ಗಣೇಶ್‌ರಾವ್ ಕೇಸರ್‌ಕರ್, ಡಾ.ಚಿಕ್ಕಹೆಜ್ಜಾಜಿ ಮಹದೇವ, ನಟಿ ಶ್ರೀಮತಿ ಮೀನಾ, ಅಕಾಡೆಮಿ ಅಧ್ಯಕ್ಷ ರಮೇಶ್ ಸುರ್ವೆ, ಗೌರವಾಧ್ಯಕ್ಷ ಲಯನ್ ವೆಂಕಟೇಶ್ ಉಪಸ್ಥಿತರಿದ್ದರು.


Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಪ್ರತಿ ತಿಂಗಳು 2, 4ನೇ ಮಂಗಳವಾರ ಮುಡಾ ಅದಾಲತ್

ಮೈಸೂರು, ಜ.7(ಎಂಕೆ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದ ವತಿಯಿಂದ ಜ.10ರಿಂದ ತಿಂಗಳ ಪ್ರತಿ 2ನೇ ಮತ್ತು 4ನೇ ಮಂಗಳವಾರ 'ಮುಡಾ ಅದಾಲತ್' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ಸೂಚನೆಯಂತೆ ಮಧ್ಯಾಹ್ನ 2ರಿಂದ ಸಂಜೆ 4.30ರವರೆಗೆ 'ಮುಡಾ ಅದಾಲತ್' ಕಾರ್ಯಕ್ರಮ ನಡೆಯಲಿದೆ. ಅದಾಲತ್‌ನಲ್ಲಿ ಮುಡಾದಿಂದ ಸಾರ್ವಜನಿಕರಿಗೆ ನೀಡುವ ಅನುಮೋದನೆಗಳು, ಸೇವೆಗಳಿಗೆ ಸಂಬಂಧಪಟ್ಟಂತೆ ಸಾರ್ವಜನಿಕರು ಎದುರಿಸುತ್ತಿರುವ ಸಮಸ್ಯೆಗಳು ಅಥವಾ ಅವುಗಳಿಗೆ ಸಂಬಂಧಿಸಿದ ದೂರುಗಳು ಇದ್ದಲ್ಲಿ ಪರಿಹರಿಸಲಾಗುವುದು.

ಮುಡಾ ಅದಾಲತ್‌ನಲ್ಲಿ ಹೊಸದಾಗಿ ನಿವೇಶನಕ್ಕೆ ಅರ್ಜಿ ಸಲ್ಲಿಸಲು ಅವಕಾಶ ಇರುವುದಿಲ್ಲ. ಅರ್ಜಿದಾರರು ಮಾತ್ರ ಹಾಜರಾಗಲು ಅವಕಾಶವಿರುತ್ತದೆ. ಭೂ ಉಪಯೋಗ ಮಾಹಿತಿ ಅಥವಾ ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುವುದು. ಭೂಸ್ವಾಧೀನ ಪಡಿಸಿಕೊಂಡ ಜಮೀನಿಗೆ ಪರಿಹಾರ ಪಾವತಿ ಬಾಕಿ ಇರುವುದು. ಭೂ ಸ್ವಾಧೀನ ಅವಾರ್ಡ್ ಅಥವಾ ನೋಟಿಫಿಕೇಷನ್ ನಕಲು ಹಾಗೂ ಇತರೆ ನಕಲುಗಳನ್ನು ಕೋರಿ ಸಲ್ಲಿಸಿರುವ ಅರ್ಜಿಗಳು. ಕಟ್ಟಡ ಪೂರ್ಣಗೊಂಡ ಬಗ್ಗೆ ಮುಕ್ತಾಯ ಅರ್ಜಿ ಸಲ್ಲಿಸಿರುವುದು, ಮನೆ ಕಂದಾಯ ನಿಗಧಿಗೆ ಅರ್ಜಿ ಸಲ್ಲಿಸಿರುವುದು. ಬದಲಿ ನಿವೇಶನ ಕೋರಿರುವುದು. ಮಂಜೂರಾತಿ ಪತ್ರ, ಸ್ವಾಧೀನ ಪತ್ರ, ಖಾತಾ ಕಂದಾಯ ಇತರೆ ದಾಖಲಾತಿಗಳ ದೃಢೀಕೃತ ನಕಲು ಕೋರಿ ಅರ್ಜಿ ಸಲ್ಲಿಸುವುದು ಹಾಗೂ ನಿವೇಶನ ಅಥವಾ ಮನೆಯ ಕ್ರಯ ಪತ್ರ ಕೋರಿ ಸಲ್ಲಿಸಿರುವ ಅರ್ಜಿಗಳಿಗೆ ಪರಿಹಾರ ನೀಡಲಾಗುವುದು.

ಕಾರು ಡಿಕ್ಕಿ: ಚಿರತೆ ಸಾವು



ಮೈಸೂರು, ಜ.7– ಮೈಸೂರಿನ ರಿಂಗ್ ರಸ್ತೆಯ ಉತ್ತನಹಳ್ಳಿಯ ಜಂಕ್ಷನ್ ಬಳಿ ಸರ್ವೀಸ್ ರಸ್ತೆಯಲ್ಲಿ ಶನಿವಾರ ಮುಂಜಾನೆ ಕಾರೊಂದು ಡಿಕ್ಕಿ ಹೊಡೆದ ಪರಿಣಾಮ ಗಂಡು ಚಿರತೆ ಗಂಭೀರವಾಗಿ ಗಾಯಗೊಂಡು, ನಂತರ ಚಿಕಿತ್ಸೆ ಫಲಕಾರಿಯಾಗದೇ ಸಾವಿಗೀಡಾಗಿದೆ. ಕಾರು ಡಿಕ್ಕಿ ಹೊಡೆದು ಚಿರತೆ ಗಾಯಗೊಂಡಿರುವ ವಿಚಾರ ತಿಳಿದು ಅರಣ್ಯ ಇಲಾಖೆ ಸಿಬ್ಬಂದಿ ಮುಂಜಾನೆಯೇ ಸ್ಥಳಕ್ಕೆ ಧಾವಿಸಿ, ಚಿರತೆಗೆ ಚಿಕಿತ್ಸೆ ಕೊಡಿಸುವ ಸಲುವಾಗಿ ಮೈಸೂರು ಮೃಗಾಲಯದ ಪಶುವೈದ್ಯರ ಬಳಿ ಕೊಂಡೊಯ್ದಿದ್ದಾರೆ. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಬೆಳಗ್ಗೆ 5ಗಂಟೆ ವೇಳೆಗೆ ಮೃತಪಟ್ಟಿದೆ. ಬೆಳಗ್ಗೆ 10ಗಂಟೆಗೆ ಮರಣೋತ್ತರ ಪರೀಕ್ಷೆ ನಡೆಸಿ ಅರಣ್ಯ ಇಲಾಖೆಯ ನಿಯಮಾನುಸಾರ ಅಂತಿಮ ಕಾರ್ಯ ನೆರವೇರಿಸಲಾಗಿದೆ. ಘಟನೆ ನಡೆದಾಗ ಸ್ಥಳಕ್ಕೆ ಗಸ್ತು ನಿರತ ಆಲನಹಳ್ಳಿ ಪೊಲೀಸರು ಭೇಟಿ ನೀಡಿ ಗಾಯಗೊಂಡ ಚಿರತೆ ಬಳಿ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಟ್ಟಿದ್ದಾರೆ. ಚಿರತೆಗೆ ಡಿಕ್ಕಿ ಹೊಡೆದ ಕಾರು ಪತ್ತೆಯಾಗಿಲ್ಲ.

ಉತ್ತಮ ಜೀವನಕ್ಕೆ ಆರೋಗ್ಯಕರ ಮನಸ್ಸು ಸಹಕಾರಿ



ಮೈಸೂರು, ಜ.7(ಎಂಕೆ)– ಆರೋಗ್ಯಕರ ಮನಸ್ಸು ಉತ್ತಮ ಜೀವನಕ್ಕೆ ಸಹಕಾರಿ ಎಂದು ಭಾರತೀಯ ಮನೋವೈದ್ಯಕೀಯ ಸಂಘದ ಅಧ್ಯಕ್ಷ ಡಾ.ಎನ್.ಎನ್.ರಾಜು ಹೇಳಿದರು. ನಗರದ ಸಂದೇಶ್ ದಿ ಪ್ರಿನ್ಸ್ ಹೋಟೆಲ್‌ನಲ್ಲಿ ಇಂಡಿಯನ್ ಸೈಕಾಸ್ಟಿಕ್ ಸೊಸೈಟಿ ಹಾಗೂ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯು ಶನಿವಾರ ಆಯೋಜಿಸಿದ ಭಾರತೀಯ ಮನೋವೈದ್ಯಕೀಯ ಸಂಘದ ಸ್ಥಾಪನಾ ದಿನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 1947ರಲ್ಲಿ ಕೆಲವೇ ಜನರಿಂದ ಪ್ರಾರಂಭಗೊಂಡ ಸಂಘ ಇಂದು ವಿವಿಧ ದೇಶಗಳ 8 ಸಾವಿರ ಸದಸ್ಯರನ್ನು ಹೊಂದಿದೆ. ನಮ್ಮ ವೃತ್ತಿಯೊಂದಿಗೆ ಸಮಾಜದ ಬಗ್ಗೆ ಕಾಳಜಿ ವಹಿಸಿ, ಅವರಿಗೆ ಮಾಹಿತಿ ನೀಡುವ ಕೆಲಸ ಮಾಡುತ್ತಿದ್ದೇವೆ ಎಂದರು. ಉತ್ತಮ ನಿರ್ಧಾರಗಳನ್ನು ಕೈಗೊಳ್ಳಲು ಮತ್ತು ದೈಹಿಕವಾಗಿ ಸದೃಢರಾಗಿರಬೇಕಾದರೆ ಮನಸ್ಸು ಆರೋಗ್ಯಕರವಾಗಿ ಇರಬೇಕು. ಆಧುನಿಕ ಯುಗದಲ್ಲಿ ಮಾನಸಿಕ ನೆಮ್ಮದಿಗಾಗಿ ಹಪಹಪಿಸುತ್ತಿರುವುದನ್ನು ಕಾಣುತ್ತಿದ್ದೇವೆ. ದಕ್ಷಿಣ ಭಾರತದಲ್ಲಿ ಮನಃಶಾಸ್ತ್ರಜ್ಞ ವೈದ್ಯರ ಸಂಖ್ಯೆ ಸಾಕಷ್ಟಿದೆ. ಮಾನಸಿಕ ನೆಮ್ಮದಿಯನ್ನು ಕಂಡುಕೊಳ್ಳಲು ಬೇಕಾದ ಉಪಕ್ರಮಗಳ ಬಗ್ಗೆ ಯೋಜನೆ ರೂಪಿಸಲು ಸರ್ಕಾರ ಸಹಕಾರ ನೀಡಿದರೆ, ಪರಿಹಾರ ಕ್ರಮ ಕೈಗೊಳ್ಳಲು ಸಿದ್ಧರಿದ್ದೇವೆ ಎಂದರು.

ನ್ಯಾಯಮೂರ್ತಿ ಎನ್.ಕುಮಾರ್, ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ.ಎಚ್.ಬಸವನ ಗೌಡಪ್ಪ, ಡಾ.ಮುರುಗೇಶ್ ವೈಷ್ಣವ್, ಡಾ.ಅರಬಿಂದ ಬ್ರಹ್ಮ, ಡಾ.ವಿನಯ್ ಕುಮಾರ್, ಪ್ರೊ.ಟಿ.ಎಸ್.ರಾವ್, ಡಾ.ಕಿಶೋರ್ ಮತ್ತಿತರರಿದ್ದರು.

ಬಿಜೆಪಿ ಎಲ್ಲಾ ವರ್ಗದ ಹಿತ ಕಾಯುವ ಪಕ್ಷ

ಮೂಗನಹುಂಡಿ ಗ್ರಾಮದಲ್ಲಿ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಎನ್.ಅರುಣ್‌ಕುಮಾರ್‌ಗೌಡ ಸಮರ್ಥನೆ



ಮೈಸೂರು, ಡಿ.7–ಭಾರತೀಯ ಜನತಾ ಪಾರ್ಟಿಯು ನಿಜವಾದ ಜಾತ್ಯಾತೀತ ನಿಲುವು ಹೊಂದಿದ್ದು,ಎಲ್ಲಾ ಜಾತಿ ಜನಾಂಗಗಳ ಹಾಗೂ ವರ್ಗಗಳ ಹಿತ ಕಾಯುವುದನ್ನು ತನ್ನ ಮೂಲ ಉದ್ದೇಶವನ್ನಾಗಿಸಿಕೊಂಡಿದೆ ಎಂದು ಚಾಮುಂಡೇಶ್ವರಿ ಕ್ಷೇತ್ರದ ನಿಕಟಪೂರ್ವ ಬಿಜೆಪಿ ಅಧ್ಯಕ್ಷ ಹಾಗೂ ಮುಖಂಡ ಎನ್.ಅರುಣ್ ಕುಮಾರ್ ಗೌಡ ಹೇಳಿದರು.. ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಮೂಗನ ಹುಂಡಿ ಗ್ರಾಮದಲ್ಲಿ ನಡೆದ ಬೂತ್ ವಿಜಯ ಅಭಿಯಾನ ಹಾಗೂ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಯುವ ಮುಖಂಡರುಗಳಾದ ಮಂಜು,ಪ್ರಭು, ಶೇಖರ್, ಪ್ರವೀಣ್,ಪಚ್ಚೇಗೌಡ, ಸತೀಶ್ ಹೊಂಬಯ್ಯ,ಮಹಾದೇವ, ಕುಮಾರ್ ಸೇರಿದಂತೆ ಮತ್ತಿತರರನ್ನು ಬಿಜೆಪಿಗೆ ಸ್ವಾಗತಿಸಿ ಮಾತನಾಡಿದ ಅರುಣ್ ಕುಮಾರ್ ಗೌಡ, ಭಾರತೀಯ ಜನತಾ ಪಾರ್ಟಿ ಬೇರೆ ಪಕ್ಷಗಳ ರೀತಿ ಜಾತ್ಯಾತೀತ ನಿಲುವನ್ನು ಕೇವಲ ತೋರಿಕೆಗೆ ಅಳವಡಿಸಿಕೊಳ್ಳದೆ, ಪ್ರಾಮಾಣಿಕವಾಗಿ ಎಲ್ಲಾ ಜಾತಿ ಜನಾಂಗಗಳ ಹಾಗೂ ವರ್ಗಗಳ ಸಬಲೀಕರಣ ಹಾಗೂ ಉನ್ನತೀಕರಣಕ್ಕಾಗಿ ಶ್ರಮಿಸುತ್ತಿದೆ ಎಂದರು.

ಚಾಮುಂಡೇಶ್ವರಿ ಕ್ಷೇತ್ರ ಹಲವಾರು ವೈಶಿಷ್ಟಗಳನ್ನು ಹೊಂದಿದ್ದು,ಎಲ್ಲ ಜಾತಿ–ಜನಾಂಗಗಳ ಮತದಾರರಿಂದ ಕೂಡಿದ ಕ್ಷೇತ್ರವಾಗಿದೆ. ಭೌಗೋಳಿಕವಾಗಿಯೂ ತುಂಬಾ ವಿಸ್ತಾರವಾಗಿರುವ ಕ್ಷೇತ್ರವಾಗಿದೆ.ಇಂತಹ ಕ್ಷೇತ್ರದ ಮತದಾರರು ನಿಜವಾದ ಜಾತ್ಯತೀತ ನಿಲುವನ್ನು ಅಳವಡಿಸಿಕೊಂಡಿರುವ ಭಾರತೀಯ ಜನತಾ ಪಾರ್ಟಿಯನ್ನು ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಬೆಂಬಲಿಸುವುದು ನಿಶ್ಚಿತ ಎಂದರು.

ಈ ಸಂದರ್ಭದಲ್ಲಿ ಬೂತ್ ವಿಜಯ ಅಭಿಯಾನದ ಸಂಚಾಲಕರಾದ ಹಿನಕಲ್ ಶ್ರೀನಿವಾಸ್,ಪಕ್ಷದ ಮಾಜಿ ಪ್ರಧಾನ ಕಾರ್ಯದರ್ಶಿ ಗೋಪಾಲ್ , ರವಿಕುಮಾರ್ ಎನ್. ಕೆ.,ನಿಂಗರಾಜು,ಮೋಹನ್ ಕುಮಾರ್, ಹರೀಶ್ ಮತ್ತಿತರರಿದ್ದರು.

ಹಳೇ ಉಂಡುವಾಡಿ ಕುಡಿಯುವ ನೀರು ಯೋಜನೆಗೆ ಮುಡಾ ಪಾಲಿನ ಹಣ ಹಂತ ಹಂತವಾಗಿ ಬಿಡುಗಡೆ

ಮುಡಾ ಸಭೆಯಲ್ಲಿ ನಿರ್ಧಾರ



ಮೈಸೂರು, ಜ.7– ಹಳೇ ಉಂಡುವಾಡಿ ಯೋಜನೆಯ ಅಂದಾಜು ವೆಚ್ಚ ಹೆಚ್ಚಾಗಿದ್ದು, ಅದಕ್ಕನುಗುಣವಾಗಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದ ವಂತಿಗೆ ನೀಡಲು ನಿರ್ಧರಿಸಲಾಗಿದೆ.

ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ಅಧ್ಯಕ್ಷತೆಯಲ್ಲಿ ಶನಿವಾರ ನಡೆದ ಆಡಳಿತ ಮಂಡಳಿ ಸಭೆಯಲ್ಲಿ, ಶಾಸಕ ಜಿ.ಟಿ.ದೇವೇಗೌಡರು ಹಳೇ ಉಂಡುವಾಡಿ ಕುಡಿಯುವ ನೀರಿನ ಯೋಜನೆ ಬಗ್ಗೆ ಪ್ರಸ್ತಾಪಿಸಿ, ಮುಡಾ ಹಾಗೂ ಪಾಲಿಕೆ ವಂತಿಕೆ ಬಿಡುಗಡೆ ಮಾಡಿದರೆ ತ್ವರಿತಗತಿಯಲ್ಲಿ ಕಾಮಗಾರಿ ಪೂರ್ಣಗೊಂಡು ಸಾರ್ವಜನಿಕರಿಗೆ ಅನುಕೂಲವಾಗಲಿದೆ ಎಂದರು.


ಈ ಬಗ್ಗೆ ಚರ್ಚೆಯಾದ ಬಳಿಕ ಹಳೇ ಉಂಡುವಾಡಿ ಯೋಜನೆಯಿಂದ ನಗರದ ಅರ್ಧದಷ್ಟು ಪ್ರದೇಶ ಸೇರಿದಂತೆ ತಾಲೂಕಿನ ಬಹುತೇಕ ಹಳ್ಳಿಗಳಿಗೆ ಸಮರ್ಪಕವಾಗಿ ಕುಡಿಯುವ ನೀರು ಕಲ್ಪಿತವಾಗಲಿದೆ. ಯೋಜನೆಗೆ ಮುಡಾದಿಂದ 100 ಕೋಟಿ ರೂ. ವಂತಿಕೆ ನೀಡಬೇಕೆಂದು ನಿರ್ಣಯಿಸಲಾಗಿತ್ತು ಆದರೆ ಯೋಜನಾ ವೆಚ್ಚ ಹೆಚ್ಚಾಗಿರುವ ಕಾರಣ ಪಾವತಿಸಬೇಕಿರುವ 208 ಕೋಟಿ ರೂ. ಅನುದಾನವನ್ನು ಹಂತ ಹಂತವಾಗಿ ಬಿಡುಗಡೆ ಮಾಡಲು ನಿರ್ಣಯಿಸಲಾಯಿತು. ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ(ಸ್ಲಂ ಬೋರ್ಡ್) ವತಿಯಿಂದ ಮನೆಗಳನ್ನು ನಿರ್ಮಿಸಲು ಒಪ್ಪಿಗೆ ಸಿಕ್ಕಿರುವುದರಿಂದ ಅಗತ್ಯ ಜಾಗವನ್ನು ಮುಡಾದಿಂದ ಹಸ್ತಾಂತರ ಮಾಡಬೇಕೆಂದು ಶಾಸಕ ಎಲ್.ನಾಗೇಂದ್ರ ಆಗ್ರಹಿಸಿದ್ದರ ಹಿನ್ನೆಲೆಯಲ್ಲಿ ಚಾಮರಾಜ ಕ್ಷೇತ್ರದ ವ್ಯಾಪ್ತಿಯ ಕುದುರೆ ಮಾಳದ ಪೌರ ಕಾರ್ಮಿಕರಿಗೆ ಮನೆ ನಿರ್ಮಿಸಿಕೊಡಲು ಸಮೀಪದಲ್ಲೇ ಇರುವ 1.15 ಎಕರೆ ಭೂಮಿಯನ್ನು ಸ್ಲಂ ಬೋರ್ಡ್‌ಗೆ ಹಸ್ತಾಂತರ ಮಾಡಲು ನಿರ್ಧಾರ ಕೈಗೊಳ್ಳಲಾಯಿತು. ಗಾಯತ್ರಿಪುರಂನಲ್ಲಿರುವ ನಗರಪಾಲಿಕೆ ವಲಯ ಕಚೇರಿ 9ಕ್ಕೆ ಸ್ವಂತ ಕಟ್ಟಡ ನಿರ್ಮಾಣಕ್ಕೆ ಅಗತ್ಯ ನಿವೇಶನ ಕಲ್ಪಿಸುವುದು. ವಿಜಯನಗರದಲ್ಲಿ 340 ಮನೆಗಳನ್ನು ನಿರ್ಮಿಸಿದ ಸಂದರ್ಭದಲ್ಲಿ ಅಲ್ಲಿನ 11 ಎಕರೆ 30 ಗುಂಟೆ ಭೂಮಿ ಸಂಪೂರ್ಣವಾಗಿ ಮುಡಾಗೆ ಸೇರಿದೆ ಎಂದು ನೋಟಿಸ್ ನೀಡಲಾಗಿತ್ತಾದರೂ ದಾಖಲೆ ಪರಿಶೀಲನೆ ವೇಳೆ 4 ಎಕರೆ ಮಾತ್ರ ಮುಡಾಗೆ ಸೇರಿದ್ದೆಂದು ತಿಳಿಯಿತು. ಹಾಗಾಗಿ ಉಳಿದ ಜಾಗವನ್ನು ಸಂಬಂಧಪಟ್ಟವರಿಗೆ ವಾಪಸ್ ನೀಡಲು ಕ್ರಮ ವಹಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಯಿತು.

ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ವಿಧಾನ ಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ, ಡಾ.ಡಿ.ತಿಮ್ಮಯ್ಯ, ಮರಿತಿಬ್ಬೇಗೌಡ, ಪಾಲಿಕೆಯಿಂದ ಆಯ್ಕೆಯಾಗಿರುವ ಸದಸ್ಯ ಎಸ್‌ಬಿಎಂ ಮಂಜು, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಮುಡಾ ಆಯುಕ್ತ ಜಿ.ಟಿ.ದಿನೇಶ್ ಕುಮಾರ್, ನಗರಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ್ ರೆಡ್ಡಿ, ಮುಡಾ ಅಧೀಕ್ಷಕ ಅಭಿಯಂತರ ಚನ್ನಕೇಶವ ಮತ್ತಿತರರು ಸಭೆಯಲ್ಲಿ ಪಾಲ್ಗೊಂಡಿದ್ದರು.

ತಮ್ಮ ಅಧ್ಯಕ್ಷತೆಯಲ್ಲಿ ನಡೆದ ಮೊದಲ ಸಭೆಯ ಬಗ್ಗೆ ಪ್ರತಿಕ್ರಿಯಿಸಿದ ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಸಭೆಯಲ್ಲಿ ಸಾಕಷ್ಟು ಮಹತ್ವದ ವಿಚಾರಗಳ ಬಗ್ಗೆ ಚರ್ಚಿಸಲಾಗಿದ್ದು, ನಗರದ ಅಭಿವೃದ್ಧಿ ಹಾಗೂ ಮುಡಾ ಆದಾಯ ವೃದ್ಧಿ ನಿಟ್ಟಿನಲ್ಲಿ ಕೆಲವು ನಿರ್ಣಯಗಳನ್ನೂ ಕೈಗೊಳ್ಳಲಾಗಿದೆ. ಸ್ಥಳೀಯ ಸಂಸ್ಥೆಗಳು ಸಮನ್ವಯತೆಯಿಂದ ಮುನ್ನಡೆಯಬೇಕಿದ್ದು, ಉದ್ಯಾನ ನಿರ್ವಹಣೆ ಸೇರಿದಂತೆ ನಗರ ಪಾಲಿಕೆಯ ಕೆಲ ಕಾರ್ಯಕ್ರಮಗಳಿಗೂ ಸಹಕಾರ ನೀಡಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.

ದೇವಾಲಯಗಳನ್ನು ಸೇವಾ, ಜ್ಞಾನ ಕೇಂದ್ರಗಳನ್ನಾಗಿಸಬೇಕು

ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡರ ಆಶಯ



ಮೈಸೂರು, ಜ.7(ಎಂಕೆ)– ದೇವಾಲಯಗಳನ್ನು ಧಾರ್ಮಿಕ ಕೇಂದ್ರವನ್ನಷ್ಟೇ ಅಲ್ಲದೆ ಸೇವಾ ಹಾಗೂ ಜ್ಞಾನ ಕೇಂದ್ರಗಳನ್ನಾಗಿ ಬದಲಾಯಿಸಬೇಕು ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ ಅಭಿಪ್ರಾಯ ವ್ಯಕ್ತಪಡಿಸಿದರು.

ಮೈಸೂರು ಕುವೆಂಪುನಗರದಲ್ಲಿರುವ ವೀಣೆಶೇಷಣ್ಣ ಭವನದ ಗಾನಭಾರತಿ ರಂಗಮಂದಿರದಲ್ಲಿ ನಾಗರಿಕ ವೇದಿಕೆಯ ಪೂರ್ಣಪ್ರಜ್ಞಾ ವಿದ್ಯಾಕೇಂದ್ರದ ವಾರ್ಷಿಕೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಆರಾಧನೆ, ಧಾರ್ಮಿಕ ಆಚರಣೆಗೆ ಮೀಸಲಾಗಿರುವ ಎಲ್ಲಾ ದೇವಾಲಯಗಳನ್ನು ಸೇವಾ ಹಾಗೂ ಜ್ಞಾನ ಕೇಂದ್ರಗಳನ್ನಾಗಿ ಬದಲಾಯಿಸಿದರೆ ಸಂಸ್ಕೃತಿ ಉಳಿಯುತ್ತದೆ. ಈ ನಿಟ್ಟಿನಲ್ಲಿ ಪೂರ್ಣಪ್ರಜ್ಞಾ ವಿದ್ಯಾಕೇಂದ್ರದ ಸೇವೆ ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಬಳಿಕ ಹತ್ತು–ಹಲವು ಹಾಡುಗಳಿಗೆ ಮನಮೋಹಕ ನೃತ್ಯ ಪ್ರದರ್ಶನ ನೀಡಿದ ಶಾಲಾ ವಿದ್ಯಾರ್ಥಿಗಳು ತಮ್ಮ ಪ್ರತಿಭೆ ಅನಾವರಣಗೊಳಿಸಿದರು. ಚಲನಚಿತ್ರ ನಟ ಪವನ್ ತೇಜ್, ಅಂತಾರಾಷ್ಟ್ರೀಯ ಕ್ರೀಡಾಪಟು ಎಂ.ಡಿ.ನಾಗೇಂದ್ರ, ನಾಗರಿಕ ವೇದಿಕೆ ಅಧ್ಯಕ್ಷ ಬಿ.ಪಿ.ಪುಟ್ಟಸ್ವಾಮಿ, ಕುಳ್ಳೇಗೌಡ, ಶಾಲಾ ಸಮಿತಿ ಅಧ್ಯಕ್ಷ ಜೆ.ಲೋಕೇಶ್ ಮತ್ತಿತರರು ಉಪಸ್ಥಿತರಿದ್ದರು.

ಖಾಸಗಿ ಶಾಲಾ ಶುಲ್ಕ ನಿಗದಿ ಸರ್ಕಾರಕ್ಕೆ ಅವಕಾಶ ಇಲ್ಲ: ಹೈಕೋರ್ಟ್

ಬೆಂಗಳೂರು: ಖಾಸಗಿ ಅನುದಾನ ರಹಿತ ಶಾಲೆಗಳು ರಾಜ್ಯ ಸರ್ಕಾರ ನಿಗದಿಪಡಿಸಿದ ಕ್ರಮವನ್ನು ಹೊರತುಪಡಿಸಿ ಇತರೆ ಕಾರಣಗಳಿಗೆ ಶುಲ್ಕ ಪಡೆಯುವುದನ್ನು ನಿಷೇಧಿಸುವ ಕರ್ನಾಟಕ ಶಿಕ್ಷಣ ಕಾಯ್ದೆ–1983ರ ಕಲಂ 48 ಅನ್ನು ಹೈಕೋರ್ಟ್, ಅಸಾಂವಿಧಾನಿಕ ಎಂದು ಘೋಷಿಸಿದೆ. ಇದರಿಂದಾಗಿ ಖಾಸಗಿ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳು ಶುಲ್ಕ ವಿಧಿಸುವುದನ್ನು ನಿಯಂತ್ರಿಸುವುದಕ್ಕೆ ಸರ್ಕಾರಕ್ಕಿದ್ದ ಅಧಿಕಾರ ರದ್ದುಗೊಂಡಂತಾಗಿದೆ.

ಕರ್ನಾಟಕ ಖಾಸಗಿ ಶಾಲೆಗಳ ಸಮಿತಿ ಹಾಗೂ ಇತರ ಶಾಲಾ ಆಡಳಿತ ಮಂಡಳಿಗಳು ಸಲ್ಲಿಸಿದ್ದ ಅರ್ಜಿಗಳನ್ನು ವಿಚಾರಣೆ ನಡೆಸಿದ ನ್ಯಾಯಮೂರ್ತಿ ಇ.ಎಸ್.ಇಂದಿರೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದ್ದು, ಪೂರ್ವ ಪ್ರಾಥಮಿಕ ಅವಧಿಗೆ ಶುಲ್ಕ ವಿಧಿಸುವುದು ಮತ್ತು ವಿಶೇಷ ಅಭಿವೃದ್ಧಿ ಶುಲ್ಕ ಸಂಗ್ರಹಿಸುವುದನ್ನು ನಿಯಂತ್ರಿಸಬಹುದಾದ 1995 ಮತ್ತು 1999ರಲ್ಲಿ ಅನುಷ್ಠಾನಕ್ಕೆ ತಂದಿರುವ ನಿಯಮಗಳು ಖಾಸಗಿ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳಿಗೆ ಅನ್ವಯಿಸುವುದಿಲ್ಲ ಎಂದು ಹೇಳಿದೆ.

ಮಕ್ಕಳನ್ನು ಲೈಂಗಿಕ ಅಪರಾಧಗಳಿಂದ ರಕ್ಷಿಸುವ ಮತ್ತು ಅವರ ಸುರಕ್ಷತೆ ಕಾಪಾಡುವ ವಿಚಾರಕ್ಕೆ ಸಂಬಂಧಿಸಿದಂತೆ ಸರ್ಕಾರ ಖಾಸಗಿ ಅನುದಾನರಹಿತ ಶಾಲೆಗಳು ಮತ್ತು ಅದರ ಉದ್ಯೋಗಿಗಳ ಮೇಲೆ ಕ್ರಮ ಕೈಗೊಳ್ಳಲು ಅವಕಾಶ ನೀಡುವ ಕಲಂ 5ಎ, ಅನುದಾನ ರಹಿತ ಶಾಲೆಗಳನ್ನು ನಿಯಂತ್ರಿಸುವ ಜಿಲ್ಲಾಧಿಕಾರಿಗಳ ನೇತೃತ್ವದ ಜಿಲ್ಲಾ ಶಿಕ್ಷಣ ನಿಯಂತ್ರಣ ಪ್ರಾಧಿಕಾರಕ್ಕೆ ಅಧಿಕಾರ ಒದಗಿಸುವ ಕಲಂ 2(11ಎ), ನಿಗದಿಗಿಂತಲೂ ಹೆಚ್ಚುವರಿ ಶುಲ್ಕ ಪಡೆಯುವುದನ್ನು ನಿಯಂತ್ರಿಸುವ ಕಲಂ 48 ಅನ್ನು ಉಲ್ಲಂಘಿಸುವ ಖಾಸಗಿ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳಿಗೆ ರೂ. 10 ಲಕ್ಷದವರೆಗೂ ದಂಡ ವಿಧಿಸುವುದಕ್ಕೆ ಅವಕಾಶ ಕಲ್ಪಿಸುವ ಕಲಂ 124 ಎ ಅನ್ನು ಅಸಾಂವಿಧಾನಿಕ ಎಂದು ಸಾರಿದೆ.

ವಸ್ತು ಪ್ರದರ್ಶನದ ಅತ್ಯುತ್ತಮ ಮಳಿಗೆಗಳಿಗೆ ಬಹುಮಾನ ವಿತರಣೆ

ಈ ಬಾರಿ ದಸರಾ ವಸ್ತು ಪ್ರದರ್ಶನಕ್ಕೆ 15 ಲಕ್ಷಕ್ಕೂ ಅಧಿಕ ಜನ ಭೇಟಿ



ಮೈಸೂರು, ಡಿ.7(ಜಿಎ)– ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ವತಿಯಿಂದ 2022ರ ದಸರಾದಲ್ಲಿ ವಸ್ತು ಪ್ರದರ್ಶನದಲ್ಲಿ ಭಾಗವಹಿಸಿದ್ದ ಕೇಂದ್ರ ಮತ್ತು ರಾಜ್ಯ ಸರ್ಕಾರದ ಮಳಿಗೆಗಳಿಗೆ ವಿವಿಧ ವಿಭಾಗದಲ್ಲಿ ಬಹುಮಾನ ವಿತರಿಸಲಾಯಿತು.

ನಗರದ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಪಿ.ಕಾಳಿಂಗ ರಾವ್ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೇಂದ್ರ ಸರ್ಕಾರದ ಇಲಾಖೆಗಳ ವಿಭಾಗದಿಂದ ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ಮಳಿಗೆಗೆ ಪ್ರಥಮ, ಮೈಸೂರಿನ ಅಸೋಸಿಯೇಷನ್‌ನ ಎನ್‌ಸಿಸಿ ಮತ್ತು ಎನ್‌ಸಿಸಿ ಅಲ್ಯುಮಿನಿ ದ್ವಿತೀಯ ಬಹುಮಾನ ಹಾಗೂ ಬೆಂಗಳೂರಿನ ಎಚ್‌ಎಂಟಿ ವಾಚ್ ಅಕಾಡೆಮಿಗೆ ತೃತೀಯ ಬಹುಮಾನ ನೀಡಲಾಯಿತು. ರಾಜ್ಯ ಸರ್ಕಾರದ ಇಲಾಖಾ ವಿಭಾಗದಿಂದ ಆಂಜನಾದ್ರಿ ಬೆಟ್ಟದ ಆಕೃತಿ ಮೂಲಕ ಆಕರ್ಷಿಸಿದ್ದ ಪ್ರವಾಸೋದ್ಯಮ ಇಲಾಖೆಯ ಮಳಿಗೆ ಪ್ರಥಮ, ರಾಜ್ಯ ಸರ್ಕಾರದ ಇಲಾಖೆಯ ಯೋಜನೆಗಳನ್ನು ಜನರಿಗೆ ತಿಳಿಸಿದ ಬೆಂಗಳೂರಿನ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ದ್ವಿತೀಯ ಹಾಗೂ ಮೈಸೂರಿನ ಕೃಷಿ ಇಲಾಖೆಯು ತೃತೀಯ ಬಹುಮಾನ ಕಲ್ಪಿಸಲಾಗಿದೆ.

ನಿಗಮ, ಮಂಡಳಿ, ಪ್ರಾಧಿಕಾರ ವಿಭಾಗದಿಂದ ಮೈಸೂರಿನ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಮಳಿಗೆಗೆ ಪ್ರಥಮ, ಕಾವೇರಿ ನೀರಾವರಿ ನಿಗಮದ ಮಳಿಗೆಗೆ ದ್ವಿತೀಯ, ಮೈಸೂರಿನ ಕೆ.ಆರ್.ಐ.ಡಿ.ಎಲ್.ಮುಖಾಂತರ ಪಂಚಾಯಿತಿ ರಾಜ್ ಇಲಾಖೆಗೆ ತೃತೀಯ ಬಹುಮಾನ ನೀಡಲಾಯಿತು. ಜಿಲ್ಲಾ ಪಂಚಾಯಿತಿ ವಿಭಾಗದಿಂದ ಮೈಸೂರು ಜಿಲ್ಲಾ ಪಂಚಾಯಿತಿ ಪ್ರಥಮ, ಮಂಡ್ಯ ಜಿಲ್ಲಾ ಪಂಚಾಯಿತಿ ದ್ವಿತೀಯ ಮತ್ತು ರಾಮನಗರ ಜಿಲ್ಲಾ ಪಂಚಾಯಿತಿ ತೃತೀಯ ಬಹುಮಾನಕ್ಕೆ ಭಾಜನರಾದವು.

ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ ಮಾತನಾಡಿ, ಪ್ರತಿಬಾರಿಯೂ ತಡವಾಗಿ ಆರಂಭವಾಗುತ್ತಿದ್ದ ದಸರಾ ವಸ್ತು ಪ್ರದರ್ಶನ ಈ ಬಾರಿ ತ್ವರಿತವಾಗಿ ಮಳಿಗೆಗಳ ಆರಂಭಿಸಿ, ಸಾರ್ವಜನಿಕರಿಗೆ ಮಾಹಿತಿ ನೀಡಲು ವಿವಿಧ ಇಲಾಖೆಗಳು ಸಹಕರಿಸಿದವು ಎಂದರು. ಈ ಬಾರಿ ವಸ್ತುಪ್ರದರ್ಶನಕ್ಕೆ ಸುಮಾರು 15 ಲಕ್ಷಕ್ಕೂ ಅಧಿಕ ಮಂದಿ ಭೇಟಿ ನೀಡಿದ್ದು, ದಸರಾ ವಸ್ತು ಪ್ರದರ್ಶನ ಮುಕ್ತಾಯವಾದರೂ ಖಾಸಗಿ ಸಂಸ್ಥೆಗೆ 40 ದಿನಗಳ ಕಾಲ ವಸ್ತು ಪ್ರದರ್ಶನ ವ್ಯವಸ್ಥೆ ಮಾಡಲು ನೀಡಲಾಗಿದೆ. ಹಾಗೆ ಬೇಸಿಗೆ ವಸ್ತು ಪ್ರದರ್ಶನ ಆರಂಭಗೊಳ್ಳಲಿದ್ದು, ಹೀಗೆ ನಿರಂತರವಾಗಿ ವರ್ಷಪೂರ್ತಿ ವಸ್ತು ಪ್ರದರ್ಶನ ನಡೆಯಲಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಉಪ ಮಹಾಪೌರರಾದ ಡಾ.ಜಿ.ರೂಪ, ಕಾರ್ಯನಿರ್ವಾಹಣಾಧಿಕಾರಿ ಕೆ.ರುದ್ರೇಶ್, ನಗರಪಾಲಿಕೆ ಸದಸ್ಯ ಛಾಯಾದೇವಿ ಉಪಸ್ಥಿತರಿದ್ದರು.

ಮೈಸೂರಲ್ಲಿ ಭಕ್ತಿ ಭಾವದ ಇಸ್ಕಾನ್ ಶ್ರೀಕೃಷ್ಣ ಬಲರಾಮ ರಥಯಾತ್ರೆ

ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಚಾಲನೆ





ಮೈಸೂರು, ಜ.7(ಜಿಎ)–ಮೈಸೂರಿನ ಜಯನಗರದ ಇಸ್ಕಾನ್ ಸಂಸ್ಥೆ ವತಿಯಿಂದ ನಗರದ ಅರಮನೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗ ಆಯೋಜಿಸಿದ್ದ 25ನೇ ವಾರ್ಷಿಕ ಇಸ್ಕಾನ್ ಶ್ರೀಕೃಷ್ಣ ಬಲರಾಮ ರಥಯಾತ್ರೆಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ ಸೋಮಶೇಖರ್ ರಥ ಸಾಗುವ ರಸ್ತೆಯನ್ನು ಸ್ವಚ್ಛ ಮಾಡುವ ಮೂಲಕ ಚಾಲನೆ ನೀಡಿದರು.

ಉತ್ಸವವು ನಗರದ ಅರಮನೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಪ್ರಾರಂಭಗೊಂಡು ಗಾಂಧಿ ಚೌಕ, ಸಯ್ಯಾಜಿ ರಾವ್ ರಸ್ತೆ, ಚಿಕ್ಕ ಗಡಿಯಾರ, ದೇವರಾಜ ಅರಸ್ ರಸ್ತೆ, ನಾರಾಯಣ ಶಾಸ್ತ್ರಿ ರಸ್ತೆ, ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ವೃತ್ತ, ಜೆ.ಎಲ್.ಬಿ. ರಸ್ತೆ, ಆರ್‌ಟಿಒ ವೃತ್ತ, ಬಲ್ಲಾಳ್ ವೃತ್ತ, ನ್ಯೂ ಕಾಂತರಾಜ ಅರಸ್ ರಸ್ತೆ, ಜಯನಗರ 2ನೇ ಮುಖ್ಯ ರಸ್ತೆಯ ಮೂಲಕ ಸಾಗಿ ಜಯನಗರದ 18ನೇ ಕ್ರಾಸ್‌ನಲ್ಲಿರುವ ಇಸ್ಕಾನ್ ದೇವಸ್ಥಾನವನ್ನು ತಲುಪಿತು. ರಥಯಾತ್ರೆಯಲ್ಲಿ ಮಂಗಳ ವಾದ್ಯ, ಇಸ್ಕಾನ್ ಭಕ್ತರಿಂದ ಸಂಕೀರ್ತನೆ, ಶ್ರೀ ಕೃಷ್ಣ ಬಲರಾಮರ ಉತ್ಸವ ವಿಗ್ರಹಗಳು ವಿರಾಜಮಾನರಾಗಿರುವ ಅದ್ಭುತವಾದ 35 ಅಡಿ ಎತ್ತರದ ರಥ ಹಾಗೂ ಭಕ್ತಾಧಿಗಳು ರಸ್ತೆಯುದ್ದಕ್ಕೂ ಹರೇ ರಾಮ ಹರೇ ಕೃಷ್ಣ ಎಲ್ಲರ ಗಮನ ಸೆಳೆಯಿತು. ಕಾರ್ಯಕ್ರಮದ ಅಂಗವಾಗಿ 30,000ಕ್ಕೂ ಹೆಚ್ಚು ಭಕ್ತರಿಗೆ ಪ್ರಸಾದ ವಿತರಿಸಲಾಯಿತು.

ಇದೇ ವೇಳೆ ಮಾಜಿ ಎಂಎಲ್‌ಸಿ ಗೋ.ಮಧುಸೂದನ್ ಮಾತನಾಡಿ, ಕೊರೊನಾ ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷಗಳು ಈ ರಥಯಾತ್ರೆ ಸಾಧ್ಯವಾಗಲಿಲ್ಲ. ಎಲ್ಲಾ ಸ್ಥಳಗಳಲ್ಲಿ ರಥಯಾತ್ರೆ ಮಾಡಲಾಗುತ್ತದೆ. ಆದರೆ, ಪೂರಿ ಜಗನ್ನಾಥದಲ್ಲಿ ಜರುಗುವ ರಥೋತ್ಸವಕ್ಕೆ ಯಾವುದೇ ರಥಯಾತ್ರೆ ಸರಿಸಾಟಿಯಲ್ಲ ಎಂದು ಅಭಿಪ್ರಾಯಪಟ್ಟರು.

ರಥ ಯಾತ್ರೆ ಮಾಡುವ ಪ್ರಮುಖ ಉದ್ದೇಶವೆಂದರೆ, ಅನೇಕರಿಗೆ ದೇವಾಲಯಕ್ಕೆ ಹೋಗಲು ಸಾಧ್ಯವಾಗುವುದಿಲ್ಲ. ಈ ಸಂದರ್ಭದಲ್ಲಿ ದೇವರೇ ಭಕ್ತಾಧಿಗಳನ್ನು ನೋಡಲು ರಥ ಏರಿ ಬರುತ್ತಾನೆ ಎಂಬ ಭಾವನೆ ಇದೆ. ಶ್ರೀ ಕೃಷ್ಣ ಪರಮಾತ್ಮನೂ ಹೆಣ್ಣು ಮಕ್ಕಳನ್ನು ರಕ್ಷಣೆ ಮಾಡಲು, 16,100 ಹೆಣ್ಣು ಮಕ್ಕಳಿಗೆ ಪತಿಯ ಸ್ಥಾನ ನೀಡಿದ್ದರು. ಮಹಾ ಭಾರತ, ರಾಮಾಯಣ ಹೆಣ್ಣು ಮಕ್ಕಳ ರಕ್ಷಣೆಗಾಗಿಯೇ ನಡೆದಿದ್ದು. ಆದರೆ, ಇತ್ತೀಚಿನ ದಿನಗಳಲ್ಲಿ ಲವ್ ಜಿಹಾದ್ ಮೂಲಕ ನಮ್ಮ ಹೆಣ್ಣು ಮಕ್ಕಳನ್ನು ಅನ್ಯ ಧರ್ಮಿಯರು ವಿದೇಶಗಳಿಗೆ ಹಾರಿಸಿ ಕೊಂಡು ಹೋಗುತ್ತಿದ್ದು, ಕೇರಳದಲ್ಲಿ 4000 ಕ್ಕೂ ಹೆಚ್ಚು ಕನ್ಯೆಯರನ್ನು ಐಸಿಸ್ ರಾಕ್ಷಸರಿಗೆ ಮಾರಾಟ ಮಾಡಲಾಗಿದೆ. ಇದಲ್ಲದೇ ಲವ್ ಜಿಹಾದ್ ಹೆಸರಿನಲ್ಲಿ ಮತಾಂತರ ಮಾಡಿ ಬೇರೆ ದೇಶಗಳಿಗೆ ನಮ್ಮ ದೇಶದ ಹೆಣ್ಣು ಮಕ್ಕಳನ್ನು ಮಾರಾಟ ಮಾಡಲಾಗುತ್ತಿದೆ. ಇಂತಹ ಸನ್ನಿವೇಶವನ್ನು ದೂರಗೊಳಿಸಿ ಸಾಂಸ್ಕೃತಿಕ ವೈಭವ ಮರುಕಳಿಸುವಂತೆ ಕೃಷ್ಣನನ್ನು ಬೇಡಿಕೊಳ್ಳಬೇಕಿದೆ ಎಂದರು. ಮಥುರೆಯ ಶ್ರೀಕೃಷ್ಣನ ದೇವಾಲಯ, ಕಾಶಿ ವಿಶ್ವನಾಥ ದೇವಾಲಯ ಹಾಗೂ ಶ್ರೀರಂಗಪಟ್ಟಣದಲ್ಲಿರುವ ಮೂಡಲ ಆಂಜನೇಯ ದೇವಾಲಯದ ಜಾಗದಲ್ಲಿರುವ ಧಾರ್ಮಿಕ ಕೇಂದ್ರಗಳ ತೆರವುಗೊಳಿಸಿ ಆ ಜಾಗದಲ್ಲಿ ಮತ್ತೆ ಹಿಂದೂ ದೇವಾಲಯ ನಿರ್ಮಾಣವಾಗುವ ಸನ್ನಿವೇಶವನ್ನು ದೇವರು ಕರುಣಿಸಲಿದ್ದಾನೆ ಎಂದು ಆಶಿಸಿದರು. ಬೆಂಗಳೂರು ಇಸ್ಕಾನ್ ಸಂಸ್ಥೆ ಹಾಗೂ ದಿ ಅಕ್ಷಯ ಪಾತ್ರ ಫೌಂಡೇಷನ್‌ನ ಉಪಾಧ್ಯಕ್ಷ ಚಂಚಲಾಪತಿ ದಾಸ, ಮೈಸೂರು ಇಸ್ಕಾನ್ ಸಂಸ್ಥೆಯ ಅಧ್ಯಕ್ಷ ಸ್ತೋಕ ಕೃಷ್ಣಸ್ವಾಮಿ, ವಸ್ತು ಪ್ರದರ್ಶನ ಪ್ರಾಧಿಕಾರ ಅಧ್ಯಕ್ಷ ಮಿರ್ಲೇ ಶ್ರೀನಿವಾಸ್ ಗೌಡ ಉಪಸ್ಥಿತರಿದ್ದರು.





ಕನ್ನಡ ನಾಡು-ನುಡಿಗಾಗಿ ಗೋಕಾಕ್ ಮೀರಿಸುವಂತಹ ಚಳವಳಿ ಆಗಬೇಕಿದೆ

● ಹಾವೇರಿ ಸಾಹಿತ್ಯ ಸಮ್ಮೇಳನದಲ್ಲಿ ಕನ್ನಡಿಗರ ಬಡಿದೆಚ್ಚರಿಸಿದ ಅಧ್ಯಕ್ಷ ದೊಡ್ಡರಂಗೇಗೌಡರು ● ಬಹಳ ವರ್ಷಗಳ ಬಳಿಕ ಇಂತಹ ಒಂದು ಹೋರಾಟದ ಅನಿವಾರ್ಯತೆ ಇದೆ



ಹಾವೇರಿ,ಜ.7- ಕನ್ನಡ ನೆಲದಲ್ಲಿ ಮತ್ತೊಮ್ಮೆ ಗೋಕಾಕ್ ಚಳವಳಿಯನ್ನು ಮೀರಿಸುವಂತಹ ದೊಡ್ಡ ಮಟ್ಟದ ಕನ್ನಡ ಚಳವಳಿ ಆಗಬೇಕು ಎಂದು ಹಾವೇರಿ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ದೊಡ್ಡರಂಗೇಗೌಡರು ಅಭಿಪ್ರಾಯಿಸಿದರು.

ಸಮ್ಮೇಳನಾಧ್ಯಕ್ಷರ ಜೊತೆ 'ಮಾತು ಮಂಥನ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕನ್ನಡ ಭಾಷೆ ಉಳಿವಿಗಾಗಿ ಗೋಕಾಕ್ ಚಳವಳಿ ನಂತರ ಆ ಮಾದರಿಯ ಯಾವುದೇ ಹೋರಾಟ ನಡೆದಿಲ್ಲ. ಪ್ರಸ್ತುತ ಪರಿಸ್ಥಿತಿಯಲ್ಲಿ ನಾಡು-ನುಡಿಗಾಗಿ ಗೋಕಾಕ್ ಚಳವಳಿ ಮೀರಿಸುವಂತಹ ಬೃಹತ್ ಕನ್ನಡ ಚಳವಳಿ ಆಗಬೇಕಿದೆ ಎಂದರು.

ಸಿನಿಮಾ ಗೀತೆ ಹಾಗೂ ಸಾಹಿತ್ಯದ ಕವಿತೆ ನಡುವಿನ ವ್ಯತ್ಯಾಸದ ಬಗ್ಗೆ ಮಾತನಾಡಿ, ಚಿತ್ರದ ನಿರ್ದೇಶಕ ಹಾಗೂ ನಿರ್ಮಾಪಕ ಹೇಳಿದ ಸನ್ನಿವೇಶಗಳಿಗೆ ಅನುಗುಣವಾಗಿ ಗೀತೆಗಳನ್ನು ಬರೆದಿದ್ದೇನೆ. ಆದರೆ ಸಾಹಿತ್ಯ ಕವಿತೆಯೇ ಬೇರೆ. ಭಾವನಾತ್ಮಕ ಅಲೆಗಳು ಸಮುದ್ರದಲ್ಲಿ ಬಂದು ಹೋಗುವುದರಿಂದ ಸಾಹಿತ್ಯದಲ್ಲಿ ಸ್ವಂತಿಕೆ ಪ್ರದರ್ಶನ ಮಾಡಿದ್ದೇನೆ ಎಂದರು. ಹೀಗೆ ವೈಯಕ್ತಿಕ ಬದುಕು, ಸಾಹಿತ್ಯ ಪ್ರೀತಿ, ಸಿನಿಮಾ ಸಾಹಿತ್ಯ ಅನುವಾದ, ಕನ್ನಡಿಗರ ಹೋರಾಟ, ಪ್ರಸ್ತುತ ರಾಜಕಾರಣ, ವ್ಯವಸ್ಥೆಗೆ ಸಂಬಂಧಿಸಿದ ಹಲವು ಪ್ರಶ್ನೆಗಳಿಗೆ ಮುಕ್ತವಾಗಿ ಉತ್ತರಿಸಿದರು.

ಪತ್ನಿಯೇ ಶಕ್ತಿ: ತುಮಕೂರು ಜಿಲ್ಲೆಯ ದೇಶೀಯ ಭಾಷೆಯನ್ನು ನನ್ನ ಸಾಹಿತ್ಯದಲ್ಲಿ ಬಳಸಿದ್ದೇನೆ. ಹಳ್ಳಿ ಹುಡುಗ ಪಟ್ಟಣಕ್ಕೆ ಬಂದು ಅಲ್ಲಿನ ಭಾಷೆ ಕಲಿತರೂ ಆತನ ಮನಸ್ಸು ಹಳ್ಳಿಯ ಸೊಗಡಿನಿಂದ ಹೊರಬರುವುದಿಲ್ಲ. ಊರಿನ ಅರಳಿಮರ, ಮಾವಿನಮರ, ರಂಗನಾಥನ ತೇರಿನ ಮುಂದೆ ರಾತ್ರಿಯೆಲ್ಲಾ ತಮಟೆ ನುಡಿಸಿ, ಹಾಡಿದ ಭಾವನೆ ನನ್ನ ಸಾಹಿತ್ಯದಲ್ಲಿದೆ. ದೊಡ್ಡರಂಗೇಗೌಡರ ಸಾಧನೆಯಲ್ಲಿ ಪತ್ನಿಯ ಸಹಕಾರ ಮಹತ್ವದ್ದಾಗಿದೆ. ಒಬ್ಬ ಗೆಳತಿ, ಮಾರ್ಗದರ್ಶಿಯಾಗಿರುವ ನನ್ನ ಜೀವನ ಸಂಗಾತಿಗೆ ಋಣಿಯಾಗಿದ್ದೇನೆ. ನನ್ನ ಮಕ್ಕಳ ಚೆನ್ನಾಗಿ ವಿದ್ಯಾಭ್ಯಾಸ ಮಾಡಲು ಕಾರಣ ಹಾಗೂ ನನ್ನ ಸಾಹಿತ್ಯದ ಶಕ್ತಿ ನನ್ನ ಪತ್ನಿ ಎಂದು ಹೆಮ್ಮೆಯಿಂದ ನುಡಿದರು.

ರೂಪುರೇಷೆ ಬದಲಾಗುತ್ತಿದೆ: ಸಾಹಿತ್ಯದ ರೂಪುರೇಷೆ ಬದಲಾಗುತ್ತಿರುವ ಬಗ್ಗೆ ಪ್ರತಿಕ್ರಿಯಿಸಿ, ಸಾಹಿತ್ಯ ನಿಂತ ನೀರಾಗಬಾರದು. ಅತ್ಯಾಧುನಿಕ ಸೌಲಭ್ಯಗಳನ್ನು ಬಳಸಿಕೊಂಡು ಅಮೇರಿಕಾ ಇನ್ನಿತರ ದೇಶಗಳಲ್ಲಿ ಕನ್ನಡ ಕೀರ್ತಿ ಪತಾಕೆ



ಹಾರಿಸಿದ್ದಾರೆ. ವಚನಕಾರರ ನುಡಿಮುತ್ತುಗಳು ಇಂಗ್ಲಿಷ್‌ಗೆ ತರ್ಜುಮೆ ಆಗಿವೆ. ಬ್ರಿಟಿಷ್ ಅಮೇರಿಕಾದವರು ನಮ್ಮ ಕನ್ನಡದ ಕಡೆಗೆ ನೋಡುತ್ತಿದ್ದಾರೆ. ಪಂಪನ ಒಂಭತ್ತನೇ ಶತಮಾನದ ಕಾವ್ಯವನ್ನು ಇಂಗ್ಲಿಷ್‌ಗೆ ತರ್ಜುಮೆ ಮಾಡಿದ್ದಾರೆ. ನಾನು ಅದೇ ಕಾರಣಕ್ಕೆ ವಿಶ್ವಮುಖಿ ಎಂದು ಬಳಸಿದೆ ಎಂದರು.

ಪ್ರಜಾಪ್ರಭುತ್ವ ಮೌಲ್ಯ ಕುಸಿತ: ಪ್ರಜಾಪ್ರಭುತ್ವ ಮೌಲ್ಯಗಳು ದಿನೇ ದಿನೇ ಕುಸಿಯುತ್ತಿವೆ. ಹಣವಂತರು ಚುನಾವಣೆಗಳಲ್ಲಿ ಗೆದ್ದು ಬರುತ್ತಿದ್ದಾರೆ. ವಿಧಾನಪರಿಷತ್‌ನಲ್ಲಿ ನಾನು ಬಹಳಷ್ಟು ಗಮನಿಸಿದ್ದೇನೆ. ಹಣಬಲದಿಂದ ವಿಧಾನಸಭೆ ಪ್ರವೇಶ ಮಾಡುತ್ತಿದ್ದಾರೆ. ವಿಧಾನಮಂಡಲದಲ್ಲಿ ಬಳಸುವ ಭಾಷೆ ಕೇಳಿದರೆ ಬೇಸರವಾಗುತ್ತದೆ. ಅಂತಹ ಶ್ರೇಷ್ಠ ಜಾಗದಲ್ಲಿ ಪಂಚೆ ಮೇಲಕ್ಕೆತ್ತಿ ಕಟ್ಟಿ ತೊಡೆ ತಟ್ಟುವುದೇ ಪ್ರಜಾಪ್ರಭುತ್ವ ಮೌಲ್ಯ ಕುಸಿದಿರುವುದಕ್ಕೆ ಸಾಕ್ಷಿ ಎಂದರು.

ಬದಲಾವಣೆಗೆ ಕ್ರಾಂತಿಯಾಗಬೇಕು: ಭ್ರಷ್ಟತೆಯ ಪರಮಾಧಿಕಾರ ಇರುವಾಗ ಪ್ರಾಮಾಣಿಕತೆಯನ್ನು ಎಲ್ಲಿ ಹುಡುಕುವುದು. ಸ್ವಾರ್ಥದ ಲಾಲಸೆ ಹೆಚ್ಚಾಗಿದ್ದು ಅಧಿಕಾರವನ್ನು ತಮಗಾಗಿ ಮಾತ್ರ ಬಳಸಿಕೊಳ್ಳುತ್ತಿದ್ದಾರೆ. ವ್ಯವಸ್ಥೆಯ ಜೊತೆ ಹೊಂದಾಣಿಕೆ ಮಾಡಿಕೊಳ್ಳುವವರು ಮಾತ್ರ ಎಲ್ಲವನ್ನೂ ಪಡೆದುಕೊಳ್ಳುತ್ತಾರೆ. ಇದೊಂದು ವಿಶ್ವವನ್ನು ಆವರಿಸಿಕೊಂಡಿರುವ ದೊಡ್ಡ ರೋಗ. ಇದೆಲ್ಲಾ ಬದಲಾಗಬೇಕಾದರೆ ಕ್ರಾಂತಿ ಆಗಬೇಕು. ಸಾಮಾನ್ಯರಲ್ಲಿ ಅರಿವು ಮೂಡಬೇಕು. ಕವಿ, ಬರಹಗಾರನಾದವನು ಏನನ್ನೂ ಮನದೊಳಗೆ ಇಟ್ಟುಕೊಳ್ಳುವುದಿಲ್ಲ. ಯಾವುದಾದರೂ ರೂಪದಲ್ಲಿ ಅದೆಲ್ಲವನ್ನೂ ಹೊರ ಹಾಕುತ್ತಾನೆ. ಅದೇ ಅವನ ಮನಸ್ಸನ್ನು ಪ್ರಫುಲ್ಲಗೊಳಿಸಿ, ಆರೋಗ್ಯವನ್ನು ವೃದ್ಧಿಸುತ್ತದೆ. ನನ್ನ ವೃತ್ತಿ ಆಯ್ಕೆ ಬಗ್ಗೆ ತಂದೆಗೆ ಅಸಮಾಧಾನವಿತ್ತಾದರೂ ಮೇಷ್ಟ್ರಾಗಿದ್ದಕ್ಕೆ ನನಗೆ ಬಹಳ ಖುಷಿ ಇದೆ ಎಂದು ನುಡಿದರು.

ಚಿತ್ರಕತೆ, ಟ್ಯೂನ್‌ಗಳ ವಿವಾದ ಸಂಬಂಧ ಮಾತನಾಡಿ, ಯಾವುದೋ ಟ್ಯೂನ್ ಅನ್ನು ಕದ್ದು ಕನ್ನಡಕ್ಕೆ ಸಂಯೋಜಿಸಬಾರದು. ನಿಮ್ಮ ಸಂಯೋಜನೆ ಪ್ರಯತ್ನ ಹಾಗೂ ನನ್ನ ಬರವಣಿಗೆ ಎರಡೂ ಸೇರಿದರೆ ಸೃಜನಶೀಲತೆ ಹೊರಬರುತ್ತದೆ. ಗೀತೆ ವೈಭವದಲ್ಲಿ 47 ಕವಿತೆಗಳನ್ನು ಹಿಂದಿಗೆ ಅನುವಾದ ಮಾಡಲಾಗಿತ್ತು. ಮಲೆಯಾಳಿ ಭಾಷೆಗೆ ನನ್ನ ಕವಿತೆಗಳು ಅನುವಾದ ಆಗಿವೆ. ಈಜಿಪ್ಟ್ ಪ್ರವಾಸದ 16 ಲೇಖನಗಳನ್ನೊಳಗೊಂಡ ಪುಸ್ತಕ ಪ್ರಕಟವಾಯಿತು. ಈಜಿಪ್ಟ್ ಕುರಿತ ಪುಸ್ತಕ 1 ಸಾವಿರ ಮಾರಾಟವಾಯಿತು. ಇಂಗ್ಲಿಷ್‌ಗೆ ಅನುವಾದಗೊಂಡ ಜ್ವಾಲಾಮುಖಿ ಕೃತಿ ಇಂಗ್ಲೆಂಡ್‌ನಲ್ಲಿ 3 ಸಾವಿರ ಜನರ ಸಮ್ಮುಖದಲ್ಲಿ ಬಿಡುಗಡೆಗೊಂಡಿತು. 47 ಕತೆಗಳ ಕೃತಿಯೂ ಅನುವಾದವಾಗಿದೆ. ಹೀಗೆ ನಾನು ಅನುವಾದ ಸಾಹಿತ್ಯಕ್ಕೆ ನನ್ನ ಕೊಡುಗೆಯೂ ಅಲ್ಪ ಪ್ರಮಾಣದಲ್ಲಿದೆ ಎಂದರು.

ಕಾರ್ಯಕಾರಿ ಸಮಿತಿ ಸಭೆಯಲ್ಲಿ ಗದ್ದಲ; ಮುಂದಿನ ಸಮ್ಮೇಳನದ ಸ್ಥಳ ಇಂದು ನಿರ್ಧಾರ: ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಗದ್ದಲ ಉಂಟಾಗಿ ಯಾವುದೇ ನಿರ್ಧಾರ ಕೈಗೊಳ್ಳಲಾಗದೆ ಸಭೆಯನ್ನೇ ಮುಂದೂಡಲಾಗಿದೆ. ಮುಂದಿನ ಸಾಹಿತ್ಯ ಸಮ್ಮೇಳನದ ಸ್ಥಳ ನಿರ್ಧರಿಸುವ ಸಂಬಂಧ ಶನಿವಾರ ರಾತ್ರಿ ಕಾರ್ಯಕಾರಿ ಸಮಿತಿ ಸಭೆ ಕರೆಯಲಾಗಿತ್ತು. ಈ ವೇಳೆ ಮಂಡ್ಯ, ಹಾಸನ, ಚಿಕ್ಕಮಗಳೂರು, ಬಳ್ಳಾರಿ, ಯಾದಗಿರಿ, ಉತ್ತರ ಕನ್ನಡ ಜಿಲ್ಲೆಯವರು ತಮ್ಮ ಜಿಲ್ಲೆಗಳಲ್ಲಿ ಸಮ್ಮೇಳನ ಸಂಘಟಿಸಬೇಕೆಂದು ಹಕ್ಕು ಮಂಡಿಸಿದರು. ಆದರೆ ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯ ಘಟಕದ ಅಧ್ಯಕ್ಷ ಮಹೇಶ ಜೋಶಿ, ನಿರ್ಧಾರಕ್ಕೆ ಒಂದು ತಿಂಗಳ ಕಾಲಾವಕಾಶ ಕೊಡಿ ಎಂದರು. ಅದಕ್ಕೆ ಹಾಸನ, ಚಿಕ್ಕಮಗಳೂರು ಹಾಗೂ ಉತ್ತರ ಕನ್ನಡದ ಕಾರ್ಯಕಾರಿ ಸಮಿತಿ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಮೊದಲಿನಿಂದಲೂ ಕಾರ್ಯಕಾರಿ ಸಮಿತಿ ಸಭೆಯಲ್ಲೇ ನಿರ್ಧಾರ ಕೈಗೊಂಡಿದ್ದು, ಈಗ ಸಂಪ್ರದಾಯ ಮುರಿಯುವುದು ಸರಿಯಲ್ಲ ಎಂದು ಸಭೆಯಿಂದ ಹೊರ ನಡೆದರು. ಆದರೆ ನನ್ನ ಅನಾರೋಗ್ಯದ ಹಿನ್ನೆಲೆಯಲ್ಲಿ ಸಭೆ ಮುಂದೂಡಲಾಗಿದ್ದು, ಭಾನುವಾರ ನಡೆಯಲಿರುವ ಸಭೆಯಲ್ಲಿ ಮುಂದಿನ ಸಮ್ಮೇಳನದ ಸ್ಥಳ ನಿರ್ಧರಿಸಿ, ಘೋಷಿಸಲಾಗುವುದು ಎಂದು ಮಹೇಶ್ ಜೋಶಿ ಸ್ಪಷ್ಟನೆ ನೀಡಿದ್ದಾರೆ.

ಜನಾಕರ್ಷಣೆಯ ಫಲಪುಷ್ಪ ಪ್ರದರ್ಶನ



ಸಾಹಿತ್ಯ ಸಮ್ಮೇಳನದ ಹಿನ್ನೆಲೆಯಲ್ಲಿ ತೋಟಗಾರಿಕೆ ಇಲಾಖೆ ಮತ್ತು ಜಿಲ್ಲಾಡಳಿತದ ಸಹಯೋಗದಲ್ಲಿ ಆಯೋಜಿಸಿರುವ ಫಲಪುಷ್ಪ ಪ್ರದರ್ಶನಕ್ಕೆ ಜನಸಾಗರವೇ ಹರಿದುಬರುತ್ತಿದೆ. ಅದರಲ್ಲೂ ಏಲಕ್ಕಿಯಲ್ಲಿ ಮೂಡಿಸಿರುವ ಗಣಪ ಪ್ರಮುಖ ಆಕರ್ಷಣೆಯಾಗಿದೆ. ಫಲಪುಷ್ಪ ಪ್ರದರ್ಶನ ವೀಕ್ಷಣೆಗೆ ಬಂದವರು ಏಲಕ್ಕಿ ಗಣಪನಿಗೆ ಭಕ್ತಿಯಿಂದ ಕೈಮುಗಿದು ನಮಿಸುವುದು ಸಹಜವಾಗಿದೆ. ಹೂವು ಮಾರುವ ಮಹಿಳೆ, ಪುಷ್ಪಗಳಲ್ಲಿ ಮೈತಳೆದ ಈಶ್ವರ ಲಿಂಗ, ಡಾಲ್ಫಿನ್ ಮತ್ತು ಆನೆ, ಮತ್ಸ್ಯಕನ್ಯೆ ಕಲಾಕೃತಿ, ವಿವಿಧ ತರಕಾರಿ ಮತ್ತು ಹಣ್ಣುಗಳಲ್ಲಿ ಅರಳಿರುವ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಭಾವಚಿತ್ರಗಳು, ಜಿಂಕೆ, ನಂದಿ, ನವಿಲು, ಚೋಟಾ ಭೀಮ್, ಸಿರಿಧಾನ್ಯಗಳಲ್ಲಿ ರೂಪುಗೊಂಡ ಸರ್ವಜ್ಞ, ಕನಕದಾಸ, ಶರೀಫ, ಭುವನೇಶ್ವರಿ ಕಲಾಕೃತಿಗಳ ಅದ್ಭುತ ಲೋಕವೇ ಸೃಷ್ಟಿಯಾಗಿದೆ.

ಮಾನವೀಯತೆ ಇಲ್ಲದ ಸಾಧನೆಗೆ ಬೆಲೆ ಇಲ್ಲ

ನಟ ರಮೇಶ್ ಅರವಿಂದ್ ಸ್ಪಷ್ಟೋಕ್ತಿ



ಹಾವೇರಿ: ಮಾನವೀಯತೆ ಇಲ್ಲದ ಸಾಧನೆಗೆ ಬೆಲೆಯಿಲ್ಲ ಎಂದು ಚಲನಚಿತ್ರ ನಟ, ನಿರ್ದೇಶಕ ರಮೇಶ ಅರವಿಂದ್ ಅಭಿಪ್ರಾಯಿಸಿದರು.

ಸಾಹಿತ್ಯ ಸಮ್ಮೇಳನದ ಕನಕ-ಶರೀಫ-ಸರ್ವಜ್ಞ ವೇದಿಕೆಯಲ್ಲಿ ನಡೆದ ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿ, ಫಸಲು ಇಲ್ಲದ ಬೆಳೆಯಂತೆ ಮಾನವೀಯತೆ ಇಲ್ಲದ ಸಾಧನೆಗೆ ಬೆಲೆಯಿಲ್ಲ. ಆದ್ದರಿಂದ ನಾವು ಎಷ್ಟೇ ಎತ್ತರಕ್ಕೆ ಬೆಳೆದರೂ ಮಾನವೀಯತೆಯಿಂದಲೇ ವರ್ತಿಸಬೇಕು ಎಂದರು.

ನಮ್ಮದು ಎರಡು ಸಾವಿರ ವರ್ಷ ಇತಿಹಾಸ ಇರುವ ಭಾಷೆ. ಕನ್ನಡ ಲೋಕವು ವಿಶ್ವವ್ಯಾಪಿ ಇರುವ ವಿಸ್ಮಯ. ಜಗತ್ತಿನ ವಿವಿಧೆಡೆ ನೆಲೆಸಿರುವ ಕನ್ನಡಿಗರು ತಮ್ಮ ಸಾಧನೆಯಿಂದ ಕನ್ನಡದ ಕೀರ್ತಿಯನ್ನು ಪಸರಿಸಿದ್ದಾರೆ. ಯುವ ಸಮುದಾಯ ಹೆಚ್ಚೆಚ್ಚು ಅಧ್ಯಯನದಲ್ಲಿ ತೊಡಗಬೇಕು. ಕಲಿಕೆ ವಿಸ್ತಾರವಾಗಬೇಕು. ಕನ್ನಡದ ಶ್ರೀಮಂತಿಕೆಯನ್ನು ಅನುಭವಿಸಬೇಕೆಂದು ಕಿವಿಮಾತು ಹೇಳಿದರು.

ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಮಾತನಾಡಿ, 'ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಮೌಲ್ಯ ಕುಸಿಯುತ್ತಿದೆ. ಮಾನವೀಯ ಮೌಲ್ಯಗಳು ಅರ್ಥ ಕಳೆದುಕೊಳ್ಳುತ್ತಿವೆ. ಈ ಬಗ್ಗೆ ಪ್ರತಿಯೊಬ್ಬರೂ ಚಿಂತನೆ ಮಾಡಬೇಕು. ದುರಾಸೆ ಎಂಬ ರೋಗದಿಂದ ಹೊರಬರಬೇಕು. ಆಸೆ-ಆಕಾಂಕ್ಷೆಗಳು ಇರುವುದು ಕೆಟ್ಟದಲ್ಲ. ಆದರೆ ಕೋಟಿ ಗಟ್ಟಲೆ ಹಣ ಸಂಪಾದಿಸುವ ದುರಾಸೆ ಒಳ್ಳೆಯದಲ್ಲ. ಕನ್ನಡಿಗರ ಪ್ರಾಮಾಣಿಕತೆ, ಈ ನೆಲದ ಮೌಲ್ಯಗಳು ಅರಿತು ಬದುಕುವ ಮೂಲಕ ಜಗತ್ತಿಗೆ ಸಂದೇಶ ರವಾನಿಸಬೇಕೆಂದು ಆಶಿಸಿದರು.

ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಆಶೀರ್ವಚನ ನೀಡಿ, 'ಇತ್ತೀಚಿನ ದಿನಗಳಲ್ಲಿ ಆಂಗ್ಲ ಮಾಧ್ಯಮ ಶಾಲೆಗಳು ಹೆಚ್ಚಾಗುತ್ತಿದ್ದರೂ ಈ ನೆಲದ ಕನ್ನಡ ಭಾಷೆಯ ಮೇಲಿನ ಅಭಿಮಾನಕ್ಕೆ ಧಕ್ಕೆಯಾಗಿಲ್ಲ. ಕನ್ನಡ ಭಾಷೆ ತಾಯಿ ಭಾಷೆ. ಅತ್ಯಂತ ಶ್ರೀಮಂತ ಭಾಷೆ. ಶಾಸ್ತ್ರೀಯ ಸ್ಥಾನಮಾನ ಗಳಿಸಿಕೊಂಡಿರುವ ನಮ್ಮ ಹೆಮ್ಮೆಯ ಭಾಷೆಯನ್ನು ಉಳಿಸಿ, ಬೆಳೆಸಿಕೊಂಡು ಹೋಗೋಣ' ಎಂದರು.


ಸಚಿವರಿಂದ ಬಗರ್‌ಹುಕುಂ ಸಾಗುವಳಿ ಪತ್ರ ವಿತರಣೆ

ನಾಗಮಂಗಲ, ಜ.7- ಪಟ್ಟಣದ ತಾಲೂಕು ಕಚೇರಿ ಆವರಣದಲ್ಲಿಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ 150 ಅರ್ಹ ಫಲಾನುಭವಿಗಳಿಗೆ ಬಗರ್‌ಹುಕುಂ ಸಾಗುವಳಿ ಹಕ್ಕು ಪತ್ರ ವಿತರಿಸಿದರು.

ನಂತರ ಮಾತನಾಡಿದ ಅವರು, ಮುಂದಿನ ದಿನಗಳಲ್ಲಿ ಬಗರ್‌ಹುಕುಂ ಸಾಗುವಳಿ ಹಕ್ಕು ಪತ್ರ ಕೋರಿ ಅರ್ಜಿ ಸಲ್ಲಿಸಿರುವ ಬಡ ಹಾಗೂ ರೈತ ಕುಟುಂಬಗಳ ಅರ್ಜಿಗಳನ್ನು ಪರಿಶೀಲಿಸಿ ಅರ್ಹ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸ ಲಾಗುವುದು. ಅರಣ್ಯ ಇಲಾಖೆಗೆ ಸಂಬಂಧಿಸಿದಂತೆ ಎಲ್ಲಾ ತಾಲೂಕುಗಳಲ್ಲಿ ತೊಂದರೆ ಇದೆ. ಈ ಯೋಜನೆಯಡಿ ಇರುವ ತೊಂದರೆಗಳನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದು ಪರಿಹರಿಸಬಹುದಾದ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಿ ರೈತರ ಪರ ಕೆಲಸ ಮಾಡಲಾಗುವುದು ಎಂದರು.

ಸರ್ಕಾರಿ ಜಾಗದಲ್ಲಿ ಗೋಮಾಳ, ಸ್ಮಶಾನ ಸೇರಿದಂತೆ ವಿವಿಧ ಕೆಲಸಗಳಿಗೆ ಆದ್ಯತೆ ಮೇಲೆ ಸ್ಥಳ ಮೀಸಲಿಡಲಾಗುವುದು. 19 ಸಾವಿರ ಅರ್ಜಿಗಳು ಇದ್ದು, ಯಾವುದನ್ನು ಪುರಸ್ಕರಿಸಲು ಸಾಧ್ಯವೋ ಅವುಗಳ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಶಾಸಕ ಕೆ.ಸುರೇಶ್‌ಗೌಡ, ಬಗರ್‌ಹುಕುಂ ಸಮಿತಿ ಸದಸ್ಯರಾದ ನರಸಿಂಹಮೂರ್ತಿ, ಅನುರಾಧ, ತಹಶೀಲ್ದಾರ್ ನಂದೀಶ್, ಸ್ಥಳೀಯ ಬಿಜೆಪಿ ಮುಖಂಡ ಫೈಟರ್ ರವಿ ಸೇರಿದಂತೆ ಇತರರಿದ್ದರು.



ಸರ್ಕಾರಿ ಕಾರ್ಯಕ್ರಮದಲ್ಲಿ ಫೈಟರ್ ರವಿ

ಇತ್ತೀಚೆಗೆ ರಾಜ್ಯವ್ಯಾಪಿ ಸುದ್ದಿಯಾಗಿದ್ದ ಬಿಜೆಪಿ ಮುಖಂಡ ಫೈಟರ್ ರವಿ ಮೊದಲ ಬಾರಿಗೆ ಸರ್ಕಾರಿ ಕಾರ್ಯಕ್ರಮವೊಂದರಲ್ಲಿ ಕಾಣಿಸಿಕೊಂಡಿದ್ದು, ಬಗರ್‌ಹುಕುಂ ಸಾಗುವಳಿದಾರರಿಗೆ ಹಕ್ಕುಪತ್ರ ವಿತರಣೆ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಹಾಗೂ ಶಾಸಕ ಸುರೇಶ್‌ಗೌಡ ಜೊತೆಗೆ ವೇದಿಕೆ ಹಂಚಿಕೊಂಡಿದ್ದಾರೆ.

ಕಾಂಗ್ರೆಸ್ ಹಾಗೂ ಜೆಡಿಎಸ್ ರವಿ ವಿರುದ್ಧ ರೌಡಿಶೀಟರ್ ಆರೋಪ ಮಾಡಿತ್ತು. ಆದರೆ ಫೈಟರ್ ರವಿ ನನ್ನ ಮೇಲೆ ಯಾವುದೇ ರೌಡಿ ಶೀಟ್ ಇಲ್ಲ ಎಂದು ಸ್ಪಷ್ಟಪಡಿಸಿದ್ದರು. ಜೊತೆಗೆ ಇತ್ತೀಚೆಗೆ ಮಂಡ್ಯದಲ್ಲಿ ನಡೆದ ಅಮಿತ್ ಶಾ ನೇತೃತ್ವದ ಜನಸಂಕಲ್ಪ ಯಾತ್ರೆಯಲ್ಲೂ ಫೈಟರ್ ರವಿ ವೇದಿಕೆ ಮೇಲೆ ಕಾಣಿಸಿಕೊಂಡಿರಲಿಲ್ಲ. ಆದರೆ ಇಂದು ನಡೆದ ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ನಡೆದ ಸರ್ಕಾರಿ ಕಾರ್ಯಕ್ರಮದಲ್ಲಿ ರವಿ ಕಾಣಿಸಿಕೊಂಡಿದ್ದಾರೆ.

ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ಮಂಜು ಗೆಲುವು ಖಚಿತ

ಜೆಡಿಎಸ್ ಯುವ ನಾಯಕ ಎಂ.ಬಿ.ಹರೀಶ್ ವಿಶ್ವಾಸ



ಕೆ.ಆರ್.ಪೇಟೆ, ಜ.7- ತಾಲೂಕಿನಲ್ಲಿ ಜೆಡಿಎಸ್ ಪಕ್ಷ ಸದೃಢವಾಗಿದ್ದು, ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಹೆಚ್.ಟಿ.ಮಂಜು ಗೆಲುವು ಸಾಧಿಸುವುದು ಖಚಿತ ಎಂದು ಜೆಡಿಎಸ್ ಯುವ ನಾಯಕ ಎಂ.ಬಿ.ಹರೀಶ್ ವಿಶ್ವಾಸ ವ್ಯಕ್ತಪಡಿಸಿದರು.

ಪಟ್ಟಣದ ಬಸವೇಶ್ವರ ನಗರದಲ್ಲಿರುವ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್.ಟಿ.ಮಂಜು ಅವರ ನಿವಾಸದಲ್ಲಿ ನಡೆದ ತಾಲೂಕು ವೀರಶೈವ ಲಿಂಗಾಯಿತ, ಕುಂಬಾರ, ನೇಕಾರ ಸಮುದಾಯ ಸೇರಿದಂತೆ ವಿವಿಧ ಹಿಂದುಳಿದ ಸಮುದಾಯಗಳ ಮುಖಂಡರು ಹಾಗೂ ಕಾರ್ಯಕರ್ತರ ಸಭೆಯಲ್ಲಿ ಅವರು ಮಾತನಾಡಿದರು.

2019ರ ಉಪ ಚುನಾವಣೆಯಲ್ಲಿ ತಾಲೂಕಿನ ಜನತೆ ಯಡಿಯೂರಪ್ಪನವರು ಮುಖ್ಯಮಂತ್ರಿಯಾದರೇ ತಾಲೂಕು ಸಮಗ್ರ ಅಭಿವೃದ್ಧಿಯಾಗುತ್ತದೆ ಎಂಬ ಅಚಲ ವಿಶ್ವಾಸದ ಹಿನ್ನೆಲೆಯಲ್ಲಿ ಬಿಜೆಪಿಗೆ ಅವಕಾಶ ನೀಡಿದರೂ ತಾಲೂಕು ಅಭಿವೃದ್ಧಿಯಾಗುವ ಬದಲು ಅಭಿವೃದ್ಧಿ 10 ವರ್ಷ ಹಿಂದಕ್ಕೆ ಹೋಗಿದೆ ಎಂದು ಆರೋಪಿಸಿದರು.

ಮುಂಬರುವ ಚುನಾವಣೆಯಲ್ಲಿ ಪಕ್ಷದ ಗೆಲುವಿಗೆ ತಾಲೂಕಿನ ಎಲ್ಲಾ ಹಿಂದುಳಿದ ವರ್ಗಗಳ ಸಮಾಜದ ಮುಖಂಡರು ಮತ್ತು ಕಾರ್ಯಕರ್ತರ ಸಭೆ ನಡೆಸಿ ಅವರ ವಿಶ್ವಾಸ ಗಳಿಸುವ ಮೂಲಕ ಅತ್ಯಂತ ಹೆಚ್ಚು ಮತಗಳ ಅಂತರದ ಗೆಲುವು ಸಾಧಿಸಲು ಕಾರ್ಯತಂತ್ರ ರೂಪಿಸಲಾಗುತ್ತಿದೆ ಎಂದರು.

ಸಣ್ಣಪುಟ್ಟ ಜಾತಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಕೆಲಸಕ್ಕೆ ಮುಂದಾಗಿರುವ ತಾಲೂಕು ಜೆಡಿಎಸ್ ಅಧ್ಯಕ್ಷ ಜಾನಕೀರಾಂ ಹಾಗೂ ಹೆಚ್.ಟಿ.ಮಂಜು ಕಾರ್ಯ ಶ್ಲಾಘನೀಯ. ಬಿಜೆಪಿ ದೇಶಾದ್ಯಂತ ಇದೇ ಫಾರ್ಮುಲಾ ಅನುಸರಿಸಿ ಗೆಲುವು ಸಾಧಿಸುತ್ತಿದೆ. ತಾಲೂಕಿನಲ್ಲಿ 50 ಮತವಿರುವ ಸಮುದಾಯವನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಲು ಪಕ್ಷ ಮುಂದಾಗುತ್ತಿದೆ. ಇದಕ್ಕೆ ಉತ್ತಮ ಸ್ಪಂದನೆ ದೊರೆಯುತ್ತಿದೆ ಎಂದರು.

ಸಭೆಯಲ್ಲಿ ಜೆಡಿಎಸ್ ಅಭ್ಯರ್ಥಿ ಹೆಚ್.ಟಿ.ಮಂಜು, ತಾಲೂಕು ಜೆಡಿಎಸ್ ಅಧ್ಯಕ್ಷ ಜಾನಕೀರಾಂ, ಜೆಡಿಎಸ್ ಹಿರಿಯ ಮುಖಂಡ ಎ.ಆರ್.ರಘು, ಡಾ.ಶ್ರೀನಿವಾಸಶೆಟ್ಟಿ, ಆಲಂಬಾಡಿ ಗ್ರಾಪಂ ಸದಸ್ಯ ಕರಿಶೆಟ್ಟಿ, ಸಣ್ಣಪ್ಪಶೆಟ್ಟಿ, ಸುಕಂದರಾಜು, ಯಶವಂತ್, ಸಂತೇಬಾಚಹಳ್ಳಿ ಹೋಬಳಿ ಜೆಡಿಎಸ್ ಅಧ್ಯಕ್ಷ ರವಿಕುಮಾರ್, ಅಕ್ಕಿಹೆಬ್ಬಾಳು ಹೋಬಳಿ ಅಧ್ಯಕ್ಷ ಬಸವಲಿಂಗಪ್ಪ, ಕಸಬಾ ಹೋಬಳಿ ಅಧ್ಯಕ್ಷ ವಸಂತಕುಮಾರ್, ನಂಜಪ್ಪ ಸೇರಿದಂತೆ ನೂರಾರು ಮುಖಂಡರು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.



ಮಂಡ್ಯ ವಿಧಾನಸಭಾ ಕ್ಷೇತ್ರದ ಕೊಮ್ಮೇರಹಳ್ಳಿ ಶ್ರೀಮಹದೇಶ್ವರಸ್ವಾಮಿ ದೇವಸ್ಥಾನದ ಊಟದ ಹಾಲ್‌ಗೆ ಶ್ರೀಶಂಭು ಸೇವಾ ಟ್ರಸ್ಟ್ ಹಾಗೂ ಮನ್ಮುಲ್ ಅಧ್ಯಕ್ಷ ಬಿ.ಆರ್.ರಾಮಚಂದ್ರು ಸಹಾಯಧನ ನೀಡಿದರು. ಈ ವೇಳೆ ಗ್ರಾಮಸ್ಥರಾದ ಕುಮಾರ್, ಸತೀಶ್, ಅಪ್ಪು ಶಂಕರ, ಅರುಣ್, ರವಿ, ಕಾರ್ತಿಕ್, ಮಧು, ಗ್ರಾಮಸ್ಥರು ಮತ್ತಿತರರಿದ್ದರು.

ಬನ್ನಂಗಾಡಿ ಗ್ರಾಪಂಗೆ ಶ್ರುತಿ ಅಧ್ಯಕ್ಷೆ

ಪಾಂಡವಪುರ, ಜ.7- ತಾಲೂಕಿನ ಬನ್ನಂಗಾಡಿ ಗ್ರಾಪಂ ಅಧ್ಯಕ್ಷೆಯಾಗಿ ಕೆ.ಎಂ.ಶ್ರುತಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷೆ ಜಯಲಕ್ಷ್ಮಮ್ಮ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಶ್ರುತಿ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ತಾಪಂ ಇಓ ಲೋಕೇಶ್‌ಮೂರ್ತಿ ಘೋಷಿಸಿದರು.

ಈ ವೇಳೆ ಶ್ರುತಿ ಬೆಂಬಲಿಗರು ಪಟಾಕಿ ಸಿಡಿಸಿ, ಸಿಹಿಹಂಚಿ ಸಂಭ್ರಮಿಸಿದರು. ನೂತನ ಅಧ್ಯಕ್ಷರಿಗೆ ಎಲ್ಲಾ ಸದಸ್ಯರು ಅಭಿನಂದನೆ ಸಲ್ಲಿಸಿದರು.



ಅಧ್ಯಕ್ಷೆ ಕೆ.ಎಂ.ಶ್ರುತಿ ಮಾತನಾಡಿ, ಶಾಸಕ ಸಿ.ಎಸ್.ಪುಟ್ಟರಾಜು ಆಶೀರ್ವಾದ ಹಾಗೂ ಎಲ್ಲಾ ಸದಸ್ಯರ ಸಹಕಾರದಿಂದ ಅಧ್ಯಕ್ಷೆಯಾಗಿ ಆಯ್ಕೆಯಾಗಿದ್ದೇನೆ. ಮುಂದಿನ ದಿನಗಳಲ್ಲಿ ಎಲ್ಲಾ ಸದಸ್ಯರ ಸಹಕಾರ ಪಡೆದು ಗ್ರಾಪಂ ವ್ಯಾಪ್ತಿಯ ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸಲಾಗುವುದು ಎಂದರು.

ಈ ವೇಳೆ ಉಪಾಧ್ಯಕ್ಷ ತಮ್ಮೇಗೌಡ, ಮಾಜಿ ಅಧ್ಯಕ್ಷೆ ಜಯಲಕ್ಷ್ಮಮ್ಮ, ಸದಸ್ಯರಾದ ಪ್ರಭಾಕರ್, ಯೋಗೀಶ್, ಕೆ.ಭಾಗ್ಯ, ರಾಮಶೆಟ್ಟಿ, ಪದ್ಮಮ್ಮ, ಸವಿತ, ಬಲರಾಮಶೆಟ್ಟಿ, ಮಂಜಯ್ಯ, ರವಿಕುಮಾರ್, ವಸಂತ, ಪಿಡಿಓ ನಾರಾಯಣ್, ಮುಖಂಡರಾದ ಬಿ.ಪಿ.ಶ್ರೀನಿವಾಸ್, ವಾಸು, ಗ್ರಾಪಂ ಮಾಜಿ ಉಪಾಧ್ಯಕ್ಷ ಶ್ರೀನಿವಾಸ್, ಶಿವಸ್ವಾಮಿ, ವೆಂಕಟೇಶ್, ನಂಜುಂಡೇಗೌಡ, ರಾಮೇಗೌಡ, ನಾಗೇಶ್, ಯೋಗೀಶ್, ಚಿದಂಬರ, ಎಚ್.ಎಸ್.ನಾಗರಾಜು, ಪ್ರಕಾಶ್, ಪ್ರಸನ್ನ, ರಾಜು, ಪುಟ್ಟಪ್ಪ ಇನ್ನಿತರರಿದ್ದರು.

ಮಕ್ಕಳ ಹಕ್ಕು ರಕ್ಷಣೆ ನಮ್ಮೆಲ್ಲರ ಕರ್ತವ್ಯ: ಜಿಪಂ ಸಿಇಓ

ಮಂಡ್ಯ, ಜ.7- ಮಕ್ಕಳ ಮನಸ್ಸು ತುಂಬಾ ಸೂಕ್ಷ್ಮ. ಅವರ ಹಕ್ಕುಗಳ ರಕ್ಷಣೆ ನಮ್ಮೆಲ್ಲರ ಕರ್ತವ್ಯ ಎಂದು ಜಿಪಂ ಸಿಇಓ ಶಾಂತ ಹುಲ್ಮನಿ ತಿಳಿಸಿದರು.

ನಗರದ ಎಸ್.ಬಿ.ಸಮುದಾಯ ಭವನದಲ್ಲಿ ಜಿಲ್ಲಾಡಳಿತ, ಜಿಪಂ, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ಆಯೋಗ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಸಾರ್ವಜನಿಕ ಶಿಕ್ಷಣ ಇಲಾಖೆ, ಎಸ್‌ಬಿ ಎಜುಕೇಷನ್ ಟ್ರಸ್ಟ್ ಮಂಡ್ಯ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಬಾಲ್ಯವಿವಾಹ ನಿಷೇಧ ಕಾಯ್ದೆ, ಪೋಕ್ಸೋ ಕಾಯ್ದೆ, ಆರ್‌ಟಿಇ ಕಾಯ್ದೆ ಮತ್ತು ಬಾಲ ನ್ಯಾಯ ಕಾಯ್ದೆ ಅರಿವು ಕಾರ್ಯಕ್ರಮ



ಉದ್ಘಾಟಿಸಿ ಮಾತನಾಡಿದರು.

ಪ್ರಸ್ತುತ ಮಕ್ಕಳ ಹಕ್ಕುಗಳ ಮೇಲೆ ಸಾಕಷ್ಟು ಪ್ರಹಾರ ಆಗುತ್ತಿದೆ. ಮಕ್ಕಳ ರಕ್ಷಣೆಗೆ ಸರ್ಕಾರ ಹಲವು ಕಾಯ್ದೆ ರೂಪಿಸಿದೆ. ಮಕ್ಕಳು ಕಾಯ್ದೆಗಳ ಬಗ್ಗೆ ತಿಳಿದುಕೊಂಡರೆ ಅವರ ಮೇಲಿನ ದೌರ್ಜನ್ಯ ಸ್ವಲ್ಪ ಮಟ್ಟಿಗೆ ತಗ್ಗುತ್ತದೆ. ಬಾಲ್ಯದಲ್ಲಿ ಮಕ್ಕಳಿಗೆ ಶಿಕ್ಷಣ, ಪೌಷ್ಟಿಕ ಆಹಾರ ಹಾಗೂ ಎಲ್ಲಾ ರೀತಿಯ ಸೌಲಭ್ಯಗಳು ದೊರೆತರೆ ಮಕ್ಕಳು ಉತ್ತಮ ಪ್ರಜೆಗಳಾಗಲು ಸಹಕಾರಿ ಎಂದರು.

ಜಿಲ್ಲೆಯಲ್ಲಿ ಅತಿ ಹೆಚ್ಚು ಬಾಲ್ಯವಿವಾಹ ನಡೆಯುತ್ತಿದೆ ಎಂಬ ಸುದ್ದಿಗಳಿವೆ. ಅದನ್ನು ನಾವು ಅಳಿಸಬೇಕು. ಎಲ್ಲರೂ ಸಂಘಟಿತರಾಗಿ ಬಾಲ್ಯವಿವಾಹ ತಡೆಗಟ್ಟಿ ಮಕ್ಕಳಿಗೆ ಸಿಗಬೇಕಾದ ಸೌಲಭ್ಯಗಳನ್ನು ಕಲ್ಪಿಸಬೇಕು ಎಂದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಶ್ರೇಣಿ ಸಿವಿಲ್ ನ್ಯಾಯಧೀಶೆ ನಳಿನಿ ಕುಮಾರಿ ಮಾತನಾಡಿ, ಪೋಕ್ಸೋ ಕಾಯ್ದೆಯಡಿ 50 ಪ್ರಕರಣ ದಾಖಲಾಗಿವೆ. ಇನ್ನು ಐಪಿಸಿ 376ರ ಅಡಿ 245 ಪ್ರಕರಣಗಳಿವೆ. ಇದನ್ನು ನಾವು ಗಂಭೀರವಾಗಿ ಪರಿಗಣಿಸಬೇಕು. ಮಹಿಳಾ ಹಾಗೂ ಮಕ್ಕಳ ಇಲಾಖೆಯಿಂದ ಇನ್ನೂ ಹೆಚ್ಚಿನ ಅರಿವು ಕಾರ್ಯಕ್ರಮ ನಡೆಸಬೇಕು ಎಂದರು. ಕಾರ್ಯಕ್ರಮದಲ್ಲಿ ಆರ್.ನಾಗರಾಜ್, ಎಂ.ಕೆ.ಕುಮಾರಸ್ವಾಮಿ, ಬಿಇಓ ಸೌಭಾಗ್ಯ, ಬಿ.ಟಿ.ಚಂದ್ರಕಾಂತ ಸೇರಿದಂತೆ ಇನ್ನಿತರರಿದ್ದರು.

ಕಾರು, ಬೈಕ್ ನಡುವೆ ಡಿಕ್ಕಿ: ಸವಾರ ಸಾವು

ಹಲಗೂರು, ಜ.7-ಕಾರು ಮತ್ತು ಬೈಕ್ ನಡುವೆ ಡಿಕ್ಕಿ ಸಂಭವಿಸಿ ಬೈಕ್ ಸವಾರ ಮೃತಪಟ್ಟಿರುವ ಘಟನೆ ಶುಕ್ರವಾರ ಸಮೀಪದ ಬಾಣಸಮುದ್ರ ಅಕ್ವೇರಿಯಲ್ ಗಾರ್ಮೆಂಟ್ಸ್ ಸಮೀಪ ನಡೆದಿದೆ.

ತಾಲೂಕಿನ ನೆಟ್ಕಲ್ ಗ್ರಾಮದ ರಾಚಪ್ಪ (40) ಮೃತಪಟ್ಟವರು. ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುತ್ತಿದ್ದ ಹೆಂಡತಿಯನ್ನು ಸ್ವಗ್ರಾಮಕ್ಕೆ ಕರೆತರಲು ಗಾರ್ಮೆಂಟ್ಸ್ ಬಳಿ ಹೋಗಿದ್ದ ವೇಳೆ ಬೈಕ್ ತಿರುಗಿಸುವಾಗ ರಾಷ್ಟ್ರೀಯ ಹೆದ್ದಾರಿ-209ರಲ್ಲಿ ಹಲಗೂರು ಕಡೆಯಿಂದ ಬಂದ ಕಾರು ಬೈಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ರಾಚಪ್ಪ ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಸಾವನ್ನಪ್ಪಿದ್ದಾನೆ. ಈ ಸಂಬಂಧ ಹಲಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಟಕ ಅಭಿನಯದ ವೇಳೆ ಹೃದಯಾಘಾತದಿಂದ ಕಲಾವಿದ ಸಾವು




ಮಳವಳ್ಳಿ, ಜ.7- ರಂಗಭೂಮಿ ನಾಟಕ ಕಲಾವಿದರೊಬ್ಬರು ಪೌರಾಣಿಕ ನಾಟಕ ಅಭಿನಯ ಮಾಡುತ್ತಿದ್ದ ವೇಳೆ ಹೃದಯಾಘಾತದಿಂದ ಕುಸಿದು ಬಿದ್ದು ಸಾವನ್ನಪ್ಪಿರುವ ಘಟನೆ ತಾಲೂಕಿನ ಬಂಡೂರು ಗ್ರಾಮದಲ್ಲಿ ನಡೆದಿದೆ.

ತಾಲೂಕಿನ ದುಗ್ಗನಹಳ್ಳಿ ಗ್ರಾಮದ ಡಿ.ಎನ್.ನಂಜಯ್ಯ(41) ಮೃತಪಟ್ಟ ಕಲಾವಿದ. ಇತ್ತೀಚೆಗೆ ನಾಟಕಗಳಲ್ಲಿ ಅಭಿನಯವನ್ನು ರೂಢಿಸಿಕೊಂಡಿದ್ದ ನಂಜಯ್ಯ ಕೆಲವು ಸಾಮಾಜಿಕ ಹಾಗೂ ಪೌರಾಣಿಕ ನಾಟಕಗಳಲ್ಲಿ ಅಭಿನಯಿಸಿದ್ದರು. ಬಂಡೂರು ಗ್ರಾಮದಲ್ಲಿ ಶನಿವಾರ ನಡೆದ 'ಶ್ರೀ ಕೃಷ್ಣ ಸಂಧಾನ' ಎಂಬ ನಾಟಕದ ಆಯೋಜಿಸಲಾಗಿತ್ತು. ನಂಜಯ್ಯ ಸೇರಿದಂತೆ ಹಲವು ಕಲಾವಿದರು ಅಭಿನಯಿಸುತ್ತಿದ್ದರು. ನಾಟಕದಲ್ಲಿ ಸಾರ್ಥಕಿ, ಸೈಂದವ ಪಾತ್ರ ಅಭಿನಯ ಮಾಡುತ್ತಿದ್ದ ನಂಜಯ್ಯ ಪಾತ್ರದಲ್ಲಿ ತಲ್ಲೀನರಾಗಿದ್ದ ವೇಳೆಯೇ ನೋಡ ನೋಡುತ್ತಲೇ ಕುಸಿದು ಬಿದ್ದಿದ್ದಾರೆ.

ತಕ್ಷಣವೇ ಕಲಾವಿದರು ಹಾಗೂ ಗ್ರಾಮಸ್ಥರು ಅವರನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಕರೆತಂದಿದ್ದಾರೆ. ಆದರೆ ಅದಾಗಲೇ ಹೃದಯಾಘಾತದಿಂದ ಅವರು ಸಾವನ್ನಪ್ಪಿರುವುದಾಗಿ ವೈದ್ಯರು ಖಚಿತಪಡಿಸಿದರು. ಘಟನೆಯಿಂದಾಗಿ ಇಡೀ ಕಲಾವಿದರ ಬಳಗ ಮತ್ತು ದುಗ್ಗನಹಳ್ಳಿ ಹಾಗೂ ಬಂಡೂರು ಗ್ರಾಮಗಳಲ್ಲಿ ಶೋಕದ ವಾತಾವರಣ ನಿರ್ಮಾಣವಾಗಿದೆ.

ಇಂದು ಸಿದ್ದೇಶ್ವರ ಶ್ರೀಗಳ ಚಿತಾಭಸ್ಮ ವಿಸರ್ಜನೆ



ವಿಜಯಪುರ: ಸರಳತೆಯ ಸಂತ, ಜ್ಞಾನ ಜ್ಯೋತಿ ಜ್ಞಾನಯೋಗಾಶ್ರಮದ ಸಿದ್ದೇಶ್ವರ ಶ್ರೀಗಳ ಚಿತಾಭಸ್ಮವನ್ನು ನಾಳೆ (ಜ.8) ಜಗಜ್ಯೋತಿ ಬಸವಣ್ಣನವರ ಐಕ್ಯ ಸ್ಥಳ ಕೂಡಲಸಂಗಮ ಮತ್ತು ಶಂಭೋ ಶಂಕರನ ಆತ್ಮಲಿಂಗ ಇರುವ ಪುಣ್ಯಕ್ಷೇತ್ರ ಗೋಕರ್ಣದಲ್ಲಿ ವಿಸರ್ಜನೆ ಮಾಡಲಾಗುತ್ತದೆ ಎಂದು ಜ್ಞಾನ ಯೋಗಾಶ್ರಮದ ಅಧ್ಯಕ್ಷ ಶ್ರೀ ಬಸವಲಿಂಗ ಸ್ವಾಮೀಜಿ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ಬೆಳಗ್ಗೆ 7 ಗಂಟೆಗೆ ಕೂಡಲ ಸಂಗಮದಲ್ಲಿ ಚಿತಾಭಸ್ಮ ವಿಸರ್ಜನೆ ಮಾಡಲಾಗುತ್ತದೆ. ನಂತರ ಸಂಜೆ 5 ಗಂಟೆಗೆ ಗೋಕರ್ಣದಲ್ಲಿ ಚಿತಾಭಸ್ಮವನ್ನು ವಿಸರ್ಜಿಸಲಾಗುತ್ತದೆ. ಮುಂಜಾನೆ 5 ಗಂಟೆಗೆ ಜ್ಞಾನಯೋಗಾಶ್ರಮದಿಂದ ವಾಹನಗಳು ಹೊರಡಲಿವೆ. ಇನ್ನು ವಿಜಯಪುರದಿಂದ 300ಕ್ಕೂ ಹೆಚ್ಚು ವಾಹನಗಳಲ್ಲಿ ಭಕ್ತರು ತೆರಳುವ ಸಾಧ್ಯತೆ ಇದೆ. ಹೀಗಾಗಿ ಭಕ್ತರಿಗೆ ಆಶ್ರಮದಿಂದ ನೇರವಾಗಿ ಕೂಡಲ ಸಂಗಮಕ್ಕೆ ಬರುವಂತೆ ಸೂಚನೆ ನೀಡಲಾಗಿದೆ. ಇನ್ನೂ ಆಶ್ರಮದಿಂದ ವಾಹನ, ಉಪಾಹಾರ, ಊಟದ ವ್ಯವಸ್ಥೆ ಇಲ್ಲ ಎಂದು ಆಶ್ರಮದ ಅಧ್ಯಕ್ಷರು ಸ್ಪಷ್ಟಪಡಿಸಿದ್ದಾರೆ.

ಗಣರಾಜ್ಯೋತ್ಸವ: ರಾಜ್ಯದ ಸ್ತಬ್ಧಚಿತ್ರಕ್ಕೆ ಅನುಮತಿಯಿಲ್ಲ

ಬೆಂಗಳೂರು: ಹಾಲಿ ವರ್ಷದ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಈ ಬಾರಿ ರಾಜ್ಯದ ಸ್ತಬ್ಧಚಿತ್ರ ಇರುವುದಿಲ್ಲ ಎನ್ನಲಾಗಿದೆ. ರಾಜಧಾನಿ ದೆಹಲಿಯಲ್ಲಿ ಜ.26ರಂದು ನಡೆಯಲಿರುವ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಕರ್ನಾಟಕದ ಸಂಸ್ಕೃತಿ, ಕಲೆ, ಬಿಂಬಿಸುವ ಸ್ತಬ್ಧ ಚಿತ್ರಗಳು ಪ್ರಮುಖ ಆಕರ್ಷಣೆಯಾಗಿದ್ದವು. ಈ ಬಾರಿ ರಾಜ್ಯದ ಸ್ತಬ್ಧಚಿತ್ರಕ್ಕೆ ಅವಕಾಶ ನಿರಾಕರಿಸಿರುವುದು ವಿವಾದಕ್ಕೆಡೆ ಮಾಡಿಕೊಟ್ಟಿದ್ದು, ಕೇಂದ್ರದ ಈ ತೀರ್ಮಾನದ ವಿರುದ್ಧ ಪ್ರತಿಪಕ್ಷಗಳು ಕಿಡಿಕಾರಿದ್ದರೆ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕರ್ನಾಟಕದ ಸ್ತಬ್ಧಚಿತ್ರಕ್ಕೆ ಅನುಮತಿ ಸಿಗುತ್ತದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಘೇರಾವ್ ಹಾಕ್ತೇವೆ: ಗಣರಾಜ್ಯೋತ್ಸವದ ಸಂದರ್ಭದಲ್ಲಿ ಆಗುತ್ತಿರುವ ಅಪಮಾನ ಕನ್ನಡಿಗರು ಸಹಿಸುವುದಿಲ್ಲ. ಎಲ್ಲ ಸಂಸತ್ ಸದಸ್ಯರು ಪ್ರಧಾನಿಗೆ ಹಾಗೂ ಸಂಬಂಧಪಟ್ಟ ಸಚಿವರಿಗೆ ಒತ್ತಡ ಹೇರಿ ಇಲ್ಲದೇ ಹೋದರೆ ಕೇಂದ್ರ ಸಚಿವರಿಗೆ ಘೇರಾವ್ ಹಾಕಬೇಕಾಗುತ್ತದೆ ಎಂದು ಸಂಸದ ಡಿ.ಕೆ.ಸುರೇಶ್ ಎಚ್ಚರಿಕೆ ನೀಡಿದರು.

ಗಣರಾಜ್ಯೋತ್ಸವದ ಪರೇಡ್ ವೇಳೆ ರಾಜ್ಯದ ಸ್ತಬ್ಧಚಿತ್ರ ನಿರಾಕರಣೆ ವಿಚಾರವಾಗಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಭಾರತದಲ್ಲಿ ಮಾತ್ರವಲ್ಲ ಇಡೀ ವಿಶ್ವದಲ್ಲಿ ತನ್ನದೇ ಆದ ಇತಿಹಾಸ ಛಾಪು ಇಟ್ಟುಕೊಂಡ ಪ್ರಗತಿಪರ ರಾಜ್ಯ ಕರ್ನಾಟಕವಾಗಿದೆ. ಗಣರಾಜ್ಯೋತ್ಸವ ಸಂದರ್ಭದಲ್ಲಿ ಪ್ರತಿವರ್ಷ ರಾಜ್ಯಕ್ಕೆ ತನ್ನದೇ ಆದ ಸ್ಥಾನಮಾನ ಕೊಟ್ಟುಕೊಂಡು ಬರಲಾಗುತ್ತಿತ್ತು. ಆದರೆ ಈ ಬಾರಿ ರಾಜ್ಯದ ಪರಂಪರೆ ಶಕ್ತಿ ತೋರಿಸಲು ಗಣರಾಜ್ಯೋತ್ಸವದ ಟ್ಯಾಬ್ಲೋಗೂ ಅವಕಾಶ ಮಾಡಿಕೊಟ್ಟಿಲ್ಲ. ಕೇಂದ್ರ ಸರ್ಕಾರ ಯಾವ ಮಟ್ಟಿಗಿನ ಅನ್ಯಾಯ ಮಾಡುತ್ತಿದೆ ಎನ್ನೋದು ಗೊತ್ತಾಗುತ್ತದೆ ಎಂದು ಕಿಡಿಕಾರಿದರು.

ಲಂಕಾ ವಿರುದ್ಧದ ಟಿ20 ಸರಣಿ ಗೆದ್ದ ಟೀಂ ಇಂಡಿಯಾ

ರಾಜ್‌ಕೋಟ್, ಜ.7– ಸೂರ್ಯಕುಮಾರ್ ಯಾದವ್ ಅವರ ಅಮೋಘ ಶತಕದ ನೆರವಿನಿಂದ ಭಾರತ ಶ್ರೀಲಂಕಾ ವಿರುದ್ಧ 91 ರನ್‌ಗಳ ಭರ್ಜರಿ ಜಯ ಸಾಧಿಸಿದೆ.



ಆ ಮೂಲಕ 3 ಪಂದ್ಯಗಳ ಟಿ20 ಸರಣಿಯನ್ನು 2–1 ಅಂತರದಿಂದ ತನ್ನದಾಗಿಸಿಕೊಂಡಿದೆ.

ಇಲ್ಲಿನ ಸೌರಾಷ್ಟ್ರ ಕ್ರಿಕೆಟ್ ಅಸೋಸಿಯೇಷನ್ ಮೈದಾನದಲ್ಲಿ ನಡೆದ 3ನೇ ಟಿ20 ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಭಾರತ ಇನ್ನಿಂಗ್ಸ್ ಆರಂಭದಲ್ಲೇ 3 ರನ್ ಗಳಿಸಿದ್ದ ಇಶಾನ್ ಕಿಶನ್ ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಈ ವೇಳೆ 2ನೇ ವಿಕೆಟ್‌ಗೆ ಜೊತೆಯಾದ ರಾಹುಲ್ ತ್ರಿಪಾಠಿ ಹಾಗೂ ಶುಭ್‌ಮನ್ ಗಿಲ್ 49 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರಾದರೂ, 16 ಎಸೆತಗಳಲ್ಲಿ 5 ಬೌಂಡರಿ, 2 ಸಿಕ್ಸರ್ ಒಳಗೊಂಡ 35 ರನ್ ಗಳಿಸಿದ್ದ ತ್ರಿಪಾಠಿ ವಿಕೆಟ್ ಒಪ್ಪಿಸಿದರು. ನಂತರ ಬಂದ ಸೂರ್ಯಕುಮಾರ್, ಶುಭ್‌ಮನ್ ಗಿಲ್ ಜೊತೆಗೂಡಿ 3ನೇ ವಿಕೆಟ್‌ಗೆ 111 ರನ್‌ಗಳ ಜೊತೆಯಾಟವಾಡಿ ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು. ತಮ್ಮ ಆಕ್ರಮಣಕಾರಿ ಬ್ಯಾಟಿಂಗ್ ಮೂಲಕ ಶ್ರೀಲಂಕಾ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದ ಸೂರ್ಯಕುಮಾರ್ ಯಾದವ್ ಕೇವಲ 51 ಎಸೆತಗಳಲ್ಲಿ 9 ಸಿಕ್ಸರ್, 7 ಬೌಂಡರಿ ಒಳಗೊಂಡ 112ರನ್ ಗಳಿಸಿ ಅಜೇಯರಾಗಿ ಉಳಿದರು. ಇವರಿಗೆ ಉತ್ತಮ ಸಾಥ್ ನೀಡಿದ ಗಿಲ್ 46 ರನ್‌ಗಳಿಗೆ ಔಟಾಗುವ ಮೂಲಕ ಕೇವಲ 4 ರನ್‌ನಿಂದ ಅರ್ಧಶತಕದಿಂದ ವಂಚಿತರಾದರು. ಉಳಿದಂತೆ ಅಕ್ಷರ್ ಪಟೇಲ್ 9 ಎಸೆತಗಳಲ್ಲಿ 4 ಬೌಂಡರಿ ಒಳಗೊಂಡ 21ರನ್ ಗಳಿಸಿದರು. ಅಂತಿಮವಾಗಿ ಭಾರತ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 228 ರನ್ ಪೇರಿಸಿತು. ಶ್ರೀಲಂಕಾ ಪರ ದಿಲ್ಶಾನ್ ಮಧುಶಂಕ 2, ಕರುಣರತ್ನೆ, ರಜಿತ ಹಾಗೂ ಹಸರಂಗ ತಲಾ ಒಂದೊಂದು ವಿಕೆಟ್ ಉರುಳಿಸಿದರು.

229 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಶ್ರೀಲಂಕಾ 16.4 ಓವರ್‌ಗಳಲ್ಲಿ 137 ರನ್‌ಗಳಿಗೆ ಆಲೌಟಾಗುವ ಮೂಲಕ ಸೋಲು ಅನುಭವಿಸಿತು. ತಂಡದ ಪರ ಪಾತುಂ ನಿಸ್ಸಾಂಕ 15, ಕುಶಲ್ ಮೇಂಡಿಸ್ 23, ಧನಂಜಯ ಡಿಸಿಲ್ವ 22, ಚರಿತ್ ಅಸಲಂಕ 19, ದಾಸುನ್ ಶನಕ 23ರನ್ ಗಳಿಸಿದರು. ಭಾರತದ ಪರ ಹರ್ಷದೀಪ್ ಸಿಂಗ್ 3, ಹಾರ್ದಿಕ್ ಪಾಂಡ್ಯ, ಉಮ್ರಾನ್ ಮಲ್ಲಿಕ್ ಹಾಗೂ ಯಜುವೇಂದ್ರ ಚಹಲ್ ತಲಾ 2, ಅಕ್ಷರ್ ಪಟೇಲ್ 1 ವಿಕೆಟ್ ಪಡೆದರು. ಸೂರ್ಯ ಕುಮಾರ್ ಯಾದವ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರೆ, ಅಕ್ಷರ್ ಪಟೇಲ್ ಸರಣಿ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ದುಬೈ ಚಾಂಪಿಯನ್‌ಶಿಪ್ ಬಳಿಕ ನಿವೃತ್ತಿ: ಟೆನಿಸ್ ಧ್ರುವತಾರೆ ಸಾನಿಯಾ ಮಿರ್ಜಾ

ನವದೆಹಲಿ: ಭಾರತದ ಮಹಿಳಾ ಟೆನಿಸ್‌ನ ಧ್ರುವತಾರೆ ಸಾನಿಯಾ ಮಿರ್ಜಾ ಅವರು ಮುಂಬರುವ ದುಬೈ ಟೆನಿಸ್ ಚಾಂಪಿಯನ್‌ಶಿಪ್ ಬಳಿಕ ನಿವೃತ್ತಿ ಪಡೆಯಲು ನಿರ್ಧರಿಸಿದ್ದಾರೆ. 2023ರ ಫೆಬ್ರವರಿ 19 ರಿಂದ ಆರಂಭವಾಗುವ ದುಬೈ ಟೆನಿಸ್ ಚಾಂಪಿಯನ್‌ಶಿಪ್ ಬಳಿಕ ಮತ್ತೆ ಟೆನಿಸ್ ಕಣಕ್ಕೆ ಇಳಿಯುವುದಿಲ್ಲ ಎಂದು ಮಾಧ್ಯಮಗಳಿಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ. ಕಳೆದ ಜನವರಿಯಲ್ಲಿ ದೇಹವು ಮೊದಲಿನಂತೆ ಆಟಕ್ಕೆ ಒಗ್ಗುತ್ತಿಲ್ಲ. ಮೊದಲಿನಂತೆ ಶಕ್ತಿಯನ್ನು ಒಗ್ಗೂಡಿಸುವುದಕ್ಕೂ ಆಗುವುದಿಲ್ಲ ಹಾಗಾಗಿ ಮುಂದಿನ ದಿನಗಳಲ್ಲಿ ನಿವೃತ್ತಿ ಪಡೆಯುವುದಾಗಿ ಅವರು ಹೇಳಿದ್ದರು.

36 ವರ್ಷದ ಸಾನಿಯಾ ಮಿರ್ಜಾ ಮೊದಲ ಮಗುವಿಗೆ ಜನ್ಮ ನೀಡಿದ ನಂತರ ಸುದೀರ್ಘ ಕಾಲ ಅಂಗಣದಿಂದ ಹೊರಗೆ ಉಳಿದಿದ್ದರು. 2019ರ ಮಾರ್ಚ್‌ನಲ್ಲಿ ಮತ್ತೆ ಆಡಲು ಇಳಿದಿದ್ದರು. ಆದರೆ ಕೆಲವೇ ತಿಂಗಳಲ್ಲಿ ಕೋವಿಡ್ ಕಾಡಿದ್ದರಿಂದ ಆಟವನ್ನು ಮುಂದುವರೆಸಲು ಸಾಧ್ಯವಾಗಿರಲಿಲ್ಲ. ಆಸ್ಟ್ರೇಲಿಯನ್ ಓಪನ್ ಆಡಿದ ಬಳಿಕ ದುಬೈ ಚಾಂಪಿ ಯನ್‌ಶಿಪ್‌ನಲ್ಲಿ ಕೊನೆಯದಾಗಿ ಆಡಿ ಟೆನಿಸ್‌ಗೆ ವಿದಾಯ ಹೇಳುವುದಾಗಿ ಸಾನಿಯಾ ಹೇಳಿದ್ದಾರೆ. 1986ರ ನವೆಂಬರ್ 15ರಂದು ಮುಂಬೈನಲ್ಲಿ ಜನಿಸಿದ ಸಾನಿಯಾ 2010ರಲ್ಲಿ ಪಾಕಿಸ್ತಾನದ ಕ್ರಿಕೆಟಿಗ ಶೋಯೆಬ್ ಮಲಿಕ್ ಅವರನ್ನು ವಿವಾಹವಾಗಿದ್ದರು.




ವೈವಾಹಿಕ ಜೀವನದಲ್ಲಿ ಬಿರುಕು: ಸಾನಿಯಾ ಮಿರ್ಜಾ ಹಾಗೂ ಶೋಯೆಬ್ ಮಲಿಕ್ ನಡುವಿನ ವೈವಾಹಿಕ ಜೀವನದಲ್ಲಿ ಬಿರುಕು ಮೂಡಿದೆ ಎಂಬ ವದಂತಿ ಹರಡಿದೆ. ಇಬ್ಬರೂ ವಿಚ್ಛೇದನ ಪಡೆದಿದ್ದಾರೆ, ಆದರೆ ಅದಿನ್ನು ಅಧಿಕೃತವಾಗಿ ಬಹಿರಂಗವಾಗಿಲ್ಲ ಎಂದು ಪಾಕಿಸ್ತಾನದ ಮಾಧ್ಯಮಗಳಲ್ಲಿ ದೊಡ್ಡ ಚರ್ಚೆಯಾಗುತ್ತಿದೆ. ಸಾನಿಯಾ ಸಾಧನೆ: ಆಸ್ಟ್ರೇಲಿಯನ್ ಓಪನ್, ವಿಂಬಲ್ಡನ್, ಯುಎಸ್ ಓಪನ್, ಫ್ರೆಂಚ್ ಓಪನ್ ಪ್ರಶಸ್ತಿಗಳು ಮಾತ್ರವಲ್ಲದೇ ಅನೇಕ ಅಂತರರಾಷ್ಟ್ರೀಯ ಪಂದ್ಯಗಳನ್ನು ಗೆದ್ದಿದ್ದಾರೆ. ಭಾರತ ಸರ್ಕಾರದಿಂದ ಅರ್ಜುನ ಪ್ರಶಸ್ತಿ, ಪದ್ಮಶ್ರೀ, ರಾಜೀವ್ ಗಾಂಧಿ ಖೇಲ್ ರತ್ನ ಮತ್ತು ಪದ್ಮಭೂಷಣ ಪ್ರಶಸ್ತಿಗಳನ್ನು ಪಡೆದಿದ್ದಾರೆ.

ಬೆಂಗಳೂರಿನಲ್ಲಿ ಕೆಎಸ್‌ಎಂಸಿಎ ಸುವರ್ಣ ಮಹೋತ್ಸವ ಸಂಭ್ರಮ

ಹೊಸ ತಂತ್ರಜ್ಞಾನದ ಮೂಲಕ ಖಾಸಗಿ ಸಂಸ್ಥೆಗಳಿಗೆ ಪೈಪೋಟಿ ನೀಡುವಂತೆ ಸಂಸ್ಥೆಗೆ ಸಿಎಂ ಕಿವಿಮಾತು





ಬೆಂಗಳೂರು: ಕಳೆದ ಐವತ್ತು ವರ್ಷಗಳಲ್ಲಿ ಸಾಮಾಜಿಕ, ಆರ್ಥಿಕ ಮತ್ತು ತಾಂತ್ರಿಕ ಬದಲಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಹೊಸ ತಂತ್ರಜ್ಞಾನವನ್ನು ಬಳಸಿಕೊಂಡು ಹೆಚ್ಚು ಕ್ರಿಯಾಶೀಲತೆ ಮತ್ತು ಸೃಜನಶೀಲತೆಯಿಂದ ಕಾರ್ಯನಿರ್ವಹಿಸುವುದರ ಮೂಲಕ ಖಾಸಗಿ ಕಂಪನಿಗಳ ಜೊತೆ ಪೈಪೋಟಿ ನಡೆಸುವಂತೆ ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್‌ಗೆ (ಕೆಎಸ್‌ಎಂಸಿಎ) ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಿವಿಮಾತು ಹೇಳಿದರು.

ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಕಳೆದ ಬುಧವಾರ ನಡೆದ ಕೆಎಸ್‌ಎಂಸಿಎ ಸಂಸ್ಥೆಯ ಸುವರ್ಣ ಮಹೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಕಳೆದ ಐವತ್ತು ವರ್ಷಗಳಲ್ಲಿ ದೇಶ ಮತ್ತು ರಾಜ್ಯದಲ್ಲಿ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ತಾಂತ್ರಿಕವಾಗಿ ಸಾಕಷ್ಟು ಬದಲಾವಣೆಗಳಾಗಿದ್ದು, ಈ ಎಲ್ಲಾ ಬದಲಾವಣೆಗಳ ನಡುವೆಯೂ ಸಂಸ್ಥೆಯೊಂದು ಐವತ್ತು ವರ್ಷಗಳ ಕಾಲ ಯಶಸ್ವಿಯಾಗಿ ಕಾರ್ಯನಿರ್ವಹಿಸಿರುವುದರ ಜೊತೆಗೆ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿರುವುದು ದೊಡ್ಡ ಸಾಧನೆ ಎಂದು ಮೆಚ್ಚುಗೆ ಸೂಚಿಸಿದರು.

ಸರ್ಕಾರದ ಸಂಸ್ಥೆ ಎಂದ ಮೇಲೆ ಹಲವಾರು ನೀತಿ, ನಿರ್ಬಂಧಗಳು ಇರುತ್ತವೆ. ಆದರೂ ಖಾಸಗಿ ಸಂಸ್ಥೆಗಳ ಜೊತೆ ಪೈಪೋಟಿ ನಡೆಸುತ್ತಾ ಮುಖ್ಯಮಂತ್ರಿಗಳ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳನ್ನು ತನ್ನ ಮುಡಿಗೆ ಏರಿಸಿಕೊಂಡು ಸಂಸ್ಥೆ ಪ್ರಗತಿಯತ್ತ ಮುನ್ನುಗ್ಗುತ್ತಿರುವುದು ಹೆಮ್ಮೆಯ ವಿಷಯ ಎಂದು ಶ್ಲಾಘಿಸಿದರು. ಇದೇ ಸಂದರ್ಭದಲ್ಲಿ ಜಿಲ್ಲಾ ಶಾಖಾ ಕಚೇರಿ ಕಟ್ಟಡಗಳ ನಿರ್ಮಾಣಕ್ಕೆ ಮುಖ್ಯಮಂತ್ರಿಗಳು ವರ್ಚುವಲ್ ಮೂಲಕ ಚಾಲನೆ ನೀಡಿದರು.

ಸಂಸ್ಥೆಯ ನೂತನ ಲಾಂಛನ ಅನಾವರಣ ಮತ್ತು ಸುವರ್ಣ ಮಹೋತ್ಸವ ವಿಶೇಷ ಅಂಚೆ ಲಕೋಟೆ ಬಿಡುಗಡೆ ನೆರವೇರಿಸಿ ಮಾತನಾಡಿದ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಡಾ.ಮುರುಗೇಶ್ ನಿರಾಣಿ, ಕೆಎಸ್‌ಎಂಸಿಎ ಬೆಳವಣಿಗೆಗೆ ಪೂರಕವಾದ ಎಲ್ಲಾ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಸಂಸ್ಥೆಯ ಸುವರ್ಣ ಮಹೋತ್ಸವ ಸ್ಮರಣ ಸಂಚಿಕೆ ಬಿಡುಗಡೆ ಮಾಡಿ ಮಾತನಾಡಿದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಖಾಸಗಿ ಜಾಹೀರಾತುಗಳನ್ನು ಪ್ರಕಟಿಸಲು ಎಂಸಿಎ ಸಂಸ್ಥೆಗೆ ಸ್ವಾಯತ್ತತೆ ಅಗತ್ಯವಿದ್ದು, ರಾಜ್ಯ ಸರ್ಕಾರದಿಂದ ಅದನ್ನು ಕೊಡಿಸಲು ಸಚಿವ ಮುರುಗೇಶ್ ನಿರಾಣಿ ಮುಂದಾಗಬೇಕು ಎಂದು ಸಲಹೆ ನೀಡಿದರು.

ಪ್ರಾಸ್ತಾವಿಕ ಭಾಷಣ ಮಾಡಿದ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಸಿದ್ದಲಿಂಗಪ್ಪ ಬಿ. ಪೂಜಾರಿ, ಕಳೆದ 50 ವರ್ಷಗಳಲ್ಲಿ ಸಂಸ್ಥೆ ನಡೆದು ಬಂದ ಹಾದಿಯನ್ನು ಎಳೆಎಳೆಯಾಗಿ ವಿವರಿಸಿ, ತಮ್ಮ ಅಧಿಕಾರದ ಅವಧಿಯಲ್ಲಿ ಸಂಸ್ಥೆಯ ಪ್ರಗತಿಗೆ ಪೂರಕವಾಗಿ ಜಿಲ್ಲಾ ಕೇಂದ್ರಗಳಾದ ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಶಿವಮೊಗ್ಗ, ಮಂಗಳೂರು, ತುಮಕೂರು, ಚಿತ್ರದುರ್ಗ ಹಾಗೂ ಮಂಡ್ಯ ನಗರಗಳಲ್ಲಿ ಶಾಖಾ ಕಚೇರಿಗಳಿಗೆ ಸ್ವಂತ ಕಟ್ಟಡ ನಿರ್ಮಿಸಲು ನಿವೇಶನಗಳನ್ನು ಖರೀದಿಸಿದ್ದು, ಇವುಗಳ ಪೈಕಿ ಕೆಲವೊಂದು ಕಟ್ಟಡ ನಿರ್ಮಾಣಕ್ಕೆ ಟೆಂಡರ್ ಕರೆದು ಕ್ರಮ ವಹಿಸಲಾಗಿದೆ ಎಂದರು.

ಸಂಸ್ಥೆಯ ಅಧ್ಯಕ್ಷ ಎಂ.ಎಸ್. ಕರಿಗೌಡ್ರು ಸಭೆಯನ್ನುದ್ದೇಶಿಸಿ ಮಾತನಾಡಿದರು. ಸಂಸ್ಥೆಯ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲು ಉದ್ದೇಶಿಸಿರುವ ಪ್ರಸ್ತಾವನೆಯ ಮನವಿಪತ್ರವನ್ನು ಮುಖ್ಯಮಂತ್ರಿಗಳಿಗೆ ಅವರು ಸಲ್ಲಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಶಿವಾಜಿ ನಗರದ ಶಾಸಕ ರಿಜ್ವಾನ್ ಹರ್ಷದ್ ವಹಿಸಿದ್ದರು.

ಈ ಸಂದರ್ಭದಲ್ಲಿ ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ್, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಡಾ.ಇ.ವಿ. ರಮಣರೆಡ್ಡಿ ಮತ್ತು ಕರ್ನಾಟಕ ವೃತ್ತದ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಎಸ್.ರಾಜೇಂದ್ರ ಕುಮಾರ್, ಸಂಸ್ಥೆಯ ನಿರ್ದೇಶಕರು ಹಾಗೂ ಮಾಜಿ ಅಧ್ಯಕ್ಷರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಸಂಸ್ಥೆಯ ಗ್ರಾಹಕರು, ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ಮೈಸೂರು–ಬೆಂಗಳೂರು ದಶಪಥ ಹೆದ್ದಾರಿಗೆ 'ಕಾವೇರಿ' ರಕ್ಷಿಸಿದ ನಾಲ್ವಡಿ ಹೆಸರೇ ಸೂಕ್ತ

ಸಂಸದ ಪ್ರತಾಪ ಸಿಂಹರಿಗೆ ಮೈಲ್ಯಾಕ್ ಅಧ್ಯಕ್ಷ ರಘು ಕೌಟಿಲ್ಯ ಟಾಂಗ್

ಮೈಸೂರು, ಜ.7(ಎಂಕೆ)– ಬೆಂಗಳೂರು–ಮೈಸೂರು ದಶಪಥ ರಸ್ತೆಗೆ 'ನಾಲ್ವಡಿ ಕೃಷ್ಣರಾಜ ಒಡೆಯರ್' ಅವರ ಹೆಸರಿನ ಬದಲು 'ಕಾವೇರಿ' ನದಿ ಹೆಸರನ್ನಿಡುವ ಅಭಿಪ್ರಾಯ ವ್ಯಕ್ತಪಡಿಸಿದ ಸಂಸದ ಪ್ರತಾಪ್ ಸಿಂಹ ಅವರಿಗೆ ಮೈಲ್ಯಾಕ್ ಅಧ್ಯಕ್ಷ ರಘು ಕೌಟಿಲ್ಯ ಸರಣಿ ಟ್ವೀಟ್ ಮೂಲಕ ಟಾಂಗ್ ನೀಡಿದ್ದಾರೆ.

'ನಾಲ್ವಡಿ ಹೆಸರಿಗೆ ಅಪಸ್ವರದ ಅಪಚಾರ' ಎಂಬ ಹ್ಯಾಶ್ ಟ್ಯಾಗ್ ಮೂಲಕ ಟ್ವೀಟ್ ಮಾಡಿರುವ ರಘು ಕೌಟಿಲ್ಯ, ರಾಮ ರಾಜ್ಯದ ಕನಸನ್ನು ಸಾಕಾರಗೊಳಿಸಿದ ಭಾರತದ ಏಕೈಕ ರಾಜ ಶ್ರೇಷ್ಠ, ರಾಜಋಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಹೆಸರಿಗೆ ಸಾಟಿ ಎಂಬುದು ಯಾವುದೂ ಇಲ್ಲ.

ಬೆಂಗಳೂರು–ಮೈಸೂರು ದಶಪಥ ರಸ್ತೆಗೆ ನಾಲ್ವಡಿಯವರ ಹೆಸರಿಡಬೇಕೆಂದು, ದೂರದೃಷ್ಟಿಯ ಆಡಳಿತಕ್ಕೆ ಹೆಸರಾಗಿದ್ದ ಮಾಜಿ ಮುಖ್ಯಮಂತ್ರಿ ಹಾಗೂ ಹಿರಿಯ ರಾಜಕೀಯ ಮುತ್ಸದ್ದಿ ಎಸ್.ಎಂ.ಕೃಷ್ಣರವರೇ ಸ್ವಯಂ ಪ್ರೇರಣೆಯಿಂದ ಕೇಂದ್ರ ಸಚಿವ ನಿತಿನ್ ಗಡ್ಕರಿಯವರಿಗೆ ಪತ್ರ ಬರೆದು ಒತ್ತಾಯಿಸಿದ್ದಾರೆ. ನಾಲ್ವಡಿಯವರ ಕೊಡುಗೆಗಳು ಬೆಂಗಳೂರು–ಮೈಸೂರಿನ ಜನರ ಮನದಲ್ಲಿ ಶಾಶ್ವತವಾಗಿ ಅಚ್ಚೊತ್ತಿವೆ. ಹೆದ್ದಾರಿಗೆ ನಾಲ್ವಡಿ ಅವರ ಹೆಸರಿಡುವ ಮೂಲಕ ಅವರಿಗೆ ಕೃತಜ್ಞತಾ ಪೂರ್ವಕ ಗೌರವ ಸೂಚಿಸುವುದು ನಮ್ಮ ಕರ್ತವ್ಯ ಎಂದಿರುವುದಕ್ಕೆ ಹಿರಿಯ ಸಂಸದ





ವಿ.ಶ್ರೀನಿವಾಸ್ ಪ್ರಸಾದ್ ಅವರು ಕೂಡ ಬೆಂಬಲಿಸಿ, ಮಾತನಾಡಿದ್ದಾರೆ.

ಇದಕ್ಕೆ ದನಿಗೂಡಿಸುವುದು ಸಂಸದ ಪ್ರತಾಪ್ ಸಿಂಹ ಅವರ ಕರ್ತವ್ಯವಾಗಬೇಕಿತ್ತು. ನಾಲ್ವಡಿಯವರ ಹೆಸರನ್ನು ಬದಿಗೆ ಸರಿಸುವ ಉದ್ದೇಶದಿಂದ ನದಿಗಳ ಕುರಿತ ಪಾಂಡಿತ್ಯ ಪ್ರದರ್ಶಿಸಿ, 'ಕಾವೇರಿ' ಹೆಸರಿನ ನಾಮಕರಣಕ್ಕಾಗಿ ಸಮರ್ಥನೆಗೆ ಇಳಿಯುವುದು ಮೂಲ ಮೈಸೂರಿಗರ ಆತ್ಮಭಿಮಾನವನ್ನು ಕೆಣಕಿದಂತಾಗುತ್ತದೆ. ಎಸ್ ಎಂ.ಕೃಷ್ಣರಂಥ ಮುತ್ಸದ್ದಿ ಹಾಗೂ ಮೇಧಾವಿ ರಾಜಕಾರಣಿಯನ್ನು ಅಪಮಾನಿಸಿದಂತಾಗುತ್ತದೆ ಎಂಬ ಅರಿವು ಸಂಸದರಿಗಿರಲಿ ಎಂದು ಕುಟುಕಿದ್ದಾರೆ.

ಸಂಸದ ಪ್ರತಾಪ್ ಸಿಂಹ ಅವರು ಅತ್ಯಂತ ಕ್ರಿಯಾಶೀಲರು. ಈ ವಿಷಯದಲ್ಲಿ ಎರಡು ಮಾತಿಲ್ಲ. ಆದರೆ ಮೈಸೂರು–ಬೆಂಗಳೂರು ದಶಪಥ ಹೆದ್ದಾರಿಗೆ 'ನಾಲ್ವಡಿ ಕೃಷ್ಣರಾಜ ಒಡೆಯರ್' ಹೆಸರಿನ ಬದಲು 'ಕಾವೇರಿ ಎಕ್ಸ್‌ಪ್ರೆಸ್ ವೇ' ಎಂದು ನಾಮಕರಣ ಮಾಡಬೇಕೆಂದು ಪ್ರಸ್ತಾಪಿಸಿರುವುದು ಸರಿಯಾದ ಕ್ರಮವಲ್ಲ. ಜನಪರ ಆಡಳಿತದ ಮೂಲಕ ದೇಶ–ವಿದೇಶದಲ್ಲಿ ಖ್ಯಾತಿಗಳಿಸಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಹೆಸರನ್ನು ಎರಡು ಪ್ರತಿಷ್ಠಿತ ನಗರಗಳ ನಡುವೆ ಸಂಪರ್ಕ ಕಲ್ಪಿಸುವ ಹೆದ್ದಾರಿಗೆ ನಾಮಕರಣ ಮಾಡುವುದು ಅತ್ಯಂತ ಔಚಿತ್ಯಪೂರ್ಣ ಸಂಗತಿಯಾಗಿದೆ. 'ಕಾವೇರಿ' ಹೆಸರನ್ನು ನಾಮಕರಣ ಮಾಡಲೇಬೇಕೆಂದಿದ್ದರೆ ಈ ಜೀವನದಿ ಸಂಪರ್ಕ ಹೊಂದಿರುವ ಕರ್ನಾಟಕ–ತಮಿಳುನಾಡಿಗೆ ಸಂಬಂಧಿಸಿದಂತೆ ಬೆಂಗಳೂರು–ಚೆನ್ನೈ ನಡುವೆ ನಿರ್ಮಾಣವಾಗುತ್ತಿರುವ ಎಕ್ಸ್‌ಪ್ರೆಸ್ ವೇಗೆ ನಾಮಕರಣ ಮಾಡುವಂತೆ ಪ್ರಸ್ತಾಪಿಸುವುದು ಸೂಕ್ತವಾಗಿದೆ.

ಹಿಮಾಲಯದೆತ್ತರದ ವ್ಯಕ್ತಿತ್ವದ, ಅಂತರ ರಾಷ್ಟ್ರೀಯ ಮಾನ್ಯತೆಯ ಅರ್ಹತೆ ಹೊಂದಿರುವ ನಾಲ್ವಡಿಯವರನ್ನು ಸ್ಥಳೀಯ ಮಟ್ಟದ ವಿಮಾನ ನಿಲ್ದಾಣಕ್ಕೆ ಹೆಸರಿಟ್ಟು ನುಣುಚಿಕೊಳ್ಳುವ ಜಾಣತನ ಬೇಡ. 'ಕಾವೇರಿ' ನಮ್ಮ ಜೀವನಾಡಿ, ಅದನ್ನು ಮುಡಿಗೇರಿಸಿಕೊಂಡು ರಕ್ಷಿಸಿದವರು ನಮ್ಮ ನಾಲ್ವಡಿ ಪ್ರಭುಗಳೇ. ದಶಪಥ ಹೆದ್ದಾರಿಗೆ ಹೆಸರಿಡುವ ವಿಷಯದಲ್ಲಿ ಪ್ರತಿಷ್ಠೆ ಹಾಗೂ ರಾಜಕಾರಣ ತಿರುಗುಬಾಣವಾದೀತು! ಮೈಸೂರು ರಾಜಮನೆತನದ ಕೊಡುಗೆಗಳ ಉಪಕಾರ ಸ್ಮರಣೆ ನಮ್ಮ ನಿತ್ಯ ಮಂತ್ರ, ಅದರ ಪ್ರತೀಕವಾಗಿ ಯದುವಂಶದ ಹೆಸರು ಎಲ್ಲೆಲ್ಲೂ ರಾರಾಜಿಸುತ್ತಿರಬೇಕು ಎಂದು ರಘು ತಿಳಿಸಿದ್ದಾರೆ.

ಕೇರಳದ ವಿಶೇಷ ಕುಜಿಮಂತಿ ಬಿರಿಯಾನಿ ತಿಂದು ಯುವತಿ ಸಾವು!

ಕಾಸರಗೋಡು: ಫುಡ್ ಪಾಯಿಸನ್‌ನಿಂದಾಗಿ ಕೇರಳದಲ್ಲಿ ಮತ್ತೊಬ್ಬ ಯುವತಿ ಮೃತಪಟ್ಟಿದ್ದಾಳೆ. ಮೃತ ಯುವತಿ ಕಾಸರಗೋಡಿನ ಥಲಕ್ಲೇ ಮೂಲದ ಅಂಜುಶ್ರೀ ಪಾರ್ವತಿ.



ಉದುಮದಲ್ಲಿರುವ ಹೋಟೆಲ್ ಒಂದರಲ್ಲಿ ಆನ್‌ಲೈನ್ ಮೂಲಕ ಕುಜಿಮಂತಿ ಹೆಸರಿನ ಚಿಕನ್ ಬಿರಿಯಾನಿ ತರಿಸಿಕೊಂಡು ಅಂಜುಶ್ರೀ ಸೇವಿಸಿದ್ದಳು. ನಂತರ ಆರೋಗ್ಯದಲ್ಲಿ ಏರುಪೇರು ಕಂಡುಬಂದಿತ್ತು. ಪರಿಸ್ಥಿತಿ ಗಂಭೀರವಾದ ಬೆನ್ನಲ್ಲೇ ಆಕೆಯನ್ನು ಮಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಿಸದೇ ಮೃತಪಟ್ಟಿದ್ದಾಳೆ. ಫುಡ್ ಪಾಯಿಸನ್‌ನಿಂದ ಮೃತಪಟ್ಟಿದ್ದಾಳೆ ಎಂದು ವೈದ್ಯರು ದೃಢಪಡಿಸಿದ್ದಾರೆ.

ಉದುಮದಲ್ಲಿರುವ ರೊಮ್ಯಾನ್ಸಿಯಾ ಹೋಟೆಲ್‌ನಿಂದ ಆಹಾರ ಪದಾರ್ಥ ಖರೀದಿಸಲಾಗಿತ್ತು. ಅಂಜು ಜೊತೆಗೆ ಊಟ ಮಾಡಿದ ಸ್ನೇಹಿತರಿಗೂ ಫುಡ್ ಪಾಯಿಸನ್ ಆಗಿದ್ದು, ಅವರು ಕೂಡ ಅಸ್ವಸ್ಥರಾಗಿದ್ದಾರೆ ಎಂದು ಉದುಮ ಶಾಸಕ ಸಿ.ಎಚ್. ಕುಂಜಂಬು ಮಾಹಿತಿ ನೀಡಿದ್ದಾರೆ. ಈ ಘಟನೆ ಆರೋಗ್ಯ ಸಚಿವರ ಗಮನಕ್ಕೆ ಬರುತ್ತಿದ್ದಂತೆ ತನಿಖೆಗೆ ಆದೇಶಿಸಿದ್ದಾರೆ.

ಅಂಜುಶ್ರೀ ಸಂಬಂಧಿಕರು ಪೊಲೀಸರಿಗೆ ದೂರು ನೀಡಿದ್ದು, ಕಾಸರಗೋಡು ಮತ್ತು ಕಣ್ಣೂರಿನ ಅಧಿಕಾರಿಗಳು ಹೋಟೆಲ್‌ಗೆ ಭೇಟಿ ನೀಡಿ ಸಾವಿಗೆ ಕಾರಣ 'ಕುಜಿಮಂತಿ'ಯೇ ಎಂಬುದನ್ನು ಖಚಿತಪಡಿಸಿಕೊಳ್ಳಲಿದ್ದಾರೆ. ಸಂಬಂಧಪಟ್ಟ ಹೋಟೆಲ್‌ನಲ್ಲಿರುವ ನೀರು ಮತ್ತು ಆಹಾರವನ್ನು ಪರಿಶೀಲಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಳೆದ ಒಂದು ವಾರದಲ್ಲಿ ಇದು 2ನೇ ಫುಡ್ ಪಾಯಿಸನ್ ಸಾವಾಗಿದೆ. ಕೊಟ್ಟಾಯಂ ಮೂಲದ ರಶ್ಮಿ ಅವರು 'ಅಲ್ಫಾಹಮ್' ಸೇವಿಸಿ ಸೋಮವಾರ ಮೃತಪಟ್ಟಿದ್ದರು. ಅಲ್ಲದೆ ಇತ್ತೀಚೆಗೆ ಕಾಸರಗೋಡಿನಲ್ಲಿ ದೇವಾನಂದ ಎಂಬ ಬಾಲಕಿ ಶವರ್ಮಾ ತಿಂದು ಸಾವನ್ನಪ್ಪಿದ್ದಳು. ಕೇರಳದ ಈ ರೀತಿಯ ಪ್ರಕರಣಗಳು ಸಾಮಾನ್ಯವಾಗಿದ್ದು, ಜನರನ್ನು ಆತಂಕಕ್ಕೆ ದೂಡಿದೆ.



ಪಡುವಾರಹಳ್ಳಿ ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಸಿ.ಸಂತೋಷ್ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ಉಮಾಶಂಕರ್, ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಸಂಘದ ಅಧ್ಯಕ್ಷ ಎಂ.ಭೈರಪ್ಪ, ಸೋಮಣ್ಣ, ಸೋಮು, ಎನ್.ಚಂದ್ರಶೇಖರ್, ಕುಮಾರ್, ಲೋಕೇಶ್ವರ, ಕುಮಾರ್, ರಾಘವ್‌ಗೌಡ, ಲಕ್ಷ್ಮಮ್ಮ, ಮಹಾಲಕ್ಷ್ಮಿ, ಪ್ರದೀಪ್, ಸುರೇಶ್, ವಿಮಲ್ ಇದ್ದರು.

ಇಗ್ನೋ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು,ಜ.7–ಇಂದಿರಾ ಗಾಂಧಿ ನ್ಯಾಷನಲ್ ಓಪನ್ ಯುನಿವರ್ಸಿಟಿ ವತಿಯಿಂದ 76 ಪ್ರಮಾಣಪತ್ರ, 16 ಡಿಪ್ಲೊಮಾ, 60 ಸ್ನಾತಕೋತ್ತರ ಡಿಪ್ಲೊಮಾ, 35 ಪದವಿ ಮತ್ತು 65 ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನಿಸಿದ್ದು, ಆಸಕ್ತರು ಅರ್ಜಿಯನ್ನು ಜ.31ರೊಳಗೆ https://ignouadmission.samarth.edu.inನಲ್ಲಿ ಅಗತ್ಯ ದಾಖಲೆಗಳನ್ನು ಅಪ್‌ಲೋಡ್ ಮಾಡುವ ಮೂಲಕ ಮತ್ತು ತಮ್ಮ ಅಧ್ಯಯನ ಕೇಂದ್ರವನ್ನು ಆಯ್ಕೆಮಾಡಿ ದಾಖಲಾತಿಯನ್ನು ಪಡೆಯಬಹುದು. ನಂತರ https://scholarships.gov.in/ನಲ್ಲಿ ಭಾರತ ಸರ್ಕಾರದ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ. ಮಾಹಿತಿಗೆ admissionrc13@ignou.ac.inಗೆ ಅಥವಾ 9449337272, 080–29607272ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಪರಿಷ್ಕೃತ ವೇತನ ಭರವಸೆ : ಅತಿಥಿ ಉಪನ್ಯಾಸಕರ ಧರಣಿ ಅಂತ್ಯ





ಮೈಸೂರು ವಿವಿ ಮುಖ್ಯದ್ವಾರದಲ್ಲಿ ವಿವಿ ಅತಿಥಿ ಉಪನ್ಯಾಸಕರು ಶನಿವಾರ ನಡೆಸಿದ ಪ್ರತಿಭಟನೆ ಸ್ಥಳಕ್ಕೆ ಪರಿಷತ್ ಸದಸ್ಯ ಮಧು ಜಿ.ಮಾದೇಗೌಡ, ಮಾಜಿ ಸಂಸದ ಆರ್.ಧ್ರುವನಾರಾಯಣ್ ಭೇಟಿ ನೀಡಿದರು. ಶಾಸಕ ಜಿ.ಟಿ.ದೇವೇಗೌಡರೂ ಸ್ಥಳಕ್ಕೆ ಭೇಟಿ ನೀಡಿ, ಪ್ರತಿಭಟನಾನಿರತರ ಸಮಸ್ಯೆ ಆಲಿಸುತ್ತಿರುವುದನ್ನು ಬಲಚಿತ್ರದಲ್ಲಿ ಕಾಣಬಹುದು.

ಮೈಸೂರು ವಿಶ್ವವಿದ್ಯಾನಿಲಯ ಪ್ರಭಾರ ಕುಲಪತಿ ಪ್ರೊ.ರಾಜಶೇಖರ್ ನೇತೃತ್ವದಲ್ಲಿ ಶನಿವಾರ ನಡೆದ ಸಭೆಯಲ್ಲಿ ಅತಿಥಿ ಉಪನ್ಯಾಸಕರ ಬೇಡಿಕೆಗಳನ್ನು ಈಡೇ ರಿಸಲು ಒಪ್ಪಿಕೊಂಡಿದ್ದಾರೆ. ಈ ಕುರಿತು ಬುಧವಾರದೊಳಗೆ ಸುತ್ತೋಲೆ ಹೊರಡಿಸಲಾಗುವುದು ಎಂಬ ಭರವಸೆ ನೀಡಿದ ಹಿನ್ನೆಲೆಯಲ್ಲಿ 4 ದಿನಗಳಿಂದ ನಡೆಸುತ್ತಿದ್ದ ಅತಿಥಿ ಉಪ ನ್ಯಾಸಕರ ಪ್ರತಿಭಟನೆಯನ್ನು ಅಂತ್ಯಗೊಳಿಸಲಾಗಿದೆ.

–ಡಾ.ಚಂದ್ರಶೇಖರ್, ಸದಸ್ಯರು, ಮೈಸೂರು ವಿವಿ ವ್ಯಾಪ್ತಿಯ ಅತಿಥಿ ಉಪನ್ಯಾಸಕರ ಬಳಗ

ಮೈಸೂರು,ಜ.7(ಎಸ್‌ಪಿಎನ್)– ಪರಿಷ್ಕೃತ ವೇತನವೂ (32 ಸಾವಿರ ರೂ.) ಸೇರಿದಂತೆ ಇತರೆ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಮೈಸೂರು ವಿವಿ ಅತಿಥಿ ಉಪನ್ಯಾಸಕರ ಬಳಗದ ವತಿಯಿಂದ ಮಾನಸಗಂಗೋತ್ರಿ ಪ್ರವೇಶ ದ್ವಾರದಲ್ಲಿ ಅತಿಥಿ ಉಪನ್ಯಾಸಕರು ನಡೆಸುತ್ತಿರುವ ಧರಣಿ ಅಂತ್ಯಗೊಂಡಿದೆ.

ಮೈಸೂರು ವಿವಿ ಕ್ರಾಫರ್ಡ್ ಹಾಲ್‌ನಲ್ಲಿ ಪ್ರಭಾರ ಕುಲಪತಿ ಪ್ರೊ.ರಾಜಶೇಖರ್ ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಶಾಸಕ ಎನ್.ಮಹೇಶ್, ಪರಿಷತ್ ಸದಸ್ಯ ಮಧು ಜಿ.ಮಾದೇಗೌಡ, ಮೈಸೂರು ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ ಕುಮಾರ್ ಹಾಗೂ ಮಾಜಿ ಸಿಂಡಿಕೇಟ್ ಸದಸ್ಯ ಗೋಪಿನಾಥ್ ಸೇರಿದಂತೆ ಇತರೆ ಸದಸ್ಯರ ಸಮ್ಮುಖದಲ್ಲಿ ಅತಿಥಿ ಉಪನ್ಯಾಸಕರ ಬೇಡಿಕೆಯನ್ನು ಈಡೇರಿಸಲು ಒಪ್ಪಿಕೊಂಡಿದ್ದಾರೆ.

ಅತಿಥಿ ಉಪನ್ಯಾಸಕರಿಗೆ ಪರಿಷ್ಕೃತ ವೇತನ ನೀಡಲು ಕಳೆದ 6 ತಿಂಗಳ ಹಿಂದೆಯೇ ಮೈಸೂರು ವಿವಿ ಸಿಂಡಿಕೇಟ್ ಸಭೆ ಒಪ್ಪಿಗೆ ಕೊಟ್ಟಿದೆ. ಆದರೆ, ಉನ್ನತ ಶಿಕ್ಷಣ ಇಲಾಖೆ ಅಧಿಕಾರಿಗಳು ರಾಜ್ಯದ ಬೇರೆ ವಿವಿ ಅತಿಥಿ ಉಪನ್ಯಾಸಕರು ಇದೇ ಮಾದರಿಯ ವೇತನ ಹೆಚ್ಚಳಕ್ಕೆ ಪಟ್ಟು ಹಿಡಿದರೆ, ಸರ್ಕಾರದ ಬೊಕ್ಕಸದ ಮೇಲೆ ಭಾರೀ ಪರಿಣಾಮ ಬೀರುತ್ತದೆ. ಹಾಗಾಗಿ ಮೈಸೂರು ವಿವಿ ತೆಗೆದುಕೊಂಡಿದ್ದ ನಿರ್ಧಾರಕ್ಕೆ ಉನ್ನತ ಶಿಕ್ಷಣ ಇಲಾಖೆ ತಾಂತ್ರಿಕ ಕಾರಣ ನೀಡಿ ತಡೆಯೊಡ್ಡಿತ್ತು ಎಂದು ಶಾಸಕ ಎನ್.ಮಹೇಶ್ ತಿಳಿಸಿದರು.

ಈ ಸಂಬಂಧ ಮೈಸೂರು ವಿವಿ ಹಣಕಾಸು ಅಧಿಕಾರಿಗಳು ಹಾಗೂ ಸಿಂಡಿಕೇಟ್ ಸದಸ್ಯರ ನೇತೃತ್ವದಲ್ಲಿ ಕಳೆದ 6 ತಿಂಗಳ ಹಿಂದೆಯೇ ಉಪ ಸಮಿತಿ ರಚಿಸಲಾಗಿತ್ತು. ಈ ಸಮಿತಿ ಶಿಫಾರಸ್ಸಿನ ಮೇರೆಗೆ ಸಿಂಡಿಕೇಟ್ ಸಭೆಯಲ್ಲೂ ಅತಿಥಿ ಉಪನ್ಯಾಸಕರಿಗೆ ಪರಿಷ್ಕೃತ ವೇತನ ನೀಡಲು 3 ತಿಂಗಳ ಹಿಂದೆ ಒಪ್ಪಿಗೆ ಸೂಚಿಸಿದ್ದು, ಆದರೆ, ಉನ್ನತ ಶಿಕ್ಷಣ ಇಲಾಖೆ ಮಧ್ಯ ಪ್ರವೇಶದಿಂದಾಗಿ ಈ ಗೊಂದಲ ತಲೆದೋರಿತ್ತು ಎಂದು ತಿಳಿಸಿದರು.

ಅತಿಥಿ ಉಪನ್ಯಾಸಕರಿಗೆ ನೀಡುತ್ತಿರುವ ವೇತನ ಕಡಿಮೆ ಇದೆ. ಈ ಕಾರಣಕ್ಕಾಗಿ ಮೈಸೂರು ವಿವಿ ವ್ಯಾಪ್ತಿಯಲ್ಲೇ ಸಂಪನ್ಮೂಲ ಕ್ರೋಢೀಕರಿಸಿ ವೇತನ ಹೆಚ್ಚಿಸಲು ನಿರ್ಧರಿಸಲಾಗಿತ್ತು. ಇದರಿಂದ ಸರ್ಕಾರದ ಬೊಕ್ಕಸದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂಬ ಅಂಶವನ್ನು ಕುಲಪತಿ, ಕುಲಸಚಿವರು ಹಾಗೂ ಹಣ ಕಾಸು ಅಧಿಕಾರಿಗಳಿಗೆ ಮನವರಿಕೆ ಮಾಡಿಕೊಟ್ಟ ಹಿನ್ನೆಲೆಯಲ್ಲಿ ತಡೆ ನೀಡಲಾಗಿದ್ದ ಪರಿಷ್ಕೃತ ವೇತನವನ್ನು ಮರು ಜಾರಿ ಗೊಳಿಸಲು ಕುಲಪತಿಗಳು ಒಪ್ಪಿಕೊಂಡಿದ್ದಾರೆ ಎಂದರು.

ಇಂದಿನ ಮಾತುಕತೆ ಸಾರಾಂಶವನ್ನು ಉನ್ನತ ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಈ ಭಾಗದ ಜನಪ್ರತಿನಿಧಿಗಳ ನಿಯೋಗ ತೆರಳಿ, ಮನವರಿಕೆ ಮಾಡಿಕೊಡಲಾಗುವುದು. ಇದಕ್ಕೆ ಪೂರಕವಾಗಿ ಕುಲಪತಿಗಳು ಸಹ ಸರ್ಕಾರಕ್ಕೆ ಪತ್ರ ಬರೆದು ಅತಿಥಿ ಉಪನ್ಯಾಸಕರು ಧರಣಿ ನಡೆಸುತ್ತಿರುವುದರಿಂದ ವಿವಿ ಶೈಕ್ಷಣಿಕ ಚಟುವಟಿಕೆ ಮೇಲಾಗುವ ಪರಿಣಾಮವನ್ನು ಸರ್ಕಾರದ ಗಮನಕ್ಕೆ ತರುವಂತೆ ಸೂಚಿಸಲಾಗಿದೆ ಎಂದರು. ಅಲ್ಲದೆ, ಇಂದಿನ ಸಭೆಯಲ್ಲಿ ಪರಿಷ್ಕೃತ ವೇತನ ನೀಡಲು ಮೈವಿವಿ ಅಧಿಕಾರಿಗಳು ಒಪ್ಪಿಗೆ ನೀಡಿದ ಹಿನ್ನೆಲೆ ಯಲ್ಲಿ 4 ದಿನಗಳಿಂದ ಉಪನ್ಯಾಸಕರು ನಡೆಸುತ್ತಿದ್ದ ಪ್ರತಿಭಟನೆಯನ್ನು ಅಂತ್ಯಗೊಳಿಸಲು ಒಪ್ಪಿಕೊಂಡಿದ್ದಾರೆ ಎಂದರು. ಮೈಸೂರು ವಿವಿ ಕುಲಸಚಿವೆ ಶೈಲಜಾ, ಕುಲಸಚಿವ (ಪರೀಕ್ಷಾಂಗ) ಪ್ರೊ.ಜ್ಞಾನಪ್ರಕಾಶ್, ಹಣಕಾಸು ಅಧಿಕಾರಿ ಗಜಾನನ ಭಟ್, ಅತಿಥಿ ಉಪನ್ಯಾಸಕ ಬಳಗದ ಪರವಾಗಿ ಡಾ.ಗಿರೀಶ್, ಡಾ.ಚಂದ್ರಶೇಖರ್, ಡಾ.ಮನೋಹರ್, ಡಾ.ವಿಜಯರಾಜು, ಡಾ.ಶ್ರೀಧರ್, ಡಾ.ಸೌಜನ್ಯ, ಡಾ.ಚೈತ್ರ ಸಭೆಯಲ್ಲಿದ್ದರು.



ಮೈಸೂರು ಕೊಡವ ಸಮಾಜ ಸಾಂಸ್ಕೃತಿಕ ಮತ್ತು ಕ್ರೀಡಾ ಕ್ಲಬ್ ವತಿಯಿಂದ ಕುವೆಂಪುನಗರದಲ್ಲಿರುವ ಕಾವೇರಿ ಶಾಲೆ ಮೈದಾನದಲ್ಲಿ ಇತ್ತೀಚೆಗೆ ನಡೆದ ಡಾ. ಅದೆಂಗಡ ಎ.ಕುಟ್ಟಪ್ಪ ಮೆಮೋರಿಯಲ್ ಥ್ರೋಬಾಲ್ ಪಂದ್ಯಾವಳಿಯಲ್ಲಿ ಮೈಸೂರಿನ ಹೆಬ್ಬಾಳದಲ್ಲಿರುವ ಇಗ್ಗುತ್ತಪ್ಪ ಕೊಡವ ಕ್ಷೇಮಾಭಿವೃದ್ಧಿ ಸಂಘದ ತಂಡ ವಿನ್ನರ್ ಆಗಿ ಹೊರ ಹೊಮ್ಮಿತು. ಈ ವೇಳೆ ಶ್ರೀ ಕಾವೇರಿ ಕೊಡಗು ಮಹಿಳಾ ಸಂಘದ ಅಧ್ಯಕ್ಷೆ ಪೂಜಂಡ ಲವ್ಲಿ ಅಪ್ಪಯ್ಯ, ಮೈಸೂರು ಕೊಡವ ಸಮಾಜದ ಅಧ್ಯಕ್ಷ ಮೇಚಂಡ ಎಂ.ಶಶಿ ಪೊನ್ನಪ್ಪ, ಶ್ರೀ ಕಾವೇರಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಕೇಕಡ ಎಂ.ಬೆಳ್ಳಿಯಪ್ಪ, ಅದೆಂಗಡ ಗೀತಾ ಕುಟ್ಟಪ್ಪ, ಕೊಡವ ಸಮಾಜ ಸಾಂಸ್ಕೃತಿಕ ಮತ್ತು ಕ್ರೀಡಾ ಕ್ಲಬ್‌ನ ಅಧ್ಯಕ್ಷ ಕುಟ್ಟಿಮಾಡ ಡಿ.ಮುತ್ತಪ್ಪ ಉಪಸ್ಥಿತರಿದ್ದರು.

ಕೊಡಗು ಪ್ರೆಸ್ ಕ್ಲಬ್ ಬೆಳ್ಳಿ ಮಹೋತ್ಸವಕ್ಕೆ ಚಾಲನೆ

ಗೋಣಿಕೊಪ್ಪ, ಜ.7– ಕೊಡಗು ಪ್ರೆಸ್ ಕ್ಲಬ್, ಪೊನ್ನಂಪೇಟೆ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘ ಹಾಗೂ ಗೋಣಿಕೊಪ್ಪ ಕಾಲ್ಸ್ ಸಹಯೋಗದಲ್ಲಿ ಕಾಲ್ಸ್ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ಬೆಳ್ಳಿ ಮಹೋತ್ಸವ ಕಾರ್ಯಕ್ರಮಕ್ಕೆ ಸಂಭ್ರಮದ ಚಾಲನೆ ನೀಡಲಾಯಿತು.



ಉದ್ಘಾಟನಾ ಕಾರ್ಯಕ್ರಮದಲ್ಲಿ ಬೆಳ್ಳಿ ಮಹೋತ್ಸವ ಲಾಂಛನ ಅನಾವರಣ, ಚಿತ್ರಕಲೆಯೊಂದಿಗೆ ಪ್ರಾರ್ಥನೆ, ಅತಿಥಿಗಳಿಂದ ಚಿತ್ರಕಲೆ ಚಿತ್ತಾರ ಪ್ರಸ್ತುತ ಪಡಿಸಲಾಯಿತು. ಜಿಲ್ಲೆಯ ವಿವಿಧ ಭಾಗಗಳಿಂದ 317 ಸ್ಪರ್ಧಿಗಳು ಭಾಗವಹಿಸಿ ಕಲೆಯ ಮೂಲಕ ಸಂದೇಶ ಸಾರಿದರು. ಪ್ರಕೃತಿ, ಕೊಡಗಿನ ಇತಿಹಾಸ, ಕಾವೇರಿ ಐತಿಹ್ಯ ಕಲೆಯ ಮೂಲಕ ಹೊರ ಹೊಮ್ಮಿತು. ಪುತ್ತಾಮನೆ ವಿದ್ಯಾ ಜಗದೀಶ್ ಪ್ರಕೃತಿ ಹಾಡಿಗೆ ಕಲಾವಿದ ಬಿ.ಆರ್. ಸತೀಶ್ ಚಿತ್ರ ಬಿಡಿಸಿ ಪ್ರಾರ್ಥನೆ ಕಾರ್ಯಕ್ರಮವನ್ನು ವಿಶೇಷವಾಗಿ ನಡೆಸಿಕೊಟ್ಟರು.

ಅಂತಾರಾಷ್ಟ್ರೀಯ ಅಥ್ಲೆಟ್ ತೀತಮಾಡ ಅರ್ಜುನ್ ದೇವಯ್ಯ ಲಾಂಛನ ಅನಾವರಣಗೊಳಿಸಿ ಮಾತನಾಡಿ, ಭಾವನೆಗಳನ್ನು ಅಲೆಯಾಗಿ ಬಿಡಿಯದಂತೆ ನಿಯಂತ್ರಿಸುವ ಸಾಮರ್ಥ್ಯ ಮುಖ್ಯ. ಜೀವನದಲ್ಲಿ ಶಿಸ್ತು ಹೆಚ್ಚು ಸಾಧಿಸಲು ಸಹಕಾರಿಯಾಗುತ್ತದೆ. ಗುರು ಗೌರವ ಕಾಪಾಡಿಕೊಳ್ಳಬೇಕು ಎಂದರು.

ಕೊಡಗು ಪ್ರೆಸ್ ಕ್ಲಬ್ ಬೆಳ್ಳಿ ಮಹೋತ್ಸವ ಆಚರಣಾ ಸಮಿತಿ ಮಹಾಪೋಷಕ ಜಿ. ರಾಜೇಂದ್ರ ಚಿತ್ರಕಲಾ ಸ್ಪರ್ಧೆ ಉದ್ಘಾಟಿಸಿ ಮಾತನಾಡಿ, ಕಲೆಯಿಂದ ಬದುಕಿನ ಸಾಕಷ್ಟು ಚಿತ್ರಣಗಳು ನೆನಪಿನಲ್ಲಿ ಉಳಿಯುವಂತಾಗಿದೆ. ಸಮಾಜದಲ್ಲಿ ಸಾಕಷ್ಟು ಜಾಗೃತಿ ಮೂಡಿಸಲು ಹಾಗೂ ಇಂಜಿನಿಯರಿಂಗ್ ಶಿಕ್ಷಣದ ಮೂಲಕ ಕಲೆಗೆ ಮಹತ್ವ ದೊರೆಯುತ್ತಿದೆ ಎಂದರು.

ಕೊಡಗು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷೆ ಬಿ.ಆರ್. ಸವಿತಾ ರೈ ಮಾತನಾಡಿ, ಚಿತ್ರಕಲೆ ಬುದ್ಧಿಶಕ್ತಿ ಪೋಷಣೆಗೆ ಸಹಕಾರಿಯಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕೊಡಗು ಪ್ರೆಸ್ ಕ್ಲಬ್ ಬೆಳ್ಳಿ ಮಹೋತ್ಸವ ಆಚರಣಾ ಸಮಿತಿ ಅಧ್ಯಕ್ಷ ಡಾ. ಉಳ್ಳಿಯಡ ಎಂ.ಪೂವಯ್ಯ ಮಾತನಾಡಿ, ಬೆಳ್ಳಿ ಹಬ್ಬದ ಪ್ರಯುಕ್ತ ಸೆಪ್ಟೆಂಬರ್ ತಿಂಗಳವರೆಗೂ ಜನಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಕಲೆ, ಸಾಹಿತ್ಯ, ಕ್ರೀಡೆ, ಸಾಮಾಜಿಕ ಕಾರ್ಯಗಳ ಮೂಲಕ ಆಚರಣೆಯನ್ನು ಸಮಾಜಕ್ಕೆ ಅರ್ಪಣೆ ಮಾಡಿಕೊಳ್ಳಲಾಗುವುದು ಎಂದರು.

ಕಾಲ್ಸ್ ಶಾಲಾ ಶಿಕ್ಷಕಿ ಸಣ್ಣುವಂಡ ಶಕು ಮಂದಣ್ಣ, ಪೊನ್ನಂಪೇಟೆ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಸಣ್ಣುವಂಡ ಕಿಶೋರ್ ನಾಚಪ್ಪ ಇದ್ದರು.

ಸಮಾರೋಪ: ಕೊಡಗು ಪ್ರೆಸ್ ಕ್ಲಬ್ ಬೆಳ್ಳಿ ಮಹೋತ್ಸವ ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಐಮಂಡ ಗೋಪಾಲ್ ಸೋಮಯ್ಯ ಅಧ್ಯಕ್ಷತೆಯಲ್ಲಿ ನಡೆಯಿತು. ಶಾಸಕ ಕೆ.ಜಿ. ಬೋಪಯ್ಯ ಮಾತನಾಡಿ, ಕೊಡಗು ಪ್ರೆಸ್ ಕ್ಲಬ್ ಬೆಳ್ಳಿ ಮಹೋತ್ಸವ ಆಚರಿಸಿಕೊಳ್ಳುತ್ತಿರುವುದು ಹೆಮ್ಮೆ ವಿಚಾರವಾಗಿದ್ದು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪತ್ರಿಕಾರಂಗ ತನ್ನದೇ ಆದ ಸೇವೆ ನೀಡುತ್ತಿದೆ. ಕೊಡಗಿನ ಪತ್ರಕರ್ತರು ಜಿಲ್ಲೆಯಲ್ಲಿ ನಡೆದ ಜಲಪ್ರಳಯ ಸಂದರ್ಭ ಹಾಗೂ ಕೋವಿಡ್ ಕಾಲದಲ್ಲಿ ಸಾಮಾಜಿಕ ಜವಾಬ್ದಾರಿ ನಿಭಾಯಿಸಿದ ರೀತಿ ಮೆಚ್ಚುವಂತ ವಿಚಾರವಾಗಿದೆ. ವೃತ್ತಿಯೊಂದಿಗೆ ಕಲೆ ಪೋಷಣೆಗೂ ಚಿತ್ರಕಲಾ ಕಾರ್ಯಕ್ರಮದ ಮೂಲಕ ತೊಡಗಿಕೊಂಡಿರುವುದು ಶ್ಲಾಘನೀಯ ಎಂದರು.

ಕಾಲ್ಸ್ ವಿದ್ಯಾ ಸಂಸ್ಥೆ ಪ್ರಾಂಶುಪಾಲ ಬಾಚೇಟೀರ ಗೌರಮ್ಮ ನಂಜಪ್ಪ, ವಿರಾಜಪೇಟೆ ಲಿಟ್ಲ್ ಸ್ಕಾಲರ್ ಅಕಾಡೆಮಿ ಅಧ್ಯಕ್ಷೆ ಪೂಜಾ ರವೀಂದ್ರ ಅಂತಾರಾಷ್ಟ್ರೀಯ ರಗ್ಬಿ ಆಟಗಾರ ಮಾದಂಡ ತಿಮ್ಮಯ್ಯ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ನಿರ್ದೇಶಕ ಟಿ.ಎನ್. ಮಂಜುನಾಥ್, ಪೊನ್ನಂಪೇಟೆ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಎನ್.ಎನ್. ದಿನೇಶ್ ಬಹುಮಾನ ವಿತರಣೆ ಮಾಡಿದರು.

ಜವಾಹರ್ ನವೋದಯ ವಿದ್ಯಾಲಯ 6ನೇ ತರಗತಿ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮಡಿಕೇರಿ, ಜ.7– ಜವಾಹರ್ ನವೋದಯ ವಿದ್ಯಾಲಯ 6 ನೇ ತರಗತಿ ಪ್ರವೇಶಕ್ಕೆ ಅರ್ಜಿ ಆಹ್ವಾನ ಮಾಡಿದ್ದು, 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸುವಂತೆ ಜಿಲ್ಲಾಧಿಕಾರಿ ಡಾ.ಬಿ.ಸಿ. ಸತೀಶ ಅವರು ಕೋರಿದ್ದಾರೆ.



ನಗರದ ಜಿ.ಪಂ.ಕೆಡಿಪಿ ಸಭಾಂಗಣದಲ್ಲಿ ಜವಾಹರ್ ನವೋದಯ ವಿದ್ಯಾಲಯ 6 ನೇ ತರಗತಿ ಪ್ರವೇಶ ಸಂಬಂಧಿಸಿದಂತೆ ಸುದ್ದಿಗೋಷ್ಠಿಯಲ್ಲಿ ಅವರು ಮಾಹಿತಿ ನೀಡಿದರು. ನವೋದಯ ವಿದ್ಯಾಲಯವು ಸರ್ಕಾರದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾಗಿದ್ದು, ಗ್ರಾಮೀಣ ಪ್ರದೇಶದ ಬಡ ವಿದ್ಯಾರ್ಥಿಗಳಿಗೆ ವಿಫುಲ ಅವಕಾಶವಿದೆ. ಆದ್ದರಿಂದ ಈ ಪರೀಕ್ಷೆ ಬರೆಯಲು ಮುಂದಾಗಬೇಕು ಎಂದು ಜಿಲ್ಲಾಧಿಕಾರಿ ಅವರು ಹೇಳಿದರು.

ಅರ್ಜಿಯನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕಿದ್ದು, ಅರ್ಜಿ ಸಲ್ಲಿಸಲು ಜ.31 ಕೊನೆಯ ದಿನವಾಗಿದೆ. ಈ ಅವಕಾಶವನ್ನು 5ನೇ ತರಗತಿ ಓದುತ್ತಿರುವ ಎಲ್ಲಾ ವಿದ್ಯಾರ್ಥಿಗಳು ಬಳಸಿಕೊಳ್ಳುವಂತಾಗಬೇಕು. ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಲು ಈಗಿನಿಂದಲೇ ಅಗತ್ಯ ತಯಾರಿ ಮಾಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಅವರು ನುಡಿದರು.

ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಆಧಾರ್ ಕಾರ್ಡ್, ವಿದ್ಯಾರ್ಥಿ ಆಧಾರ್ ಕಾರ್ಡ್‌ಗೆ ಫೋನ್ ನಂಬರ್ ಲಿಂಕ್ ಆಗಿರಬೇಕು. ತಹಶೀಲ್ದಾರ್‌ರಿಂದ ವಾಸಸ್ಥಳ ದೃಢೀಕರಣ ಪತ್ರ ಪಡೆದಿರಬೇಕು. ವಿದ್ಯಾರ್ಥಿಯ ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಹೊಂದಿರಬೇಕು. ಆಧಾರ್ ಕಾರ್ಡ್‌ನಲ್ಲಿ ವಿದ್ಯಾರ್ಥಿಯ ಹೆಸರು, ತಂದೆಯ ಹೆಸರು, ಲಿಂಗ ಮತ್ತು ವಾಸಸ್ಥಳವು ಶಾಲಾ ರಿಜಿಸ್ಟರ್‌ನಲ್ಲಿರುವಂತೆ ನಮೂದಿಸಬೇಕು. ತಾಳೆಯಾಗದಿದ್ದಲ್ಲಿ ಆಧಾರ್ ಕಾರ್ಡ್‌ನ್ನು ಸರಿಪಡಿಸಿಕೊಳ್ಳಬೇಕು. ಆಧಾರ್ ಕಾರ್ಡ್‌ನಲ್ಲಿರುವ ಮಾಹಿತಿಯು ಶಾಲಾ ರಿಜಿಸ್ಟರ್‌ಗೆ ಹೊಂದಾಣಿಕೆಯಾಗದಲ್ಲಿ ಆಧಾರ್ ಕಾರ್ಡ್‌ನ್ನು ಸರಿಪಡಿಸಿಕೊಳ್ಳಬೇಕು. ವಿದ್ಯಾರ್ಥಿಯು ಪರೀಕ್ಷೆಯನ್ನು ಯಾವ ಭಾಷೆಯಲ್ಲಿ ಬರೆಯುತ್ತಾರೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ಪ್ರಾಂಶುಪಾಲರು ತಿಳಿಸಿದರು.

ಹೆಚ್ಚಿನ ಮಾಹಿತಿಗೆ ವೆಬ್‌ಸೈಟ್ https://navodaya.gov.in ಅಥವಾ cbseitms.rcil.gov.in/nvs ಹಾಗೂ ಜವಾಹರ್ ನವೋದಯ ವಿದ್ಯಾಲಯದ ಕಚೇರಿ ಅಧೀಕ್ಷಕರಾದ ಕೆ.ರವಿ(9663883213), ದೈಹಿಕ ಶಿಕ್ಷಣ ಶಿಕ್ಷಕರಾದ ಅರುಣ್‌ಕುಮಾರ್ (9901423273), ಜೆಎಸ್‌ಎ ಜನನಿ ಸಿ.ಆರ್. (7760898148) ಅನ್ನು ಸಂಪರ್ಕಿಸಬಹುದಾಗಿದೆ.

ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕರಾದ ರಂಗಧಾಮಯ್ಯ, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರಾದ ಶೇಖರ್, ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿ ಎನ್.ಮಂಜುನಾಥ್, ಅಲ್ಪಸಂಖ್ಯಾತರ ಕಲ್ಯಾಣ ಅಧಿಕಾರಿ ದಿವಾಕರ ಇದ್ದರು.

ನಾಳೆ ಬಸ್ ನಿಲ್ದಾಣ ಉದ್ಘಾಟನೆ

ಮಡಿಕೇರಿ, ಜ.7–ಸೋಮವಾರ ಪೇಟೆ ಡಾ.ಶ್ರೀ ಶಿವಕುಮಾರ ಸ್ವಾಮೀಜಿ ಜಯಂತ್ಯೋತ್ಸವ ಸಮಿತಿ ವತಿಯಿಂದ ಡಾ.ಶ್ರೀ ಶಿವಕುಮಾರ ಸ್ವಾಮೀಜಿ ಬಸ್ ನಿಲ್ದಾಣ ಉದ್ಘಾಟನೆ ಮತ್ತು ಗುರು ವಂದನಾ ಕಾರ್ಯಕ್ರಮವು ಜ.9 ರಂದು ನಡೆಯಲಿದೆ.

ಅಂದು ಬೆಳಗ್ಗೆ 9 ಗಂಟೆಗೆ ಜೆ.ಸಿ. ವೇದಿಕೆಯಿಂದ ವಿವಿಧ ಕಲಾ ತಂಡಗಳು ಹಾಗೂ ಪೂರ್ಣ ಕುಂಭ ಕಳಸಗಳೊಂದಿಗೆ ಡಾ.ಶ್ರೀ ಶಿವಕುಮಾರ ಸ್ವಾಮೀಜಿ ಭಾವಚಿತ್ರ ಮೆರವಣಿಗೆ ನಡೆಯಲಿದೆ. ನಂತರ ಬೆಳಗ್ಗೆ 10 ಗಂಟೆಗೆ ಆನೆಕೆರೆ ಸಮೀಪ ನಿರ್ಮಿಸಿರುವ ಬಸ್ಸು ನಿಲ್ದಾಣ ಉದ್ಘಾಟನೆ ನಡೆಯಲಿದೆ.

ಕೊಟ್ಟೋಳಿಯಲ್ಲಿ ಅಂಗನವಾಡಿ ಕೇಂದ್ರ ಉದ್ಘಾಟನೆ

ವಿರಾಜಪೇಟೆ, ಜ.7– ಅಂಗನವಾಡಿ ಕೇಂದ್ರಗಳಲ್ಲಿ ಪುಟ್ಟ ಮಕ್ಕಳು ಮತ್ತು ಮಹಿಳೆಯರಿಗೆ ಅನುಕೂಲವಾಗುವಂತ ಸೌಲಭ್ಯಗಳನ್ನು ಕೇಂದ್ರ ಸರಕಾರ ನೀಡುತ್ತಿದೆ ಎಂದು ಶಾಸಕ ಕೆ.ಜಿ.ಬೋಪಯ್ಯ ಹೇಳಿದರು.

ವಿರಾಜಪೇಟೆ ಸಮೀಪದ ಕೆದಮುಳ್ಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೊಟ್ಟೋಳಿ ಪ.ಜಾತಿ ಕಾಲೋನಿಯಲ್ಲಿ ಅಂಗನವಾಡಿ ಕೇಂದ್ರ ಉದ್ಘಾಟನೆ ಮತ್ತು ಗರ್ಭಿಣಿಯರಿಗೆ ಕಿಟ್ ವಿತರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು, ಪುಟ್ಟ ಮಕ್ಕಳಿಗೆ ಹಾಗೂ ಗರ್ಭಿಣಿಯರು ಮತ್ತು ಬಾಣಂತಿಯರು ಉತ್ತಮ ಆರೋಗ್ಯದ ದೃಷ್ಟಿಯಿಂದ ವಿಶ್ವ ಆರೋಗ್ಯ ಸಂಸ್ಥೆಯು (ಸಿರಿಧಾನ್ಯ) ದ್ವಿದಳ ಧಾನ್ಯಗಳನ್ನು ನೀಡುತ್ತಿದ್ದು, ಬಡ ಕುಟುಂಬದ ಪುಟ್ಟ ಮಕ್ಕಳು ಮತ್ತು ಮಹಿಳೆಯರು ಅದನ್ನು ಪಡೆದುಕೊಳ್ಳುವಂತಾಗಬೇಕು ಎಂದರು.



ಇದುವರೆಗೂ ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರದಾರರಿಗೆ ಉಚಿತ 5 ಕೆ.ಜಿ. ಅಕ್ಕಿ ಕೊಡುತ್ತಿದ್ದು ಈಗ ಸರಕಾರ 6 ಕೆ.ಜಿ. ಅಕ್ಕಿ ಕೊಡಲು ತೀರ್ಮಾನಿಸಿರುವುದಾಗಿ ತಿಳಿಸಿದರು.

ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಸಂಘಟನೆಯ ಜಿಲ್ಲಾ ಸಂಚಾಲಕ ಹೆಚ್.ಆರ್.ಶಿವಣ್ಣ ಮಾತನಾಡಿ, ಕೊಟ್ಟೋಳಿ ಪ.ಜಾತಿ ಕಾಲೋನಿಯಲ್ಲಿ ಸಭೆ ಸಮಾರಂಭ ಕಾರ್ಯಗಳನ್ನು ನಡೆಸಲು ಸಭಾಂಗಣ ಇಲ್ಲ ಆದರಿಂದ ಶಾಸಕರು ಅಂಬೇಡ್ಕರ್ ಭವನಕ್ಕೆ ಅನುದಾನ ಮತ್ತು ಸರಕಾರಿ ಜಾಗದಲ್ಲಿ ಅಂಗನವಾಡಿ ಕಟ್ಟಡ ನಿರ್ಮಿಸಿ ಕೊಡುವಂತೆ ಮನವಿ ಮಾಡಿದ್ದು. ಇದಕ್ಕೆ ಪ್ರತಿಕ್ರಿಯಿಸಿದ ಶಾಸಕ ಬೋಪಯ್ಯ, ಜಾಗದ ಸಮಸ್ಯೆ ಇದ್ದು ಈ ಸಂಬಂಧ ಜಿಲ್ಲಾಧಿಕಾರಿಗಳೊಂದಿಗೆ ಮಾತನಾಡಿ ಬಗೆಹರಿಸುವುದಾಗಿ ತಿಳಿಸಿದರು.

ಶಿಶು ಅಭಿವೃದ್ಧಿ ಯೋಜನಾಧಿಕಾರಿ ರಜೇಶ್ ಪ್ರಾಸ್ತಾವಿಕವಾಗಿ ಮಾತನಾಡಿ, ಈಗಾಗಲೇ ಪೊನ್ನಂಪೇಟೆ–ವಿರಾಜಪೇಟೆ ತಾಲೂಕಿನಲ್ಲಿ 335 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು ಸರ್ಕಾರ 6 ನೂತನ ಅಂಗನವಾಡಿ ಕೇಂದ್ರಗಳಿಗೆ ಮಂಜೂರಾತಿ ನೀಡಲಾಗಿದೆ ಇದರಿಂದ ಮಹಿಳಾ ಸಬಲೀಕರಣ ಮಹಿಳೆಯರಿಗೆ ಉದ್ಯೋಗ ಕಲ್ಪಿಸಿದಂತಾಗಿದ್ದು ಅಂಗನವಾಡಿಯಲ್ಲಿ ಉತ್ತಮ ಆರೋಗ್ಯಕ್ಕೆ ಪೌಷ್ಟಿಕ ಆಹಾರ ದೊರಕುತ್ತಿರುವುದನ್ನು ಸದುಪಯೋಗ ಪಡಿಸಿಕೊಳ್ಳುವಂತಾಗಬೇಕು ಎಂದರು. ಅಂಗನವಾಡಿ ಕೇಂದ್ರ ಉದ್ಘಾಟನೆ ಸಂದರ್ಭ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಅಚ್ಚಪಂಡ ಮಹೇಶ್, ಡಿ.ಸಿ.ಸಿ ಬ್ಯಾಂಕ್ ನಿರ್ದೇಶಕ ಪಿ.ರಘು ನಾಣಯ್ಯ, ಕೆದಮುಳ್ಳೂರು ಗ್ರಾಮ ಪಂಚಾಯಿತಿ ಅಧ್ಯಕ್ಷೆ ಶೀಲಾ ಮೇದಪ್ಪ, ಉಪಾಧ್ಯಕ್ಷೆ ಮೀನಾಕ್ಷಿ , ಸದಸ್ಯರುಗಳಾದ ಪರಮೇಶ್ವರ, ರಾಮಯ್ಯ, ಇಸ್ಮಾಯಿಲ್, ಎಂ.ಪ್ರಶಾಂತ್ ಉತ್ತಪ್ಪ ವಿಮಲ, ವನೀತಾ, ಜಫ್ರೀ ಉತ್ತಪ್ಪ, ಪಿಡಿಓ ಪ್ರಮೋದ್, ಕಾರ್ಯದರ್ಶಿ ಸತೀಶ್, ಮಾಜಿ ಸದಸ್ಯ ಚೋಟು ಬಿದ್ದಪ್ಪ ಗ್ರಾಮದ ಹಿರಿಯರಾದ ಕುಂಬೆಯಂಡ ಗಣೇಶ್, ಕುವಲೇರ ಉಮ್ಮರ್, ಸಿ.ರತ್ನ ಅಯ್ಯಣ್ಣ, ದಲಿತ ಸಮಿತಿ ಜಿಲ್ಲಾ ಉಪಾಧ್ಯಕ್ಷ ಗೋಪಾಲ, ತಾಲೂಕು ಸಂಚಾಲಕ ಲವ ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

ಇಂದು ರಾಜ್ಯಮಟ್ಟದ ಕಬಡ್ಡಿ ಚಾಂಪಿಯನ್ ಶಿಪ್‌ಗೆ ಆಯ್ಕೆ ಪ್ರಕ್ರಿಯೆ

ಕುಶಾಲನಗರ, ಜ.7– ಜ.16 ರಿಂದ 18 ರ ವರೆಗೆ ದಾವಣಗೆರೆ ಜಿಲ್ಲೆಯ ಜಗಳೂರಿನಲ್ಲಿ ರಾಜ್ಯ ಪುರುಷ ಹಾಗೂ ಮಹಿಳೆಯರ ಕಬಡ್ಡಿ ಚಾಂಪಿಯನ್ ಶಿಪ್ ನಡೆಯಲಿದ್ದು, ಈ ಕ್ರೀಡಾಕೂಟಕ್ಕೆ ಕೊಡಗು ಜಿಲ್ಲೆಯ ಪುರುಷ ಹಾಗೂ ಮಹಿಳೆಯರ ಕಬಡ್ಡಿ ತಂಡದ ಆಯ್ಕೆಯನ್ನು ಜ.8 ರಂದು ಭಾನುವಾರ ಇಲ್ಲಿನ ಜ್ಞಾನ ಭಾರತಿ ಶಾಲಾ ಮೈದಾನದಲ್ಲಿ ನಡೆಸಲು ಕೊಡಗು ಜಿಲ್ಲಾ ಅಮೆಚೂರ್ ಕಬಡ್ಡಿ ಸಂಸ್ಥೆಯು ನಿರ್ಧರಿಸಿದೆ.ಆದ್ದರಿಂದ ಜಿಲ್ಲೆಯ ಪುರುಷ ಹಾಗೂ ಮಹಿಳಾ ಕ್ರೀಡಾಪಟುಗಳು ಬೆಳಗ್ಗೆ 9.30 ಗಂಟೆಗೆ ಸರಿಯಾಗಿ ಸಮವಸ್ತ್ರದಲ್ಲಿ ಹಾಜರಾಗಿ ಯಶಸ್ವಿಗೊಳಿಸಿಕೊಡಬೇಕು. ಪುರುಷ ಆಟಗಾರರು 85 ಕೆಜಿ ಹಾಗೂ ಮಹಿಳಾ ಆಟಗಾರರು 75 ಕೆಜಿ ಒಳಗಿರಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಸಿ.ಎಸ್.ಮಧು 9483825085,ಅವಿನಾಶ್ 9036000141,ಮಣಿಕಂಠ 9482863707 ಸಂಪರ್ಕಿಸಲು ಕೋರಲಾಗಿದೆ.

ವಸತಿ ಯೋಜನೆ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ

ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಸೂಚನೆ

ಚಾಮರಾಜನಗರ, ಜ.7– ಜಿಲ್ಲೆಯ ನಗರ ಹಾಗೂ ಗ್ರಾಮೀಣ ಭಾಗಗಳಲ್ಲಿ ವಸತಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಂತೆ ವಸತಿ, ಮೂಲಸೌಲಭ್ಯ ಅಭಿವೃದ್ಧಿ ಸಚಿವರೂ ಆದ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಅಧಿಕಾರಿಗಳಿಗೆ ಸೂಚನೆ ನೀಡಿದರು.



ನಗರದ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿಂದು ಜಿಲ್ಲೆಯ ಗ್ರಾಮ ಪಂಚಾಯಿತಿ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ವಸತಿ ಯೋಜನೆಗಳ ಅನುಷ್ಠಾನ ಕುರಿತು ನಡೆದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಮನೆ ಅಗತ್ಯವಿರುವವರನ್ನು ಗುರುತಿಸಬೇಕು. ಜಿಲ್ಲೆಯ ಎಲ್ಲಾ 130 ಗ್ರಾಮ ಪಂಚಾಯಿತಿ ಹಾಗೂ ನಗರ, ಸ್ಥಳೀಯ ಸಂಸ್ಥೆಗಳಲ್ಲಿನ ವ್ಯಾಪ್ತಿಯಲ್ಲಿ ಅಗತ್ಯವಿರುವವರಿಗೆ ಮನೆಗಳನ್ನು ನಿರ್ಮಿಸಿಕೊಡಲು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಅಧ್ಯಕ್ಷರು, ಕಂದಾಯ ಇಲಾಖೆಗಳ ಅಧಿಕಾರಿಗಳು ಅಲ್ಲದೆ ನಗರ, ಸ್ಥಳೀಯ ಸಂಸ್ಥೆಗಳಲ್ಲಿನ ನಗರಸಭೆ ಆಯುಕ್ತರು, ಪುರಸಭೆ ಹಾಗೂ ಪಪಂ ಮುಖ್ಯಾಧಿಕಾರಿಗಳು ಅರ್ಹ ಫಲಾನುಭವಿಗಳ ಪಟ್ಟಿ ಮಾಡಬೇಕು. ಮುಂದಿನ 15 ದಿನದೊಳಗೆ ಅಗತ್ಯವಿರುವ ಮನೆಗಳ ಪಟ್ಟಿ ತಯಾರಿಸಿ ಸಲ್ಲಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿರುವ ಬಡವರಿಗೆ ಮನೆಗಳ ನಿರ್ಮಿಸಿಕೊಳ್ಳಲು ನೀಡಲಾಗುವ ಅನುದಾನದ ಮೊತ್ತವನ್ನು ಹೆಚ್ಚಿಸಲು ಮುಖ್ಯಮಂತ್ರಿಯವರೊಂದಿಗೆ ಚರ್ಚೆ ನಡೆಸಲಾಗಿದ್ದು, ಈ ಬಗ್ಗೆ ಮುಖ್ಯಮಂತ್ರಿಯವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಉಪವಿಭಾಗಾಧಿಕಾರಿ, ಎಲ್ಲಾ ತಾಲೂಕುಗಳ ತಹಶೀಲ್ದಾರ್, ಗಾಪಂ ಅಭಿವೃದ್ಧಿ ಅಧಿಕಾರಿಗಳು ಮುಂದಿನ ದಿನಗಳಲ್ಲಿ ಜಿಲ್ಲೆಯಲ್ಲಿ ಎಲ್ಲರಿಗೂ ಸೂರು ಕಲ್ಪಿಸುವ ನಿಟ್ಟಿನಲ್ಲಿ ಸಂಕಲ್ಪ ಮಾಡಬೇಕು ಎಂದರು.

ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಆರ್.ನರೇಂದ್ರ, ಸಿ.ಎಸ್. ನಿರಂಜನಕುಮಾರ್, ಜಿಲ್ಲಾಧಿಕಾರಿ ಡಿ.ಎಸ್.ರಮೇಶ್, ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಪಿ.ಶಿವಕುಮಾರ್, ಹೆಚ್ಚುವರಿ ಜಿಲ್ಲಾಧಿಕಾರಿ ಎಸ್. ಕಾತ್ಯಾಯಿನಿ ದೇವಿ, ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಅರಣ್ಯ ಸಂರಕ್ಷಣಾಧಿಕಾರಿ ದೀಪಾ ಜೆ.ಕಂಟ್ರಾಕ್ಟರ್, ಇತರರು ಸಭೆಯಲ್ಲಿದ್ದರು.

30ನೇ ವಾರ್ಡ್‌ನಲ್ಲಿ ಬಿಜೆಪಿ ಬೂತ್ ವಿಜಯ ಅಭಿಯಾನಕ್ಕೆ ಚಾಲನೆ

ಚಾಮರಾಜನಗರ, ಜ.7– ನಗರದ ರಾಮಸಮುದ್ರ ಬಡಾವಣೆಯ 30ನೇ ವಾರ್ಡ್‌ನಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಆರ್.ಸುಂದರ್ ಬೂತ್ ವಿಜಯ ಅಭಿಯಾನಕ್ಕೆ ಚಾಲನೆ ನೀಡಿದರು.

ವಾರ್ಡ್‌ನ ಸದಸ್ಯ ಮಹದೇವಯ್ಯ ಅವರ ನಿವಾಸದಲ್ಲಿ ಬಿಜೆಪಿ ಬಾವುಟ ಕಟ್ಟಿ ಹಾರಿಸುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಜ.2 ರಂದು ಆರಂಭವಾದ ವಿಜಯ ಅಭಿಯಾನ ಜ.12 ರವರೆಗೆ ನಡೆಯುತ್ತದೆ. ಈ ಅಭಿಯಾನವನ್ನು ಯಶಸ್ವಿಗೊಳಿಸಬೇಕು ಮನವಿ ಮಾಡಿದರು.

ಪಕ್ಷ ಕಾರ್ಯಕರ್ತರ ಬೂತ್ ಮಟ್ಟದಿಂದ ಪಕ್ಷವನ್ನು ಬಲಿಷ್ಠಗೊಳಿಸಬೇಕೆನ್ನುವುದು ಪಕ್ಷದ ಅಪೇಕ್ಷೆಯಾಗಿದೆ. ಆ ದೃಷ್ಟಿಯಲ್ಲಿ ಪಕ್ಷದ ಕಾರ್ಯಕರ್ತರು, ಮುಖಂಡರು ಶ್ರಮಿಸಬೇಕು. 30ನೇ ವಾರ್ಡನಲ್ಲಿ ಈಗಾಗಲೇ ಬಿಜೆಪಿ ಅಭ್ಯರ್ಥಿ ಗೆದ್ದಿದೆ. ಪಕ್ಕದ ವಾರ್ಡ್‌ನಲ್ಲೂ ಪಕ್ಷದ ಅಭ್ಯರ್ಥಿ ಮುಂದಿನ ಚುನಾವಣೆಯಲ್ಲಿ ಗೆಲುವು ಸಾಧಿಸಬೇಕು ಎಂದರು.

ಕಾಂಗ್ರೆಸ್ ತೊರೆದು ಬಿಜೆಪಿ ಸೇರ್ಪಡೆ: ನಿವೃತ್ತ ಬ್ಯಾಂಕ್ ಅಧಿಕಾರಿ ಎಸ್.ರಾಮಯ್ಯ ಯಜಮಾನ ಸಿದ್ದಪ್ಪಾಜಿ, ಸಿದ್ದರಾಜು, ಮಹದೇವಸ್ವಾಮಿ, ಮಾದಯ್ಯ, ಬಸವಯ್ಯ ಕಾಂಗ್ರೆಸ್ ತೊರೆದು ಬಿಜೆಪಿ ಸೇರ್ಪಡೆಯಾದರು.



ಕಾರ್ಯಕ್ರಮದಲ್ಲಿ ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ.ರಾಮಚಂದ್ರ, ಬಿಜೆಪಿ ಎಸ್ಟಿ ಮೋರ್ಚಾದ ಮಾಜಿ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆಲ್ಲಂಬಳ್ಳಿಸೋಮನಾಯಕ, ಜಿ.ಪಂ ಮಾಜಿ ಸದಸ್ಯ ಎ.ಆರ್. ಬಾಲರಾಜು, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಾಗಶ್ರೀ ಪ್ರತಾಪ್, ವಾರ್ಡ್ ಸದಸ್ಯ ಮಹದೇವಯ್ಯ, ಅಭಿಯಾನದ ಸಂಚಾಲಕರಾದ ಸುರೇಶ್ ನಾಯಕ, ಮಹದೇವನಾಯಕ, ಮಹೇಶ್, ಶಿವು ರಾಮಸಮುದ್ರ, ಮುಖಂಡರಾದ ವೇಣುಗೋಪಾಲ್, ಮೂಡಹಳ್ಳಿಮೂರ್ತಿ, ಅರಕಲವಾಡಿ ಮಹದೇವಯ್ಯ, ಸಿ.ಚನ್ನಬಸವಯ್ಯ ಹಾಜರಿದ್ದರು.

ಗುಂಡ್ಲುಪೇಟೆಯಲ್ಲಿ ಸುತ್ತೂರು ಜಾತ್ರಾ ರಥಕ್ಕೆ ಸ್ವಾಗತ



ಗುಂಡ್ಲುಪೇಟೆ, ಜ.7– ಸುತ್ತೂರು ಜಾತ್ರೆಯ ಅಂಗವಾಗಿ ತಾಲೂಕಿಗೆ ಶನಿವಾರ ಆಗಮಿಸಿದ ರಥವನ್ನು ಪಟ್ಟಣದಲ್ಲಿ ಸ್ವಾಗತಿಸಲಾಯಿತು.

ಪಟ್ಟಣದ ಜೆ.ಎಸ್.ಎಸ್. ಪದವಿ ಕಾಲೇಜಿನಿಂದ ವಿದ್ಯಾರ್ಥಿಗಳೊಂದಿಗೆ ಮೆರವಣಿಗೆ ಹೊರಟು ಮಡಹಳ್ಳಿ ವೃತ್ತದ ಬಳಿ ಬೀಳ್ಕೊಡಲಾಯಿತು.ಸುತ್ತೂರು ಜಾತ್ರೆಯ ಅಂಗವಾಗಿ ತಾಲೂಕಿಗೆ ಆಗಮಿಸಿದ ಈ ರಥವು ತೆರಕಣಾಂಬಿ, ಉಡಿಗಾಲ, ಹರವೆ ಮುಖಾಂತರ ಸಂಚರಿಸಲಿದೆ. ಎಲ್ಲಾ ಗ್ರಾಮಗಳಿಗೂ ಸಂಚರಿಸಿ ಸುತ್ತೂರು ಜಾತ್ರೆಯಲ್ಲಿ ನಡೆಯುವ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಲಿದೆ. ಜಾತ್ರಾ ಮಹೋತ್ಸವವು ಇದೇ ತಿಂಗಳ 18ರಿಂದ 23 ರವರೆಗೆ ಅದ್ದೂರಿಯಾಗಿ ನಡೆಯಲಿದೆ ಎಂದರು.

ಮೆರವಣಿಗೆಯಲ್ಲಿ ವೀರಶೈವ ಮಹಾ ಸಭಾ ತಾಲೂಕು ಘಟಕದ ಅಧ್ಯಕ್ಷ ಹೆಚ್.ಎಸ್. ನಂಜಪ್ಪ, ಪ್ರಧಾನ ಕಾರ್ಯದರ್ಶಿ ಬಿ. ಕುಮಾರಸ್ವಾಮಿ, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಗಂಗಪ್ಪ, ಹಂಗಳ ಮಹದೇವಪ್ಪ, ಮುಖಂಡರಾದ ವೀ.ನಾ. ಚಿದಾನಂದ, ದೇವರಹಳ್ಳಿ ನಾಗೇಂದ್ರ, ಜೆಎಸ್‌ಎಸ್ ಪದವಿ ಕಾಲೇಜಿನ ಪ್ರಾಚಾರ್ಯ ಮರಿ ಸ್ವಾಮಪ್ಪ, ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಹೆಚ್.ಪಿ. ಬಸವರಾಜಪ್ಪ, ಸಹಾಯಕ ಸಬ್ ಇನ್ಸ್‌ಪೆಕ್ಟರ್ ಕೂಸಪ್ಪ, ಉಪನ್ಯಾಸಕರಾದ ಸಂಪತ್ತು, ಶಿವಕುಮಾರಸ್ವಾಮಿ ಸೇರಿದಂತೆ ಜೆಎಸ್‌ಎಸ್ ಸಂಸ್ಥೆಯ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು, ಊರಿನ ಪ್ರಮುಖರು ಭಾಗವಹಿಸಿದ್ದರು.

ಜ.9,10 ರಂದು ಪ್ರಾಥಮಿಕ, ಪ್ರೌಢಶಾಲೆಗಳ ಅಥ್ಲೆಟಿಕ್ ಕ್ರೀಡಾಕೂಟ

ಚಾಮರಾಜನಗರ, ಜ.7– ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ 2022–23ನೇ ಸಾಲಿನ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಜಿಲ್ಲಾ ಮಟ್ಟದ ಅಥ್ಲೆಟಿಕ್ ಕ್ರೀಡಾಕೂಟವನ್ನು ಜ.9 ಮತ್ತು 10 ರಂದು ನಗರದ ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಸಲವಾಡಿ ಕ್ವಾರಿ ದುರಂತ

ಮೃತಪಟ್ಟ ಕಾರ್ಮಿಕರ ಕುಟುಂಬಗಳಿಗೆ ಸೋಮಣ್ಣ ಸಾಂತ್ವನ

ಚಾಮರಾಜನಗರ, ಜ.7– ಚಾಮರಾಜನಗರ ತಾಲೂಕಿನ ಬಿಸಲವಾಡಿ ಗ್ರಾಮದಲ್ಲಿ ಇತ್ತೀಚೆಗೆ ಸಂಭವಿಸಿದ ಬಿಳಿಕಲ್ಲು ಕ್ವಾರಿ ದುರಂತದಲ್ಲಿ ಮೃತಪಟ್ಟ ಕಾಗಲವಾಡಿ ಮೋಳೆಯ ಮೂವರು ಕಾರ್ಮಿಕರ ಕುಟುಂಬಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ವಿ. ಸೋಮಣ್ಣ ಸಾಂತ್ವನ ಹೇಳಿದರು.



ತಾಲೂಕಿನ ಕಾಗಲವಾಡಿ ಮೋಳೆಗೆ ಇಂದು ಭೇಟಿ ನೀಡಿದ ಅವರು ದುರಂತದಲ್ಲಿ ಮೃತಪಟ್ಟ ಕುಮಾರ್, ಶಿವರಾಜು ಹಾಗೂ ಸಿದ್ದರಾಜು ಅವರ ಕುಟುಂಬಸ್ಥರಿಗೆ ಸಾಂತ್ವನ ಹೇಳಿ ವೈಯಕ್ತಿಕವಾಗಿ ತಲಾ 50 ಸಾವಿರ ರೂ. ಪರಿಹಾರ ಧನ ನೀಡಿದರು.

ಮೂವರು ಕಾರ್ಮಿಕರ ಪೈಕಿ ನೋಂದಾಯಿತ ಕಟ್ಟಡ ಕಾರ್ಮಿಕರ ಗುರುತಿನ ಚೀಟಿ ಹೊಂದಿರುವ ಕುಮಾರ್ ಅವರ ಕುಟುಂಬಕ್ಕೆ 5 ಲಕ್ಷ ರೂ. ಪರಿಹಾರ ಸಿಗಲಿದೆ. ನೋಂದಾಯಿತರಲ್ಲದ ಉಳಿದ ಇಬ್ಬರು ಕಾರ್ಮಿಕರಾದ ಶಿವರಾಜು, ಸಿದ್ದರಾಜು ಅವರ ಕುಟುಂಬಕ್ಕೆ ತಲಾ 2 ಲಕ್ಷ ರೂ. ಪರಿಹಾರ ನೀಡಲು ಅವಕಾಶವಿದೆ ಎಂದು ಕಾರ್ಮಿಕ ಅಧಿಕಾರಿ ಮಹದೇವಸ್ವಾಮಿ ಅವರು ಮಾಹಿತಿ ನೀಡಿದರು.

ಈ ವೇಳೆ ಪರಿಹಾರಕ್ಕಾಗಿ ಕಡತ ಕಳುಹಿಸಿ. ನಾನು ಖುದ್ದಾಗಿ ಕಾರ್ಮಿಕ ಇಲಾಖೆಯ ವರಿಷ್ಠ ಅಧಿಕಾರಿಗಳನ್ನು ಸಂಪರ್ಕಿಸಿ ಹೆಚ್ಚಿನ ಪರಿಹಾರ ಕೊಡಿಸುವುದಕ್ಕೆ ಕ್ರಮ ವಹಿಸುತ್ತೇನೆ ಎಂದು ಜಿಲ್ಲಾ ಉಸ್ತುವಾರಿ ಸಚಿವರು ಹೇಳಿದರು.

ದುರಂತದಲ್ಲಿ ಮೃತಪಟ್ಟ ಸಿದ್ದರಾಜು ಅವರ ಪತ್ನಿಗೆ ಇನ್ನೂ 19 ವರ್ಷವಾಗಿದ್ದು, ಅವರ ಮುಂದಿನ ಜೀವನಕ್ಕೆ ನೆರವಾಗಬೇಕಿದೆ. ಅವರ ಭವಿಷ್ಯ ಮುಖ್ಯವಾಗಿದೆ. ಜಿಲ್ಲಾ ಪಂಚಾಯಿತಿಯಿಂದ ಉದ್ಯೋಗ ನೀಡಲು ಕ್ರಮವಹಿಸಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ. ಗಾಯತ್ರಿ ಅವರಿಗೆ ಸಚಿವರು ಸೂಚಿಸಿದರು.

ಜಿಲ್ಲಾಧಿಕಾರಿ ಡಿ.ಎಸ್. ರಮೇಶ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ. ಗಾಯತ್ರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಪಿ. ಶಿವಕುಮಾರ್, ಉಪವಿಭಾಗಾಧಿಕಾರಿ ಗೀತಾ ಹುಡೇದ, ತಹಶೀಲ್ದಾರ್ ಬಸವರಾಜು, ಡಿವೈಎಸ್‌ಪಿ ಪ್ರಿಯದರ್ಶಿನಿ ಸಾಣೆಕೊಪ್ಪ, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರಾದ ಎ.ಆರ್. ಬಾಲರಾಜು, ಇತರರು ಇದ್ದರು.

ಕಾರ್ಮಿಕ ಇಲಾಖೆ ಅಧಿಕಾರಿಗೆ ತರಾಟೆ

ಚಾಮರಾಜನಗರ, ಜ.7– ಕಾರ್ಮಿಕ ಇಲಾಖೆ ಅಧಿಕಾರಿಯೊಬ್ಬರನ್ನು ಸಾರ್ವಜನಿಕರ ಮುಂದೆಯೇ ಸಚಿವ ಸೋಮಣ್ಣ ತರಾಟೆ ತೆಗೆದುಕೊಂಡ ಘಟನೆ ತಾಲೂಕಿನ ಕಾಗಲವಾಡಿ ಮೋಳೆಯ ಗ್ರಾಮದಲ್ಲಿ ನಡೆಯಿತು.

ಇತ್ತೀಚೆಗೆ ಕಲ್ಲು ಕ್ವಾರಿಯಲ್ಲಿ ಬಂಡೆ ಕುಸಿದು ಮೂವರು ಕಾರ್ಮಿಕರು ಮೃತಪಟ್ಟಿದ್ದರು. ಈ ಹಿನ್ನೆಲೆ ಕಾಗಲವಾಡಿ ಮೋಳೆ ಗ್ರಾಮಕ್ಕೆ ಭೇಟಿ ನೀಡಿದ್ದ ಸಚಿವ ಸೋಮಣ್ಣ, ಮೃತರ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ಇದೇ ವೇಳೆ ಮೃತರ ಕುಟುಂಬಕ್ಕೆ ಪರಿಹಾರದ ಹಣ ನೀಡಲು ವಿಳಂಬ ಆಗಿರುವ ವಿಚಾರಕ್ಕೆ ಗರಂ ಆದ ಸಚಿವರು, ಕಾರ್ಮಿಕ ಇಲಾಖೆ ಅಧಿಕಾರಿ ಮಹದೇವಸ್ವಾಮಿಗೆ ಜನರ ಎದುರೇ ತೀವ್ರ ತರಾಟೆ ತೆಗೆದುಕೊಂಡರು.

ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕೆ ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

ಚಾಮರಾಜನಗರ, ಜ.7– ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ 2022–23ನೇ ಸಾಲಿನಲ್ಲಿ ಮೆಟ್ರಿಕ್ ನಂತರದ (ಸ್ನಾತಕೋತ್ತರ ಮತ್ತು ವೃತ್ತಿಪರ ಕೋರ್ಸ್‌ಗಳ ವಿದ್ಯಾರ್ಥಿಗಳು) ವಿದ್ಯಾರ್ಥಿನಿಲಯಗಳಿಗೆ ಹೊಸದಾಗಿ ಪ್ರವೇಶ ಬಯಸುವ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಅವಧಿಯನ್ನು ಜನವರಿ 20ರವರೆಗೆ ವಿಸ್ತರಿಸಲಾಗಿದೆ.

ವೆಬ್‌ಸೈಟ್ www.backwardclasses.kar.nic.in ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ವಿವರ, ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳು ಹಾಗೂ ವಿದ್ಯಾರ್ಥಿವೇತನಕ್ಕೆ ಸಂಬಂಧಿಸಿದ ಸರ್ಕಾರಿ ಆದೇಶಗಳ ಬಗ್ಗೆ ಮಾಹಿತಿಗಾಗಿ ವೆಬ್‌ಸೈಟ್ www.backwardclasses.kar.nic.in ಅನ್ನು ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗಾಗಿ ನಗರದ ಜಿಲ್ಲಾಡಳಿತ ಭವನದಲ್ಲಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಕಚೇರಿ ದೂ.ಸಂ.08226–222180 ಸಂಪರ್ಕಿಸುವಂತೆ ಇಲಾಖೆಯ ಜಿಲ್ಲಾ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯಳಂದೂರಲ್ಲಿ ಸಿದ್ದೇಶ್ವರ ಶ್ರೀಗಳಿಗೆ ಶ್ರದ್ಧಾಂಜಲಿ



ಯಳಂದೂರು, ಜ.7– ಸಿದ್ದೇಶ್ವರ ಸ್ವಾಮಿಗಳ ಗೌರವಾರ್ಥ ಸಂತಾಪ ಸೂಚಕ ಸಭೆಯನ್ನು ನಡೆಸಲಾಯಿತು. ಆಂಗ್ಲ ಭಾಷಾ ಉಪನ್ಯಾಸಕ ಶಂಕರ್ ಎಮ್ಮಾರ್ ಅವರು ಪೂಜ್ಯರ ಬದುಕು ಮತ್ತು ಪ್ರವಚನಗಳನ್ನು ಕುರಿತು ಮಾತನಾಡುತ್ತಾ ಪೂಜ್ಯರ ಸರಳ ಬದುಕು, ಅಗಾಧವಾದ ಪಾಂಡಿತ್ಯ, ವಾಕ್ಚಾತುರ್ಯದಿಂದ ಅವರು ಜನಸಾಮಾನ್ಯರ ಮನದಲ್ಲಿ ಚಿರಸ್ಥಾಯಿಯಾಗಿ ನೆಲೆಗೊಂಡಿದ್ದಾರೆ. ಅವರ ಜೀವನ ಮೌಲ್ಯ ಸಂಸ್ಕಾರ ಆದರ್ಶ ಮತ್ತು ಸದ್ಗುಣಗಳನ್ನು ನಾವು ಜೀವನದಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನದಲ್ಲಿ ನಿರಂತರವಾಗಿ ಸಾಗಬೇಕು ಎಂದರು.

ಪೂಜ್ಯರಾದ ಸಿದ್ದೇಶ್ವರ ಸ್ವಾಮಿಗಳವರು ಸುತ್ತೂರು ಶ್ರೀ ಮಠದೊಂದಿಗೆ ಅತ್ಯಂತ ಅವಿನಾಭಾವ ಸಂಬಂಧ ಹೊಂದಿದ್ದರು ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠವು ಆಯೋಜಿಸುತ್ತಿದ್ದ ವಿವಿಧ ವ್ಯಕ್ತಿತ್ವ ಶಿಬಿರಗಳ ಹಿಂದೆ ಅವರ ಕ್ರಿಯಾಶೀಲ ಮಾರ್ಗದರ್ಶನ ಇರುತ್ತಿತ್ತು ಎಂದು ತಿಳಿಸಿಕೊಟ್ಟರು. ಪ್ರಾಂಶುಪಾಲ ಚಂದ್ರಶೇಖರ್ ಎಚ್.ಎಸ್., ಅಕ್ಷರ ದಾಸೋಹದ ವ್ಯವಸ್ಥಾಪಕ ಚಂದ್ರಶೇಖರ್ ಹಾಗೂ ಶಾಲಾ ಕಾಲೇಜಿನ ಎಲ್ಲಾ ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿನಿಯರು ಹಾಜರಿದ್ದರು.

ಒಂದನೇ ಪುಟದಿಂದ

ಭಾರತದ ಅಸ್ಮಿತೆ

ವೇಳೆ ಸಲಹೆ ನೀಡಿದರು. ಎಸ್‌ಸಿ-ಎಸ್‌ಟಿ ಸಮುದಾಯಗಳಿಗೆ ಸಂವಿಧಾನದ ಆಶಯದಂತೆ ಮೀಸಲಾತಿ ನೀಡಲಾಗಿದೆ. ಬಿಜೆಪಿ ಸರ್ಕಾರವು ಈ ವರ್ಗಗಳಿಗೆ ಮತ್ತಷ್ಟು ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಕಾನೂನು ಬಲಪಡಿಸಿ ಅಗತ್ಯ ಕ್ರಮಗಳನ್ನು ಮುಂದಿನ ದಿನಗಳಲ್ಲಿ ಕೈಗೊಂಡು ಅವರ ಸಮಗ್ರ ಅಭಿವೃದ್ಧಿಗೆ ಪೂರಕ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಪ್ರಕ್ರಿಯೆ ಆರಂಭಿಸಿದೆ ಎಂದು ಅವರು ಇದೇ ವೇಳೆ ನುಡಿದರು.

ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಶ್ರೇಷ್ಠ ಸಾಮಾಜಿಕ ವಿಜ್ಞಾನಿ. ನಾನೂ ಸಹ ಅಂಬೇಡ್ಕರ್ ವಾದಿ ಎಂದು ಗರ್ವದಿಂದ ಹೇಳುತ್ತೇನೆ. ಅವರೊಬ್ಬ ಚಿಂತಕ, ಆರ್ಥಿಕ ತಜ್ಞರಷ್ಟೇ ಅಲ್ಲದೇ ಅವರು ನಂಬರ್ ಒನ್ ದೇಶ ಭಕ್ತರಾಗಿದ್ದರು. ಅವರು ಸಂಸತ್ತಿಗೆ ಬರಲು ಅವಕಾಶ ನೀಡದ ಕಾಂಗ್ರೆಸ್ ಪಕ್ಷವು, ನಂತರದ ವರ್ಷಗಳಲ್ಲಿ ಅಂಬೇಡ್ಕರ್ ಅವರನ್ನು ಮುಂದಿಟ್ಟುಕೊಂಡು ರಾಜಕೀಯ ಲಾಭ ಪಡೆಯಲು ಹವಣಿಸುತ್ತಿದೆ. ಅಂಬೇಡ್ಕರ್ ಇಹಲೋಕ ತ್ಯಜಿಸಿದಾಗ ದೆಹಲಿಯಲ್ಲಿ ಅವರ ಅಂತ್ಯಕ್ರಿಯೆಗೂ ಕಾಂಗ್ರೆಸ್ ಜಾಗ ಕೊಡಲಿಲ್ಲ. ಆದರೆ, ದಲಿತ ಸಮುದಾಯದ ಮತ ಪಡೆಯಲು ಕಾಂಗ್ರೆಸ್ ಡಾ. ಬಿ.ಆರ್. ಅಂಬೇಡ್ಕರ್ ಹೆಸರನ್ನು ಬಳಕೆ ಮಾಡಿಕೊಳ್ಳುತ್ತಿದೆ. ಆದರೆ ಬಿಜೆಪಿ ಸರ್ಕಾರವು ರಾಜ್ಯ ಮತ್ತು ದೇಶದಾದ್ಯಂತ ದಲಿತ ಸಮುದಾಯದ ಸರ್ವಾಂಗೀಣ ಅಭಿವೃದ್ಧಿಗೆ ಹತ್ತು ಹಲವು ಯೋಜನೆಗಳನ್ನು ನೀಡಿ, ಅವರ ಬದುಕು ಹಸನಾಗಿಸಲು ಪ್ರಯತ್ನಿಸುತ್ತಿದೆ ಎಂದ ಬಸವರಾಜ ಬೊಮ್ಮಾಯಿ, ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ ಇದಕ್ಕೆ ಪೂರಕವಾಗಿ ನೀವು ನಿರ್ಣಯ ಮಾಡಿ ನನ್ನ ಮನೆ, ಮನಸ್ಸಿನ ಬಾಗಿಲು ಎಂದೂ ತೆರೆದಿದೆ ಎಂದು ಭಾವನಾತ್ಮಕವಾಗಿ ನುಡಿದರು.

ತನಿಖೆ ನಡೆಸಿ, ಕಠಿಣ ಕ್ರಮಕ್ಕೆ ಸೂಚಿಸಿದ್ದೇನೆ

ಸ್ಯಾಂಟ್ರೋ ರವಿಯ ಎಲ್ಲಾ ಪ್ರಕರಣ ತನಿಖೆ: ಸ್ಯಾಂಟ್ರೋ ರವಿ ಜೊತೆ ಎಲ್ಲಾ ಪಕ್ಷಗಳ ನಾಯಕರ ಸಂಪರ್ಕವಿದೆ. ಬೇರೆ ಬೇರೆ ಕ್ಷೇತ್ರದಲ್ಲಿ ನಡೆಸಿರುವ ಅಕ್ರಮ, ವಂಚನೆ ಸೇರಿದಂತೆ ಇನ್ನಿತರ ವಿಚಾರಗಳ ಬಗ್ಗೆ ಆತನ ವಿರುದ್ಧ ಕೇಸ್ ಇದೆ. ಇದರ ಬಗ್ಗೆಯೂ ತನಿಖೆ ನಡೆಯುತ್ತದೆ. ಬಳಿಕ ಎಲ್ಲಾ ಸತ್ಯಾಸತ್ಯತೆ ಹೊರಬರಲಿದೆ. ಕಳೆದ 20 ವರ್ಷಗಳಿಂದ ಎಲ್ಲಾ ಪಕ್ಷಗಳ ನಾಯಕರ ಜೊತೆ ರವಿ ನಂಟು ಹೊಂದಿದ್ದಾನೆ. ಬಿಜೆಪಿ ನಾಯಕರ ಜೊತೆ ಫೋಟೋ ತೆಗೆಸಿಕೊಂಡ ಮಾತ್ರಕ್ಕೆ ನಮ್ಮ ಪಕ್ಷದ ನಾಯಕರ ಮೇಲೆ ಕಳಂಕ ಹೊರಿಸುವುದು ಸರಿಯಲ್ಲ. ವಿರೋಧ ಪಕ್ಷದ ನಾಯಕರು ಸ್ಯಾಂಟ್ರೋ ರವಿ ಪ್ರಕರಣದಲ್ಲಿ ಬಿಜೆಪಿ ವಿರುದ್ಧ ಮಾಡುತ್ತಿರುವ ಆರೋಪವನ್ನು ಪರಿಗಣಿಸಿ ತನಿಖೆ ಮಾಡಲಾಗುತ್ತದೆ. ಮಹಿಳೆ ದೂರು ಆಧರಿಸಿ ಸ್ಯಾಂಟ್ರೋ ರವಿ ವಿರುದ್ಧ ನಿಖರವಾಗಿ ತನಿಖೆ ಮಾಡುವಂತೆ ಮೈಸೂರು ಪೊಲೀಸರಿಗೆ ಸೂಚಿಸಿದ್ದೇನೆ. ಸ್ಯಾಂಟ್ರೋ ರವಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದ್ದೇನೆ ಎಂದರು.

ಸ್ಯಾಂಟ್ರೋ ರವಿ ಜೊತೆ ಚಾಟ್ ಮಾಡಿಲ್ಲ: ನಾನು ಸ್ಯಾಂಟ್ರೋ ರವಿಯೊಂದಿಗೆ ವಾಟ್ಸಪ್ ಚಾಟ್ ಮಾಡಿಲ್ಲ. ನನ್ನ ಮಗನೊಂದಿಗೆ ಮಾತನಾಡಿದ್ದಾನೆ ಎನ್ನಲಾದ ಆಡಿಯೋ ಬಿಡುಗಡೆ ಮಾಡಿರುವುದನ್ನು ಪರಿಶೀಲಿಸಲಾಗುತ್ತದೆ. ಕೆಲವರು ನನ್ನ ಜೊತೆಯೂ ಮಾತನಾಡುತ್ತಾರೆ. ಎಲ್ಲರ ಪೂರ್ವಾಪರ ತಿಳಿದುಕೊಂಡು ಮಾತನಾಡಲು ಸಾಧ್ಯವಾಗುವುದಿಲ್ಲ. ಮಾತನಾಡಿದ ಮಾತ್ರಕ್ಕೆ ನಮ್ಮನ್ನೂ ಅಪರಾಧಿ ಎನ್ನುವುದು ಸರಿಯಲ್ಲ. ತನಿಖೆ ನಡೆಯುತ್ತಿರುವುದರಿಂದ ಎಲ್ಲವೂ ಬಯಲಾಗಲಿದೆ. ತಂತ್ರಜ್ಞಾನ ಬಳಸಿಕೊಂಡು ನಾನು ಮಾತ್ರವಲ್ಲದೆ, ಈ ಹಿಂದಿನ ಸಿಎಂಗಳ ಜೊತೆ ಚಾಟ್ ಮಾಡಿರುವುದಾಗಿ ಸೃಷ್ಟಿಸಿಕೊಂಡಿದ್ದಾನೆ ಎಂದು ಆರೋಪಿಸಿದರು.

ದೆಹಲಿ ಗಣರಾಜ್ಯೋತ್ಸವ ಪರೇಡ್‌ನಲ್ಲಿ ರಾಜ್ಯ ಸ್ತಬ್ಧಚಿತ್ರ ಗಣರಾಜ್ಯೋತ್ಸವದ ದಿನದಂದು ದೆಹಲಿಯಲ್ಲಿ ನಡೆಯುವ ಪರೇಡ್‌ನಲ್ಲಿ ಕರ್ನಾಟಕದ ಸ್ತಬ್ಧ ಚಿತ್ರಕ್ಕೆ ಅವಕಾಶ ನೀಡದೇ ಇರುವುದಕ್ಕೆ ಪ್ರತಿಕ್ರಿಯಿಸಿದ ಸಿಎಂ ಬೊಮ್ಮಾಯಿ, ರಾಜ್ಯದ ಸ್ತಬ್ಧಚಿತ್ರಕ್ಕೆ ಅನುಮತಿ ಪಡೆಯುತ್ತೇವೆ. ಈ ಬಗ್ಗೆ ಕೇಂದ್ರ ಸರ್ಕಾರದ ಜೊತೆ ಚರ್ಚೆ ಮಾಡುತ್ತೇವೆ. ಗಣರಾಜ್ಯೋತ್ಸವದಲ್ಲಿ ನಮ್ಮ ಸ್ತಬ್ಧಚಿತ್ರ ಪ್ರದರ್ಶನಗೊಳ್ಳಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಆಗ ವಿಧಾನ ಸೌಧ ಕಾಂಗ್ರೆಸ್ ಬ್ಯಾಂಕ್: ವಿಧಾನಸೌಧದ ಬಳಿ 10.5 ಲಕ್ಷ ರೂ ಸಿಕ್ಕ ಪ್ರಕರಣವನ್ನು ಮುಂದಿಟ್ಟುಕೊಂಡು ಕಾಂಗ್ರೆಸ್ ನಾಯಕರು ಬಿಜೆಪಿ ನಾಯಕರು ಹಾಗೂ ನಮ್ಮ ಸರ್ಕಾರದ ವಿರುದ್ಧ ಮಾಡುತ್ತಿರುವ ಆರೋಪ ನಿರಾಧಾರ. ಈಗಾಗಲೇ ಹಣ ತಂದಿದ್ದ ವ್ಯಕ್ತಿಯನ್ನು ಪೊಲೀಸರು ಬಂಧಿಸಿ ಪ್ರಕರಣ ದಾಖಲಿಸಿದ್ದಾರೆ. ತನಿಖೆ ನಡೆಯುತ್ತಿದೆ. ಆದರೆ, ಈ ಹಿಂದೆ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದ ವೇಳೆ ಚಾಮರಾಜನಗರದ ಶಾಸಕ ಪುಟ್ಟರಂಗಶೆಟ್ಟಿ ಸಚಿವರಾಗಿದ್ದಾಗ ಅವರ ಕಚೇರಿಯಲ್ಲೇ 25 ಲಕ್ಷ ರೂ. ಹಣ ಸಿಕ್ಕಿತ್ತು. ಆಗ ಪುಟ್ಟರಂಗಶೆಟ್ಟಿ ಅವರಿಂದ ಹೇಳಿಕೆ ಪಡೆಯಲಿಲ್ಲ. ಯಾರ ವಿರುದ್ಧವೂ ಕ್ರಮ ಕೈಗೊಳ್ಳಲಿಲ್ಲ. ಎಸಿಬಿಗೆ ಪ್ರಕರಣ ಕೊಟ್ಟು ಕೈ ತೊಳೆದುಕೊಂಡರು. ಆಗ ವಿಧಾನಸೌಧ ಕಾಂಗ್ರೆಸ್‌ನ ಬ್ಯಾಂಕ್ ಆಗಿತ್ತಾ ಎಂದು ಪ್ರಶ್ನಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಮೇಯರ್ ಶಿವಕುಮಾರ್, ಶಾಸಕರಾದ ಎಸ್.ಎ.ರಾಮದಾಸ್, ಜಿ.ಟಿ.ದೇವೇಗೌಡ, ಎಲ್.ನಾಗೇಂದ್ರ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ಮುಡಾ ಅಧ್ಯಕ್ಷ ಯಶಸ್ವಿನಿ ಸೋಮಶೇಖರ್ ಹಾಗೂ ಇನ್ನಿತರರು ಇದ್ದರು.

ನಾನು ಸಿ.ಟಿ.ರವಿ, ಸ್ಯಾಂಟ್ರೋ ರವಿ ಗೊತ್ತಿಲ್ಲ!

ಹಾಗಂತ ಕುಮಾರಸ್ವಾಮಿ ಅವರನ್ನು ಐಎಂಎ ಪ್ರಕರಣದ ಎ-2 ಆರೋಪಿ ಎನ್ನಲಾಗುತ್ತದೆಯೇ ಎಂದರು. ಕೆಲ ಸಚಿವರು, ಶಾಸಕರು ತಮಗೆ ಸಂಬಂಧಿಸಿದ ಆಕ್ಷೇಪಾರ್ಹ ಸುದ್ದಿಗಳನ್ನು ಮಾಧ್ಯಮಗಳಲ್ಲಿ ಪ್ರಕಟಿಸದಂತೆ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುವ ವಿಚಾರದ ಬಗ್ಗೆ ಪ್ರತಿಕ್ರಿಯೆ ನೀಡಿದ ಸಿ.ಟಿ.ರವಿ, ವಿಪಕ್ಷ ನಾಯಕರೂ ಸಹ ಇದರಿಂದ ಹೊರತಾಗಿಲ್ಲ. ಯಾವ ವಿಚಾರಕ್ಕೆ ತಡೆಯಾಜ್ಞೆ ತಂದಿದ್ದಾರೋ ಗೊತ್ತಿಲ್ಲ. ಆ ವಿಚಾರದಲ್ಲಿ ನ್ಯಾಯಾಲಯದ ಆದೇಶಕ್ಕೆ ತಲೆ ಬಾಗಲೇಬೇಕು ಎಂದರು.

ಮೀಸಲಾತಿ ಹೆಚ್ಚಿಸಿದ್ದೆ ನಮ್ಮ ಸರ್ಕಾರ

ಅತೀ ಶೀಘ್ರ ಅನುಷ್ಠಾನಗೊಳಿಸುತ್ತೇವೆ ಎಂದು ಅವರು ನುಡಿದರು. ಕೇಂದ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ದಲಿತ ಸಮುದಾಯಗಳಿಗೆ ಪೂರಕವಾಗಿ ಭರಪೂರ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಅದರಂತೆ ರಾಜ್ಯದಲ್ಲೂ ಬಿಜೆಪಿ ಸರ್ಕಾರ ಎಸ್ಸಿ, ಎಸ್ಟಿ ಜನರ ಅಭಿವೃದ್ಧಿಗಾಗಿ ಯೋಜನೆಗಳನ್ನು ಜಾರಿಗೊಳಿಸಿದೆ ಎಂದ ಬಸವರಾಜ ಬೊಮ್ಮಾಯಿ ಅವರು, ಮೈಸೂರಿನಲ್ಲಿ ನಡೆಯುತ್ತಿರುವ ಬಿಜೆಪಿ ಎಸ್ಸಿ ಮೋರ್ಚಾ ಕಾರ್ಯಕಾರಿಣಿ ಸಭೆಯಲ್ಲಿ ಕೈಗೊಂಡ ನಿರ್ಣಯಗಳಿಗೆ ಪೂರಕವಾಗಿ ಕೆಲಸ ಮಾಡಲು ಸರ್ಕಾರ ಬದ್ಧವಾಗಿದೆ ಎಂದರು.

ರವಿಯಿಂದ ನಿರೀಕ್ಷಣಾ ಜಾಮೀನಿಗೆ ಅರ್ಜಿ

ಜಾತಿ ನಿಂದನೆ ಮಾಡಿ ದೌರ್ಜನ್ಯವೆಸಗಿದ್ದಾನೆ ಎಂದು ಆಕೆ ತನ್ನ ದೂರಿನಲ್ಲಿ ತಿಳಿಸಿದ್ದರು. ಸ್ಯಾಂಟ್ರೊ ರವಿ ದಂಧೆ ವಿಚಾರಕ್ಕೆ ರಾಜಕೀಯ ರಂಗು ಕೂಡ ದೊರೆತಿದ್ದು, ವಿಪಕ್ಷಗಳಾದ ಜೆಡಿಎಸ್ ಮತ್ತು ಕಾಂಗ್ರೆಸ್ ಆಡಳಿತಾರೂಢ ಬಿಜೆಪಿ ಆರೋಪಗಳ ಸುರಿಮಳೆಗೈದಿದೆ. ಈ ಮಧ್ಯೆ ಮುಖ್ಯಮಂತ್ರಿಗಳು ಹಾಗೂ ಗೃಹ ಸಚಿವರು ಸ್ಯಾಂಟ್ರೋ ರವಿಯನ್ನು ಬಂಧಿಸುವಂತೆ ಮೈಸೂರು ನಗರ ಪೊಲೀಸ್ ಆಯುಕ್ತರಿಗೆ ಸೂಚಿಸಿರುವುದಾಗಿ ತಿಳಿಸಿದ್ದಾರೆ. ಪ್ರಕರಣ ದಾಖಲಾಗಿ 5 ದಿನ ಕಳೆಯುತ್ತಿದ್ದರೂ ಪೊಲೀಸರು ಸ್ಯಾಂಟ್ರೋ ರವಿಯನ್ನು ಬಂಧಿಸದೇ ಇರುವುದು ತೀವ್ರ ಚರ್ಚೆಗೆ ಗ್ರಾಸವಾಗಿದೆ.

ವಿವಾಹಿತ ವ್ಯಕ್ತಿ, ಮಹಿಳೆ ಆತ್ಮಹತ್ಯೆ

ತನ್ನ ಮನೆಗೆ ಬಂದ ಮಣಿಕಂಠ, ಕೆಲಸಕ್ಕೆಂದು ಈಕೆ ಬಂದಿದ್ದು, ನಮ್ಮ ಮನೆಯಲ್ಲೇ ಇರುತ್ತಾರೆ ಎಂದು ಪತ್ನಿಗೆ ತಿಳಿಸಿದ್ದಾನೆ. ಜನವರಿ 6ರಂದು ಬೆಳಗ್ಗೆ 9 ಗಂಟೆಗೆ ಜಾಕಿ ಗಾರ್ಮೆಂಟ್ಸ್‌ನಲ್ಲಿ ಕೆಲಸಕ್ಕೆ ಸಂದರ್ಶನಕ್ಕಾಗಿ ವಸಂತಳನ್ನು ಕರೆದೊಯ್ಯುತ್ತಿರುವುದಾಗಿ ಪತ್ನಿಗೆ ತಿಳಿಸಿ, ಬೈಕ್‌ನಲ್ಲಿ ಆಕೆಯೊಂದಿಗೆ ತೆರಳಿದ್ದಾನೆ. ಅಂದು ಮಧ್ಯಾಹ್ನ 3 ಗಂಟೆ ಸುಮಾರಿನಲ್ಲಿ ಪತ್ನಿಗೆ ಫೋನ್ ಮಾಡಿದ ಆತ, ಬೈಕ್ ಅನ್ನು ಪೊಲೀಸರು ಹಿಡಿದಿದ್ದಾರೆ, ಹಣ ಗೂಗಲ್ ಪೇ ಮೂಲಕ ವರ್ಗಾಯಿಸುವಂತೆ ಕೇಳಿದ್ದು, ಅದಕ್ಕೆ ಜ್ಯೋತಿ ನಿರಾಕರಿಸಿದ್ದಾಳೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಸಂಜೆ 4 ಗಂಟೆ ಸುಮಾರಿನಲ್ಲಿ ಮಣಿಕಂಠ ಮತ್ತು ವಸಂತ ಬಲಮುರಿಯಲ್ಲಿರುವ ಫೋಟೋವನ್ನು ಜ್ಯೋತಿ ಮೊಬೈಲ್‌ಗೆ ವಾಟ್ಸಾಪ್ ಮೂಲಕ ರವಾನಿಸಲಾಗಿದೆ. ಅಲ್ಲದೇ, ಮಣಿಕಂಠನ ಮೊಬೈಲ್ ನಿಂದಲೇ ಕರೆ ಮಾಡಿದ ಅಪರಿಚಿತ ವ್ಯಕ್ತಿ ಹಣ ನೀಡುವಂತೆಯೂ ಇಲ್ಲದಿದ್ದರೆ ಈ ಫೋಟೋವನ್ನು ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡುವುದಾಗಿಯೂ ಜ್ಯೋತಿಯನ್ನು ಬೆದರಿಸಿದ್ದಾನೆ. ತನ್ನ ಪತಿಗೆ ಫೋನ್ ಕೊಡುವಂತೆ ಕೇಳಿದಾಗ ಕರೆ ಕಟ್ ಆಗಿದೆ. 4.30ರ ವೇಳೆಗೆ ಜ್ಯೋತಿ ಮನೆಗೆ ಬಂದು ನೋಡಿದಾಗ ಆಕೆಯ ಚಿನ್ನದ ಓಲೆ ಮತ್ತು ರಿಂಗ್ ನಾಪತ್ತೆಯಾಗಿರುವುದು ಕಂಡುಬಂದಿದೆ.

ಆಕೆ ಮತ್ತೆ ಪತಿಗೆ ಕರೆ ಮಾಡಿದಾಗ ಅರ್ಧ ಗಂಟೆ ನಂತರ ಮನೆಗೆ ಬರುವುದಾಗಿ ತಿಳಿಸಿದ ಆತ, ಮತ್ತೊಮ್ಮೆ ಕರೆ ಮಾಡಿದಾಗ ನಿನಗೆ ಮೋಸ ಮಾಡಿ ತಪ್ಪು ಮಾಡಿಬಿಟ್ಟೆ ಮನೆಗೆ ಬರುವುದಿಲ್ಲ ಎಂದು ಹೇಳಿದ್ದಾನೆ. ನಂತರ ಆತನ ಮೊಬೈಲ್‌ಗೆ ಜ್ಯೋತಿ ಸತತವಾಗಿ ಕರೆ ಮಾಡುತ್ತಿದ್ದರೂ ಕರೆಯನ್ನು ಸ್ವೀಕರಿಸುತ್ತಿರಲಿಲ್ಲ. ಸರಿರಾತ್ರಿ 12 ಗಂಟೆ ಸುಮಾರಿನಲ್ಲಿ ಕರೆ ಮಾಡಿದಾಗ, ಪೊಲೀಸರು ಕರೆಯನ್ನು ರಿಸೀವ್ ಮಾಡಿ ತಿ.ನರಸೀಪುರ ಕಪಿಲಾ ಸೇತುವೆ ಮೇಲೆ ಬೈಕ್ ಮತ್ತು 2 ಮೊಬೈಲ್‌ಗಳು ಇರುವುದಾಗಿ ತಿಳಿಸಿದ್ದಾರೆ. ನಂತರ ಆಕೆ ಸ್ಥಳಕ್ಕೆ ಬಂದಿದ್ದಾರೆ. ಈಜುಗಾರರ ಸಹಾಯದೊಂದಿಗೆ ಪೊಲೀಸರು ನದಿಯಲ್ಲಿ ಹುಡುಕಾಟ ನಡೆಸಿದಾಗ ಮಣಿಕಂಠ ಮತ್ತು ವಸಂತ ಅವರ ಶವಗಳು ದೊರೆತಿವೆ. ತನ್ನ ಗಂಡ ಮೊಬೈಲ್‌ನಲ್ಲಿ ಮಾತನಾಡುತ್ತಾ, ಮೋಸ ಮಾಡಿ ತಪ್ಪು ಮಾಡಿಬಿಟ್ಟೆ ಎಂದು ಹೇಳಿರುವ ಬಗ್ಗೆ ನನಗೆ ಯಾರ ಮೇಲೂ ಅನುಮಾನ ಇಲ್ಲ. ಆದರೆ ಪತಿ ಮತ್ತು ವಸಂತ ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ ಸಂಶಯವಿದೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ತಿ.ನರಸೀಪುರ ಠಾಣೆ ಸಬ್ ಇನ್ಸ್‌ಪೆಕ್ಟರ್ ತಿರುಮಲ್ಲೇಶ್, ಅನುಮಾನಾಸ್ಪದ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಸಾಂಬಶಿವ ಪ್ರಹಸನ ನಾಟಕದಲ್ಲಿ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅವರಿಗೆ ಅವಹೇಳನ ಆರೋಪ

ಜ.10ರಂದು ರಂಗಾಯಣಕ್ಕೆ ಮುತ್ತಿಗೆ: ಸ್ವಾಭಿಮಾನಿ ಹೋರಾಟ ಸಮಿತಿ ನಿರ್ಧಾರ



ಮೈಸೂರು,ಜ.7(ಎಂಟಿವೈ)- ಮೈಸೂರಿನ ರಂಗಾಯಣದಲ್ಲಿ ನಡೆದ 'ಸಾಂಬಶಿವ ಪ್ರಹಸನ' ನಾಟಕದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರನ್ನು ಅವಹೇಳನ ಮಾಡಿರುವುದನ್ನು ಖಂಡಿಸಿ, ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಜ.10ರಂದು ರಂಗಾಯಣಕ್ಕೆ ಮುತ್ತಿಗೆ ಹಾಕಲು ಸ್ವಾಭಿಮಾನಿ ಹೋರಾಟ ಸಮಿತಿ ನಿರ್ಧರಿಸಿದೆ.

ಮೈಸೂರಿನ ಪುರಭವನದಲ್ಲಿ ಶನಿವಾರ ರೈತ, ದಲಿತ, ಹಿಂದುಳಿದ, ಅಲ್ಪಸಂಖ್ಯಾತ ಮತ್ತು ವಿವಿಧ ಪ್ರಗತಿಪರ ಸಂಘಟನೆಗಳ ಮುಖಂಡರನ್ನು ಒಳಗೊಂಡ 'ಸ್ವಾಭಿಮಾನಿ ಹೋರಾಟ ಸಮಿತಿ' ನೇತೃತ್ವದಲ್ಲಿ ನಡೆದ ಸಮಾನಮನಸ್ಕರ ಪೂರ್ವಭಾವಿ ಸಭೆಯಲ್ಲಿ ಪಕ್ಷಾತೀತ ಹಾಗೂ ಜಾತ್ಯಾತೀತವಾಗಿ ಪಾಲ್ಗೊಂಡಿದ್ದ ಹಲವು ಮಂದಿ ವ್ಯಕ್ತಿಗತ ತೇಜೋವಧೆ ಮಾಡುತ್ತಾ, ಸಮಾಜದಲ್ಲಿ ಅಶಾಂತಿ ವಾತಾವರಣವನ್ನು ರಂಗಾಯಣ ಸೃಷ್ಟಿಸುತ್ತಿದೆ. ಈ ಸಂಬಂಧ ಸಾಂಕೇತಿಕ ಪ್ರತಿಭಟನೆ ಮಾಡಲು ನಿರ್ಣಯ ಅಂಗೀಕರಿಸಲಾಯಿತು.

ಸಭೆಯಲ್ಲಿ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಮಾತನಾಡಿ, ನಾಟಕದಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯ ಅವರ ವಿರುದ್ಧ ಅವಹೇಳನ ಮಾಡಿರುವ ಕೃತ್ಯದ ಹಿಂದೆ ಬುದ್ಧಿಜೀವಿಗಳ ಕೈವಾಡವಿದೆ. ಬುದ್ಧಿಜೀವಿಗಳು ತಮ್ಮ ಅನಿಸಿಕೆಗಳನ್ನು ಪಾತ್ರದ ಮೂಲಕ ಹೊರ ತಂದಿದ್ದಾರೆ. ಅನ್ನಭಾಗ್ಯ, ಕ್ಷೀರಭಾಗ್ಯ ಸೇರಿದಂತೆ ಹಲವು ಭಾಗ್ಯಗಳನ್ನು ಕೊಟ್ಟು ಪಕ್ಷಾತೀತವಾಗಿ, ಜಾತ್ಯಾತೀತವಾಗಿ ಬಡವರು, ದಲಿತರು, ಶೋಷಿತರು ಸೇರಿದಂತೆ ಎಲ್ಲಾ ವರ್ಗಗಳ ಬಡ ಜನರಿಗೆ ನೆರವಾದ ಸಿದ್ದರಾಮಯ್ಯ ಅವರನ್ನು ಅವಹೇಳನ ಮಾಡುವ ಮೂಲಕ ತಮ್ಮ ಮನಸ್ಥಿತಿಯನ್ನು ತೋರ್ಪಡಿಸಿ ಬೆತ್ತಲಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಸಮಾನಮನಸ್ಕರೆಲ್ಲರೂ ಸೇರಿ ರಂಗಾಯಣದಲ್ಲಿ ನಡೆಯುತ್ತಿರುವ ದ್ವೇಷ ಬಿತ್ತುವ ಸಂಚನ್ನು ವಿರೋಧಿಸಲು ಹೋರಾಡಬೇಕಿದೆ ಎಂದರು.

ನಾಟಕದಲ್ಲಿ ಅನ್ನಭಾಗ್ಯ ಯೋಜನೆಯಿಂದ ಜನರು ಸೋಮಾರಿಗಳಾದರೂ ಎಂಬ ತಪ್ಪು ಸಂದೇಶ ನೀಡುವ ಸಂಚು ನಡೆಸಿದ್ದಾರೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಎಷ್ಟು ಜನರಿಗೆ ಉದ್ಯೋಗ ಕೊಟ್ಟಿದ್ದಾರೆ. ಎಷ್ಟು ಜನ ವಸತಿಹೀನರಿಗೆ ಸೂರು ಕೊಟ್ಟಿದ್ದೀರಾ. ಸಿದ್ದರಾಮಯ್ಯರ ಆಡಳಿತದಲ್ಲಿ 15 ಸಾವಿರ ಮನೆ ನಿರ್ಮಾಣ ಮಾಡಿದ್ದಾರೆ. ಅಭಿವೃದ್ಧಿ ವಿಚಾರದಲ್ಲಿ ಚರ್ಚೆಗೆ ಬರಲು ಹಿಂದೇಟು ಹಾಕುವ ಬಿಜೆಪಿಗರು ಅಸಂವಿಧಾನಿಕ ನಡೆಯ ಮೂಲಕ ಬೇಳೆ ಬೇಯಿಸಿಕೊಳ್ಳಲು ಮುಂದಾಗುತ್ತಿದ್ದಾರೆ. ಬಿಜೆಪಿ ನಾಯಕರಿಗೆ ಸಾಹಿತಿ ಸೇರಿದಂತೆ ಯಾರ ಮೇಲೂ ಗೌರವವೇ ಇಲ್ಲದಂತಾಗಿದೆ ಎಂದು ಕಿಡಿಕಾರಿದರು.

ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ಸಾಧಕನೂ ಅಲ್ಲ, ದೊಡ್ಡ ಧೀರನೂ ಅಲ್ಲ. ನಾವು ಆತನ ವಿರುದ್ಧ ಹೋರಾಟ ಮಾಡುತ್ತಿಲ್ಲ. ಆತನ ಹಿಂದೆ ಇರುವವರ ವಿರುದ್ಧ ಕ್ರಮ ಆಗಬೇಕು. ರಂಗಾಯಣ ಸಮಾಜ ಕಟ್ಟುವ ಕೆಲಸ ಮಾಡಬೇಕಾಗಿತ್ತು. ಆದರೆ, ಈಗ ಸಮಾಜ ಒಡೆಯುವ ಕೆಲಸ ಮಾಡುತ್ತಿದೆ. ಗಣ್ಯ ವ್ಯಕ್ತಿಗಳಿಗೆ ಅಗೌರವ ತರುವ ಕೆಲಸ ಮಾಡುತ್ತಿದೆ ಎಂದು ವಿಷಾದಿಸಿದರು.

ಜ.10ರಂದು ಮುತ್ತಿಗೆ: ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಮಾತನಾಡಿ, 'ಸ್ವಾಭಿಮಾನಿ ಹೋರಾಟ ಸಮಿತಿ'ಯ ಹೋರಾಟ ಬಿಜೆಪಿ ಮತ್ತು ಆರ್‌ಎಸ್‌ಎಸ್ ವಿರುದ್ಧವಾಗಿದೆ. ಹೋರಾಟದಲ್ಲಿ ಅಡ್ಡಂಡ ಸಿ.ಕಾರ್ಯಪ್ಪ ಅವರನ್ನು ಟೀಕಿಸುವ ಭರದಲ್ಲಿ ಹೀರೋ ಮಾಡುವುದಿಲ್ಲ. ಇಂತಹ ಸಂಚುಗಳ ಮೂಲಕವೇ ಎಂಎಲ್‌ಸಿ ಆಗಲು ಅವರು ಹವಣಿಸುತ್ತಿದ್ದಾರೆ. ಕಾನೂನು ಉಲ್ಲಂಘಿಸದೆ, ಶಾಂತಿಗೆ ಭಂಗ ತರದೆ ರಂಗಾಯಣಕ್ಕೆ ಮುತ್ತಿಗೆ ಹಾಕಿ ಎಚ್ಚರಿಕೆಯ ಸಂದೇಶ ನೀಡಲು ನಿರ್ಧರಿಸಲಾಗಿದೆ. ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳಿಂದ 10 ಸಾವಿರ ಸ್ವಾಭಿಮಾನಿಗಳು ಪಾಲ್ಗೊಂಡು ತಮ್ಮ ಪ್ರತಿಭಟನಾ ಸಂದೇಶ ಸಾರಲಿದ್ದಾರೆ. ಜ.10ರಂದು ಬೆಳಗ್ಗೆ 11ಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಓವೆಲ್ ಮೈದಾನದಲ್ಲಿ ಸೇರಿ ಖಂಡನಾ ಸಭೆ ನಡೆಸುತ್ತೇವೆ. ಆ ನಂತರ ರಂಗಾಯಣಕ್ಕೆ ಮೆರವಣಿಗೆಯಲ್ಲಿ ತೆರಳಿ ಮುತ್ತಿಗೆ ಹಾಕುತ್ತೇವೆ. ಈ ವೇಳೆ ಯಾವುದೇ ವಸ್ತುಗಳಿಗೂ ಹಾನಿ ಮಾಡದಂತೆ ಸಭ್ಯತೆಯಿಂದ ವರ್ತಿಸುತ್ತೇವೆ ಎಂದರು.

ನಮ್ಮದು ಅಡ್ಡಂಡ ಕಾರ್ಯಪ್ಪ ವಿರುದ್ಧದ ಹೋರಾಟವಲ್ಲ, ನಾಟಕ ನಿರ್ದೇಶಕರ ವಿರುದ್ಧ ಹೋರಾಟ. ಪ್ರತಿದಿನ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ವಿರುದ್ಧ ರಾಜಕೀಯ ಸಂಸ್ಕೃತಿ ಹೊರತುಪಡಿಸಿ ಬೈಯ್ಯಲು ಬಿಜೆಪಿಗರು ಅಜೆಂಡಾ ಸೃಷ್ಟಿಸಿದ್ದಾರೆ. ಇಬ್ಬರು ನಾಯಕರ ನಡುವೆ ದೊಡ್ಡ ಕಂದಕ ಸೃಷ್ಟಿಸುವ ಕೆಲಸ ಮಾಡಲಾಗುತ್ತಿದೆ. ಚಂದ್ರಶೇಖರ ಕಂಬಾರರು ದೂರು ನೀಡಿದ್ದಾರೆ. ಆದರೆ, ಯಾಕೆ ಇನ್ನು ಪ್ರಕರಣ ದಾಖಲಿಸಿಲ್ಲ. ಒಬ್ಬರಿಗೊಂದು, ಮತ್ತೊಬ್ಬರಿಗೆ ಇನ್ನೊಂದು ನ್ಯಾಯವೇ? ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ವಿರುದ್ಧ ಎಫ್‌ಐಆರ್ ದಾಖಲಿಸಬೇಕು. ನಾಟಕ ಪ್ರದರ್ಶನ ಮಾತ್ರವಲ್ಲದೆ, ಅದನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡಲಾಗುತ್ತಿದೆ ಎಂದು ಆರೋಪಿಸಿದರು.


ಕಲಾವಿದ ಕೃಷ್ಣ ಪ್ರಸಾದ್ ಮಾತನಾಡಿ, ಈ ಹಿಂದೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗ ನೀಡಿದ ಸಹಕಾರವೇ ರಂಗಾಯಣವು ದೇಶ-ವಿದೇಶಗಳಲ್ಲಿ ಮಾನ್ಯತೆ ಪಡೆಯಲು ಕಾರಣ. ರಂಗಾಯಣದ 30 ಕಲಾವಿದರು ಅತಂತ್ರ ದುಸ್ಥಿತಿಯಲ್ಲಿದ್ದಾಗ ನೆರವು ನೀಡಿದರು. ಸಂಕಷ್ಟದಲ್ಲಿದ್ದ ಕಲಾವಿದರಿಗೆ ನೆರಳು ಮತ್ತು ಭೂಮಿ ಕಲ್ಪಿಸಿದರು. ಆದರೆ, ಒಂದೇ ಒಂದು ದಿನ ಯಾರನ್ನು ರಾಜಕೀಯ ಪ್ರಚಾರಕ್ಕೆ ಬನ್ನಿ, ರಾಜಕೀಯ ಮಾಡಿ ಎಂದು ಹೇಳಲಿಲ್ಲ. ಆದರೆ, ಕಲಾವಿದರಿಗೆ, ಕಲೆಗೆ ಬೆಲೆ ನೀಡಿರುವವರ ಬಗ್ಗೆ ಅಡ್ಡಂಡ ಕಾರ್ಯಪ್ಪ ಬೇಕಾಬಿಟ್ಟಿ ಮಾತನಾಡುತ್ತಿದ್ದಾರೆ. 'ಸಾಂಬಶಿವ ಪ್ರಹಸನ' ನಾಟಕ ತಿರುಚಿರುವ ಬಗ್ಗೆ ಡಾ.ಚಂದ್ರಶೇಖರ ಕಂಬಾರರೇ ದೂರು ನೀಡಿದರೂ ಯಾವುದೇ ಕ್ರಮವನ್ನು ಪೊಲೀಸರು ಜರುಗಿಸಿಲ್ಲ ಎಂದು ವಿಷಾದಿಸಿದರು.

ಅನ್ನಭಾಗ್ಯದ ಅಕ್ಕಿ ಬಳಸಿದವರಿಗೆ ಅವಮಾನ: ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು ಮಾತನಾಡಿ, ಮಾಜಿ ಸಿಎಂ ಸಿದ್ದರಾಮಯ್ಯ ಓರ್ವ ಸಾಂಸ್ಕೃತಿಕ ನಾಯಕ, ಸಮಾಜವಾದಿ ಹಿನ್ನೆಲೆಯಲ್ಲಿ ಬಂದು ವೈಚಾರಿಕ ಚಿಂತನೆ, ಪ್ರಗತಿಪರ ಆಲೋಚನೆಗಳ ಮೂಲಕ ನಾಡು ಕಟ್ಟಿದ ನಾಯಕರಲ್ಲಿ ಸಿದ್ದರಾಮಯ್ಯ ಒಬ್ಬರಾಗಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಹುದ್ದೆಯಲ್ಲಿರುವ ಡಿ.ಕೆ.ಶಿವಕುಮಾರ್ ಪ್ರಭಾವಿ ನಾಯಕರಾಗಿದ್ದಾರೆ. ಇಂತಹ ನಾಯಕರ ಅವಹೇಳನ ಮಾಡುವ ಮೂಲಕ ತಮ್ಮ ಸಣ್ಣತನವನ್ನು ಪ್ರದರ್ಶಿಸಲಾಗಿದೆ. ಸರ್ಕಾರದ ಸ್ವಾಯತ್ತ ಸಂಸ್ಥೆ ರಂಗಾಯಣದಲ್ಲಿ ಇಂತಹ ಕೃತ್ಯ ನಡೆಸಿರುವುದನ್ನು ಒಕ್ಕೊರಲಿನಿಂದ ಖಂಡಿಸಬೇಕು ಎಂದರು.

ಸಭೆಯಲ್ಲಿ ಕರ್ನಾಟಕ ಪ್ರದೇಶ ಕುರುಬರ ಸಂಘದ ರಾಜ್ಯಾಧ್ಯಕ್ಷ ಬಿ.ಸುಬ್ರಹ್ಮಣ್ಯ, ಮಾಜಿ ಶಾಸಕ ವಾಸು, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ನಗರ ಅಧ್ಯಕ್ಷ ಆರ್.ಮೂರ್ತಿ, ಮಾಜಿ ಮೇಯರ್‌ಗಳಾದ ನಾರಾಯಣ, ಪುಷ್ಪಲತಾ ಟಿ.ಬಿ.ಚಿಕ್ಕಣ್ಣ, ಚಿಕ್ಕಣ್ಣ, ಎಂ.ಸಿ.ರಾಜೇಶ್ವರಿ ಪುಟ್ಟಸ್ವಾಮಿ, ಪುಷ್ಪಲತಾ ಜಗನ್ನಾಥ್, ಕಾಂಗ್ರೆಸ್ ಮುಖಂಡರಾದ ಕೆ.ಹರೀಶ್‌ಗೌಡ, ಎಂ.ಶಿವಣ್ಣ, ಪ್ರಶಾಂತ್‌ಗೌಡ, ಗೋಪಿನಾಥ್, ಎಂ.ಎ.ಕಮಲ ಅನಂತರಾಮ್, ಮಂಜುಳಾ ಮಾನಸ, ಹುಣಸೂರು ಬಸವಣ್ಣ, ಎಂ.ಶಿವಣ್ಣ, ಗಿರೀಶ್, ರಮೇಶ್, ಅಶೋಕ್, ಮಹೇಶ್, ಹೆಡತಲೆ ಮಂಜುನಾಥ್, ಗಂಧನಹಳ್ಳಿ ಜಿ.ಹೇಮಂತ್‌ಕುಮಾರ್, ಹರ್ಷದ್, ನಾಗೇಶ್, ಯೋಗೇಶ್ ಉಪ್ಪಾರ್, ನೆಲೆಹಿನ್ನೆಲೆ ಗೋಪಾಲ್ ಮತ್ತಿತರರು ಹಾಜರಿದ್ದರು.

ಜ.10ರಂದು ಮೈಸೂರಲ್ಲಿ ಇಪಿಎಸ್-95 ನಿವೃತ್ತ ನೌಕರರ ಸಮಾವೇಶ

7,500 ರೂ. ಕನಿಷ್ಠ ಪಿಂಚಣಿಗೆ ಆಗ್ರಹ



ಮೈಸೂರು,ಜ.7(ಪಿಎಂ)- ಕರ್ನಾಟಕ ರಾಜ್ಯ ಇಪಿಎಸ್-95 ನಿವೃತ್ತ ನೌಕರರ ಒಕ್ಕೂಟದ ವತಿಯಿಂದ 1995ರ ನೌಕರರ ಪಿಂಚಣಿ ಯೋಜನೆಯ (ಇಪಿಎಸ್-95) ನಿವೃತ್ತ ನೌಕರರಿಗೆ 7,500 ರೂ. ಕನಿಷ್ಠ ಪಿಂಚಣಿ ನೀಡಲು ಆಗ್ರಹಿಸಿ ಜ.10ರಂದು ಮೈಸೂರು ವಿಭಾಗ ಮಟ್ಟದ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಒಕ್ಕೂಟದ ಅಧ್ಯಕ್ಷ ಎಸ್.ಪಿ.ನಿಂಗೇಗೌಡ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಬೆಳಗ್ಗೆ 10.30ಕ್ಕೆ ಸಮಾವೇಶ ಆಯೋಜಿಸಲಾಗಿದೆ. ಸುಮಾರು 2 ಸಾವಿರ ಇಪಿಎಸ್-95 ನಿವೃತ್ತ ನೌಕರರು ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ. ಹಲವು ವರ್ಷಗಳಿಂದ ಕನಿಷ್ಠ ಪಿಂಚಣಿಗೆ ಆಗ್ರಹಿಸಿ ಹೋರಾಟ ನಡೆಸುತ್ತಿದ್ದರೂ ಇಪಿಎಫ್‌ಓ (ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆ) ಮತ್ತು ಕೇಂದ್ರ ಸರ್ಕಾರ ಸ್ಪಂದಿಸುತ್ತಿಲ್ಲ. ಹಾಗಾಗಿ ನೌಕರರು ಮುಂಬರುವ ಚುನಾವಣೆಗಳಲ್ಲಿ ಮತದಾನ ಬಹಿಷ್ಕಾರದ ನಿರ್ಧಾರ ಕೈಗೊಳ್ಳುವ ಸಂಬಂಧವೂ ಸಮಾವೇಶದಲ್ಲಿ ಸಮಾಲೋಚಿಸಲಾಗುವುದು ಎಂದು ಹೇಳಿದರು.

ಉದ್ಯೋಗಿಗಳ ಮೂಲ ವೇತನಕ್ಕೆ ತಕ್ಕಂತೆ ಪಿಂಚಣಿ ನೀಡಬೇಕೆಂದು 2022ರ ನ.4ರಂದು ಸುಪ್ರೀಂಕೋರ್ಟ್ ಆದೇಶ ನೀಡಿದೆ ಆದಾಗ್ಯೂ ಈ ಬಗ್ಗೆ ಕೇಂದ್ರ ಸರ್ಕಾರ ಕ್ರಮ ವಹಿಸಿಲ್ಲ. ಹಾಗಾಗಿ ಶೀಘ್ರ ಬೇಡಿಕೆ ಈಡೇರಿಸುವಂತೆ ಸಮಾವೇಶದ ಮೂಲಕ ಆಗ್ರಹಿಸಲಾಗುವುದು. ಖಾಸಗಿ ಕಂಪನಿಗಳಲ್ಲಿ ಸೇವೆ ಸಲ್ಲಿಸುವ ಸಂದರ್ಭದಲ್ಲಿ ನಮ್ಮ ವೇತನದಲ್ಲಿ ಕಡಿತ ಮಾಡಿದ ಹಣದಲ್ಲಿ ಪಿಂಚಣಿ ನೀಡಲಾಗುತ್ತಿದ್ದು, ಈಗ ಕೇವಲ 450ರಿಂದ 3 ಸಾವಿರ ರೂ.ವರೆಗೆ ಪಿಂಚಣಿ ದೊರೆಯುತ್ತಿದೆ. ಈ ಸಣ್ಣ ಪ್ರಮಾಣದ ಹಣದಲ್ಲಿ ಜೀವನ ನಡೆಸಲು ಸಾಧ್ಯವಿಲ್ಲ ಎಂಬ ಕನಿಷ್ಠ ಜ್ಞಾನವೂ ಸರ್ಕಾರಕ್ಕೆ ಇಲ್ಲವಾಗಿದೆ ಎಂದು ಕಿಡಿಕಾರಿದರು.

ಶಾಸಕ ಎಲ್.ನಾಗೇಂದ್ರ ಸಮಾವೇಶ ಉದ್ಘಾಟಿಸಲಿದ್ದು, ಅವರಿಗೆ ಪಿಂಚಣಿ ಹೆಚ್ಚಳ ಸಂಬಂಧ ಮನವಿ ಸಲ್ಲಿಸಲಾಗುವುದು. ಮಾಜಿ ಶಾಸಕ ವಾಸು, ಮಾಜಿ ಮೇಯರ್ ಬಿ.ಎಲ್.ಭೈರಪ್ಪ, ಅರಣ್ಯ ವಸತಿ ಮತ್ತು ವಿಹಾರಧಾಮಗಳ ಸಂಸ್ಥೆಯ ಮಾಜಿ ಅಧ್ಯಕ್ಷ ಕೆ.ವಿವೇಕಾನಂದ, ಜೆಡಿಎಸ್ ನಗರಾಧ್ಯಕ್ಷ ಕೆ.ಟಿ.ಚೆಲುವೇಗೌಡ, ಕಾಂಗ್ರೆಸ್ ಮುಖಂಡರಾದ ಹರೀಶ್‌ಗೌಡ, ವಿಕ್ರಾಂತ್ ಪಿ.ದೇವೇಗೌಡ, ನಗರಪಾಲಿಕೆ ಸದಸ್ಯರಾದ ಕೆ.ವಿ.ಶ್ರೀಧರ್, ಪ್ರೇಮಾ ಶಂಕರೇಗೌಡ, ಪೈ.ಶ್ರೀನಿವಾಸ್, ಎಸ್.ಬಿ.ಎಂ.ಮಂಜು, ಮಾಜಿ ಸದಸ್ಯರಾದ ಸಿ.ಮಾದೇಶ್, ಎಂ.ಶಿವಣ್ಣ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಬಳಿಕ ಮಧ್ಯಾಹ್ನ 12ಕ್ಕೆ ಕೇಂದ್ರ ಭವಿಷ್ಯ ನಿಧಿ ಸದಸ್ಯ ಎ.ಕೆ.ಪದ್ಮನಾಭನ್ ಅವರು ಭವಿಷ್ಯನಿಧಿ ಸಂಬಂಧ ಕೇಂದ್ರದಲ್ಲಿ ನಡೆಯುತ್ತಿರುವ ಕಾರ್ಮಿಕ ವಿರೋಧಿ ಚಟುವಟಿಕೆಗಳ ಬಗ್ಗೆ ಸವಿಸ್ತಾರವಾಗಿ ಮಾತನಾಡಲಿದ್ದಾರೆ ಎಂದರು. ಒಕ್ಕೂಟದ ಉಪಾಧ್ಯಕ್ಷ ಎನ್.ರಾಜಣ್ಣ, ಸಹ ಕಾರ್ಯದರ್ಶಿ ಚಿಕ್ಕಮಂಚಯ್ಯ, ಖಜಾಂಚಿ ಕೆ.ವಿ.ಬಸವಣ್ಣ ಗೋಷ್ಠಿಯಲ್ಲಿದ್ದರು.

ಇತರೆ ಬೇಡಿಕೆಗಳು...

ಕನಿಷ್ಠ ಪಿಂಚಣಿ 7,500 ರೂ. ಜೊತೆಗೆ ಕಾಲಕಾಲಕ್ಕೆ ತಕ್ಕಂತೆ ತುಟ್ಟಿಭತ್ಯೆ ನೀಡಬೇಕು. ನಿವೃತ್ತ ಇಪಿಎಸ್ ನೌಕರರು ಮರಣ ಹೊಂದಿದರೆ ವಿಧವೆ, ವಿಧುರರಿಗೆ ಶೇ.50ರ ಬದಲು ಶೇ.100ರಷ್ಟು ಪಿಂಚಣಿ ನೀಡಬೇಕು. ಇಪಿಎಸ್ ನೌಕರರಿಗೂ ಇಎಸ್‌ಐ ಮತ್ತು ಬಿಪಿಎಲ್ ಕಾರ್ಡ್ ನೀಡಬೇಕು. ಜೊತೆಗೆ ಉಚಿತ ಬಸ್ ಮತ್ತು ರೈಲ್ವೆ ಪಾಸ್ ಸೌಲಭ್ಯದೊಂದಿಗೆ ವಯೋವೃದ್ಧತೆಯ ಪಿಂಚಣಿ ನೀಡಬೇಕು.

86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಹಾವೇರಿಯಲ್ಲಿ ನಡೆಯುತ್ತಿದ್ದು, ಈ ವೇಳೆ ಕನ್ನಡ ನುಡಿಮನೆಯ ನೇತೃತ್ವ ವಹಿಸಿದವರ ಪರಿಚಯಿಸುವ ಸದುದ್ದೇಶ

ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷರ ಪಟ್ಟಿ

ಹೆಚ್.ವಿ.ನಂಜುಂಡಯ್ಯ	1915-1920
ಸರ್.ಎಂ.ಕಾಂತರಾಜ ಅರಸ್	1920-1923
ಶ್ರೀ ಕಂಠೀರವ ನರಸಿಂಹರಾಜ ಒಡೆಯರ್	1924-1940
ಬಸವಪ್ರಭು ರಾಜಾ ಲಖಮನಗೌಡ ಸರದೇಸಾಯಿ	1941-1946
ಲೋಕೂರ್ ನಾರಾಯಣರಾವ್ ಸ್ವಾಮಿರಾವ್	1947ರ ಜೂನ್ 1947ರ ಡಿಸೆಂಬರ್
ತಿರುಮಲೆ ತಾತಾಚಾರ್ಯ ಶರ್ಮಾ	1947-1949
ರೆವರೆಂಡ್ ಮುತ್ತಂಗಿ ಚೆನ್ನಪ್ಪ	1949-1950
ಎಂ.ಆರ್.ಶ್ರೀನಿವಾಸ ಮೂರ್ತಿ	1950-1953
ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್	1953-1954
ಬಿ.ಶಿವಮೂರ್ತಿ ಶಾಸ್ತ್ರಿ	1956-1964
ಪ್ರೊ.ಜಿ. ವೆಂಕಟಸುಬ್ಬಯ್ಯ	1964-1969
ಜಿ.ನಾರಾಯಣ	1969-1978
ಡಾ. ಹಂಪಾ ನಾಗರಾಜಯ್ಯ	1978-1983
ಹೆಚ್.ಬಿ.ಜ್ವಾಲಾನಯ್ಯ	1986-1989
ಪ್ರೊ. ಜಿ.ಎಸ್.ಸಿದ್ಧಲಿಂಗಯ್ಯ	1989-1992
ಗೊ.ರು.ಚನ್ನಬಸಪ್ಪ	1992-1995
ಡಾ. ಸಾ.ಶಿ.ಮರುಳಯ್ಯ	1995-1998
ಎನ್.ಬಸವಾರಾಧ್ಯ	1998-2001
ಹರಿಕೃಷ್ಣ ಪುನರೂರು	2001-2004
ಪ್ರೊ. ಚಂದ್ರಶೇಖರ್ ಪಾಟೀಲ(ಚಂಪಾ)	2004-2008
ಡಾ. ನಲ್ಲೂರು ಪ್ರಸಾದ್	2008-2012
ಪುಂಡಲೀಕ ಹಾಲಂಬಿ	2012-2015
ಡಾ. ಮನು ಬಳಿಗಾರ್	2016-2021
ಡಾ. ಮಹೇಶ್ ಜೋಷಿ	2021-

ಕಸಾಪ ಸ್ಥಾಪನೆಯಾದ 1915 ರಿಂದ 1946ರವರೆಗೆ ರಾಜ್ಯ ಕಸಾಪ ಅಧ್ಯಕ್ಷರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗುತ್ತಿತ್ತು. ನಂತರ ಚುನಾವಣಾ ಪದ್ಧತಿ ಜಾರಿಗೆ ಬಂತು.

ಬಿಷಪ್ ಕೆ.ಎ.ವಿಲಿಯಂ ದೀರ್ಘ ರಜೆ

ಮೈಸೂರು ಡಯೋಸಿಸ್ ಆಡಳಿತಾಧಿಕಾರಿಯಾಗಿ ಬೆರ್ನಾರ್ಡ್ ಮೊರಾಸ್ ಪದಗ್ರಹಣ



ವಿಶ್ರಾಂತ ಮಹಾಧರ್ಮಾಧ್ಯಕ್ಷ ಬೆರ್ನಾರ್ಡ್ ಮೊರಾಸ್(ಎಡಬದಿ) ಅವರು ಮೈಸೂರು ಡಯೋಸಿಸ್ ಆಡಳಿತಾಧಿಕಾರಿಯಾಗಿ ಜವಾಬ್ದಾರಿ ವಹಿಸಿಕೊಂಡರು.

ಮೈಸೂರು, ಜ.7(ಎಸ್‌ಬಿಡಿ)- ಮೈಸೂರು ಕ್ಷೇತ್ರದ ಬಿಷಪ್ ಕೆ.ಎ.ವಿಲಿಯಂ ಅವರು ದೀರ್ಘ ರಜೆ ಮೇಲೆ ಹೋಗುತ್ತಿರುವ ಹಿನ್ನೆಲೆಯಲ್ಲಿ ಬೆಂಗಳೂರಿನ ವಿಶ್ರಾಂತ ಮಹಾಧರ್ಮಾಧ್ಯಕ್ಷ (ಆರ್ಚ್ ಬಿಷಪ್ ಎಮೆರಿಟಸ್) ಬೆರ್ನಾರ್ಡ್ ಮೊರಾಸ್ ಅವರು ಇಲ್ಲಿನ ಆಡಳಿತಾಧಿಕಾರಿಯಾಗಿ ಶನಿವಾರ ಅಧಿಕಾರ ಸ್ವೀಕರಿಸಿದರು.

ನಗರದ ಸೆಂಟ್ ಫಿಲೋಮಿನಾ ಚರ್ಚ್‌ನಲ್ಲಿ ಹೊಸವರ್ಷದ ಮೊದಲ ಶನಿವಾರವಾದ ಇಂದು ಸಂಜೆ ಪ್ರಾರ್ಥನೆ ವೇಳೆ ಧಾರ್ಮಿಕ ವಿಧಾನಗಳ ಅನುಸಾರ ಬಿಷಪ್ ಕೆ.ಎ.ವಿಲಿಯಂ ಅವರು ಬೆರ್ನಾರ್ಡ್ ಮೊರಾಸ್ ಅವರಿಗೆ ಮೈಸೂರು ಕ್ಷೇತ್ರದ ವಿಶ್ರಾಂತ ಬಿಷಪ್ ಥಾಮಸ್ ಆಂಟೋನಿ ವಾಜಪಿಳ್ಳೈ ಸಮ್ಮುಖದಲ್ಲಿ ಅಧಿಕಾರ ವಹಿಸಿದರು. ಈ ಸಂದರ್ಭದಲ್ಲಿ ವಿವಿಧ ಚರ್ಚ್‌ಗಳ ಧರ್ಮಗುರುಗಳು, ನೂರಾರು ಭಕ್ತರ ಉಪಸ್ಥಿತಿಯಲ್ಲಿ ಇಬ್ಬರನ್ನೂ ಮೈಸೂರು ಕ್ಷೇತ್ರದ ಪರವಾಗಿ ಆತ್ಮೀಯವಾಗಿ ಅಭಿನಂದಿಸಲಾಯಿತು.

ಇದಕ್ಕೂ ಮುನ್ನ ಬಿಷಪ್ ಕೆ.ಎ.ವಿಲಿಯಂ ಅವರು ವೈದ್ಯಕೀಯ ಕಾರಣದಿಂದ ದೀರ್ಘ ರಜೆ ತೆಗೆದುಕೊಂಡಿರುವ ಹಿನ್ನೆಲೆಯಲ್ಲಿ ಮೈಸೂರು ಕ್ಷೇತ್ರದ ಸಾಮಾನ್ಯ ಆಡಳಿತ ನಿರ್ವಹಣೆಗಾಗಿ ಕ್ಯಾಥೋಲಿಕ್ ಬಿಷಪ್ಸ್ ಕಾನ್ಫರೆನ್ಸ್ ಆಫ್ ಇಂಡಿಯಾ ವಿಶ್ರಾಂತ ಮಹಾಧರ್ಮಾಧ್ಯಕ್ಷ ಬೆರ್ನಾರ್ಡ್ ಮೊರಾಸ್ ಅವರನ್ನು ನಿಯೋಜಿಸಿದ್ದು, ಇವರಿಗೆ ಸಹಕಾರ ನೀಡುವುದರ ಜೊತೆಗೆ ಬಿಷಪ್ ಕೆ.ಎ.ವಿಲಿಯಂ ಅವರ ಆರೋಗ್ಯಕ್ಕಾಗಿ ಎಲ್ಲರೂ ಪ್ರಾರ್ಥಿಸಬೇಕೆಂದು ಧರ್ಮಗುರುವೊಬ್ಬರು ಸಭೆಗೆ ತಿಳಿಸಿದರು. ಬಳಿಕ ಪ್ರಾರ್ಥನೆಯೊಂದಿಗೆ ಏಸುವಿನ ಸ್ಮರಣೆ ಮಾಡಲಾಯಿತು.

ಈ ವೇಳೆ ಬಿಷಪ್ ಕೆ.ಕೆ.ವಿಲಿಯಂ ಮಾತನಾಡಿ, ನಾನು ರಜೆಗೆ ಹೋಗುವ ಸಂದರ್ಭದಲ್ಲಿ ಧರ್ಮಕ್ಷೇತ್ರವನ್ನು ಮುನ್ನಡೆಸಿ, ನಿಮ್ಮೆಲ್ಲರ ಸೇವೆ ಮಾಡಲು ಪರಮಪೂಜ್ಯ ಬೆರ್ನಾರ್ಡ್ ಮೊರಾಸ್ ಅವರನ್ನು ಆಡಳಿತಾಧಿಕಾರಿಯಾಗಿ ನಿಯೋಜಿಸಲಾಗಿದೆ. ಸಂತೋಷದಿಂದ ಜವಾಬ್ದಾರಿ ನಿರ್ವಹಿಸಲು ನೀವೆಲ್ಲರು ಸಹಾಯ, ಸಹಕಾರ ನೀಡಬೇಕು. ನಾನು ಹೆಚ್ಚು ಮಾತನಾಡುವುದಿಲ್ಲ. ನಾನು ಮಾಡಿರುವ ಸತ್ಕಾರ್ಯಗಳೇ ಮಾತಾಗಿ ಶಾಶ್ವತವಾಗಿ ಉಳಿಯುತ್ತವೆ. ನಿಮ್ಮೆಲ್ಲರ ಪ್ರಾರ್ಥನೆ ಬಲ ನನಗಿದೆ ಎಂದು ನುಡಿದರು.

ಆಡಳಿತಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡ ಬೆರ್ನಾರ್ಡ್ ಮೊರಾಸ್ ಅವರು ಮಾತನಾಡಿ, ಮೈಸೂರು ಧರ್ಮಕ್ಷೇತ್ರದ ಆಡಳಿತಾಧಿಕಾರಿಯಾಗಿ ಸೇವೆ ಸಲ್ಲಿಸಬೇಕೆಂದು ಕೆಲ ದಿನಗಳ ಹಿಂದೆ ಸೂಚಿಸಿದಾಗ ನಾನು ವಿನಯದಿಂದ ಒಪ್ಪಿಕೊಂಡೆ. ನಾನೆಂದೂ ಯಾವ ಜವಾಬ್ದಾರಿಯನ್ನೂ ನಿರಾಕರಿಸದೆ ನಿರ್ವಹಿಸಿಕೊಂಡು ಬಂದಿದ್ದೇನೆ. ಹಾಗೆಯೇ ಇಂದು ಪೂಜೆ ಸಮಯದಲ್ಲಿ ಆಡಳಿತಾಧಿಕಾರಿಯಾಗಿ ಜವಾಬ್ದಾರಿ ಸ್ವೀಕರಿಸಿದ್ದೇನೆ. ಅಧಿಕಾರ ಚಲಾಯಿಸುವುದಕ್ಕಾಗಿ ಅಲ್ಲ, ನಿಮ್ಮೆಲ್ಲರ ಸೇವೆ ಮಾಡುವ ಉದ್ದೇಶದಿಂದ ಜವಾಬ್ದಾರಿ ಸ್ವೀಕರಿಸಿದ್ದು, ಕೆ.ಎ. ವಿಲಿಯಂ ಹಾಗೂ ಥಾಮಸ್ ಆಂಟೋನಿ ವಾಜಪಿಳ್ಳೈ ಅವರಿಗೆ ಧನ್ಯವಾದ ತಿಳಿಸುತ್ತೇನೆ. ನಾನು, ನೀವೆಲ್ಲರೂ ವಿಲಿಯಂ ಅವರ ಉತ್ತಮ ಆರೋಗ್ಯಕ್ಕಾಗಿ ದೇವರಲ್ಲಿ ಪ್ರಾರ್ಥಿಸಬೇಕು. ದೇವರ ಇಚ್ಛೆಯಂತೆ ಧರ್ಮ, ಧರ್ಮಸಭೆಗಾಗಿ ಒಗ್ಗಟ್ಟಿನಿಂದ ದುಡಿಯಬೇಕು. ಪ್ರಸಿದ್ಧ ಮೈಸೂರು ಧರ್ಮ ಕ್ಷೇತ್ರವನ್ನು ಎಲ್ಲರೂ ಒಟ್ಟಿಗೆ ಮುನ್ನಡೆಸಬೇಕು. ಈ ನಿಟ್ಟಿನಲ್ಲಿ ಎಲ್ಲರ ಸಹಕಾರ ಕೋರುತ್ತೇನೆ ಎಂದರು.

ಥಾಮಸ್ ಆಂಟೋನಿ ವಾಜಪಿಳ್ಳೈ ಅಧಿಕಾರಾವಧಿ ಪೂರ್ಣಗೊಂಡ ನಂತರ 2017ರ ಫೆಬ್ರವರಿ 27ರಿಂದ ಮೈಸೂರು ಬಿಷಪ್ ಆಗಿರುವ ಕೆ.ಎ.ವಿಲಿಯಂ ಅವರು ಸದ್ಯ ರಜೆಯಲ್ಲಿದ್ದು, ಅವರ ಅನುಪಸ್ಥಿತಿಯಲ್ಲಿ ಇಂದಿನಿಂದಲೇ ಆಡಳಿತಾಧಿಕಾರಿ ಬರ್ನಾರ್ಡ್ ಮೊರಾಸ್ ಅವರು ಜವಾಬ್ದಾರಿ ನಿರ್ವಹಿಸಲಿದ್ದಾರೆ.

ನಾಳೆ 'ಸಾಂಸ್ಕೃತಿಕ ಸಂಭ್ರಮ-2023' ಶೀರ್ಷಿಕೆಯಡಿ ಗಾಯನ ಕಾರ್ಯಕ್ರಮ




ಮೈಸೂರು,ಜ.7(ಪಿಎಂ)- ಜನ ಚೈತನ್ಯ ಫೌಂಡೇಷನ್ ವತಿಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಜ.9ರಂದು 'ಸಾಂಸ್ಕೃತಿಕ ಸಂಭ್ರಮ-2023' ಶೀರ್ಷಿಕೆಯಡಿ ಭಾವಗೀತೆ, ಜನಪದಗೀತೆ, ನಾಡಗೀತೆ, ಜಾಗೃತಗೀತೆ ಮತ್ತು ರಂಗಗೀತೆಗಳ ಗಾಯನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಫೌಂಡೇಷನ್ ಅಧ್ಯಕ್ಷ ಆರ್.ಲಕ್ಷ್ಮಣ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 4ಕ್ಕೆ ಮೈಸೂರಿನ ನಾದಬ್ರಹ್ಮ ಸಂಗೀತ ಸಭಾದಲ್ಲಿ ಕಾರ್ಯಕ್ರಮ ನಡೆಯಲಿದೆ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಉದ್ಘಾಟಿಸಲಿದ್ದು, ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಇಂಜಿನಿಯರ್ ಎನ್.ಶ್ರೀನಿವಾಸಲು, ಹಿರಿಯ ಗಾಯಕ ಎಂ.ಪುಟ್ಟಸ್ವಾಮಿ, ಕೃಷಿ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ಶ್ರೀರಂಗ, ಮಾಜಿ ಮೇಯರ್ ನಾರಾಯಣ್ ಅಭಿಮಾನಿಗಳ ಟ್ರಸ್ಟ್ ಅಧ್ಯಕ್ಷ ಆರ್.ರಮೇಶ್, ಉದ್ಯಮಿ ರವಿಗೌಡ, ಕವಯಿತ್ರಿ ಡಾ.ಕೆ.ಎನ್.ಲಾವಣ್ಯ ಪ್ರಭಾ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಸಾರ್ವಜನಿಕರಿಗೆ ಪ್ರವೇಶ ಉಚಿತವಿದೆ ಎಂದು ಹೇಳಿದರು. ಗಾಯಕರಾದ ಶಿವಪ್ಪ, ವೆಂಕಟೇಶ್, ಪುಟ್ಟಸ್ವಾಮಿ ಗೋಷ್ಠಿಯಲ್ಲಿದ್ದರು.

ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಜ.7- ಮೈಸೂರಿನ ಎನ್‌ಜೆ.ಎಸ್. ಚಾರಿಟೆಬಲ್ ಟ್ರಸ್ಟ್ ಮತ್ತು ಮೈಸೂರು ವೀರಶೈವ ಸಜ್ಜನ ಸಂಘದ ವತಿಯಿಂದ ಜ.10 ರಂದು ಬೆಳಗ್ಗೆ 9.30 ರಿಂದ ಮಧ್ಯಾಹ್ನ 2 ರವರೆಗೆ ಕಬೀರ್ ರಸ್ತೆಯಲ್ಲಿರುವ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 99161 55453 ಸಂಪರ್ಕಿಸಬಹುದು.



ಆನ್‌ಲೈನ್ ವಂಚನೆ ಮಹಾ ಜಾಲವೇ ಇದೆ ಎಚ್ಚರ...



ಗಣೇಶ್ ಎ.

1930 ನಿಮ್ಮ ಮೊಬೈಲ್‌ಗೆ ಕರೆ ಮಾಡಿ ಅಥವಾ ಒಟಿಪಿ ಸೇರಿದಂತೆ ಇತರೆ ಯಾವುದೇ ಆನ್‌ಲೈನ್ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ದೂರುಗಳಿದ್ದರೆ ತಕ್ಷಣ 1930 ಸಂಖ್ಯೆಗೆ ಕರೆ ಮಾಡಿ. ಆ ಕರೆ ನೇರವಾಗಿ ಬೆಂಗಳೂರಿನ ಸೈಬರ್ ಕಂಟ್ರೋಲ್ ರೂಂಗೆ ಹೋಗುತ್ತದೆ. ಅಲ್ಲಿನ ಸಿಬ್ಬಂದಿ ಕೇಳುವ ಮಾಹಿತಿಯನ್ನು ಒದಗಿಸಿದರೆ, ಅವರು ತಕ್ಷಣ ತಮ್ಮ ಖಾತೆಗೆ ಕನ್ನ ಹಾಕುವುದನ್ನು ತಡೆಯುತ್ತಾರೆ.

ಆನ್‌ಲೈನ್ ಖದೀಮರಿಗೆ ಸಾಮಾಜಿಕ ಜಾಲತಾಣ ಸ್ವರ್ಗವಾಗಿದ್ದು, ಹಾಗಾಗಿ ವರ್ಷದಿಂದ ವರ್ಷಕ್ಕೆ ಸೈಬರ್ ಕ್ರೈಮ್ ಪ್ರಕರಣಗಳು ದುಪ್ಪಟ್ಟಾಗಿವೆ. ಕಳೆದ ವರ್ಷ ಬರೋಬ್ಬರಿ 2700ಕ್ಕೂ ಅಧಿಕ ಪ್ರಕರಣಗಳು ದಾಖಲಾಗಿವೆ.

ಇಡೀ ವಿಶ್ವವೇ ಸಾಮಾಜಿಕ ಜಾಲತಾಣವನ್ನು ಜೀವನದ ಒಂದು ಭಾಗವಾಗಿಸಿಕೊಂಡಿರುವಾಗ ಖದೀಮರು ಇದನ್ನು ಬಳಸಿಕೊಂಡು ಹೊಸ ತಂತ್ರಜ್ಞಾನದ ಮೂಲಕ ಪ್ರಪಂಚದ ಯಾವುದೋ ಮೂಲೆಯಲ್ಲಿ ಕುಳಿತು ಮತ್ತೊಂದು ಭಾಗದಲ್ಲಿ ಕನ್ನ ಹಾಕುತ್ತಿದ್ದಾರೆ. ಇದರಿಂದ ಪ್ರತಿ ವರ್ಷವೂ ಸೈಬರ್ ಪ್ರಕರಣಗಳು ದುಪ್ಪಟ್ಟಾಗಿವೆ.

ಯುವಕ-ಯುವತಿಯರು ಸೇರಿದಂತೆ ಎಲ್ಲಾ ವಯೋಮಾನದವರು ತಮ್ಮ ಆಸೆ-ಅಭಿಲಾಷೆಗಳಿಗಾಗಿ ಸಾಮಾಜಿಕ ಜಾಲತಾಣದಲ್ಲಿ ಮುಳುಗಿದ್ದು, ಇದರ ಮೂಲಕ ತಮ್ಮ ಸಂತೋಷ, ದುಃಖ ಸೇರಿದಂತೆ ಜೀವನದ ಪ್ರತಿಯೊಂದು ಕ್ಷಣವನ್ನು ಹಂಚಿಕೊಳ್ಳುತ್ತಿರುವುದಲ್ಲದೆ, ಆನ್‌ಲೈನ್ ಮೂಲಕ ಹಣ ರವಾನೆ ಮಾಡುವುದು, ವಿದ್ಯುತ್, ಟೆಲಿಫೋನ್, ನೀರಿನ ಬಿಲ್ ಕಟ್ಟುವುದು, ಜೊತೆಗೆ ಶಾಪಿಂಗ್ ಮಾಡುವುದನ್ನು ಅಭ್ಯಾಸ ಮಾಡಿಕೊಂಡಿದ್ದಾರೆ. ಅದರಲ್ಲೂ ಇಂದಿನ ತಂತ್ರಜ್ಞಾನ ಯುಗದಲ್ಲಿ ಪುಟ್ಟ ಪೆಟ್ಟಿಗೆ ಅಂಗಡಿಯಲ್ಲಿಯೂ ಕ್ಯೂಆರ್ ಕೋಡ್ ಬಳಸಿ ಹಣ ಪಾವತಿ ಮಾಡುವ ಸ್ಥಿತಿ ವಿಶ್ವದಾದ್ಯಂತ ನಿರ್ಮಾಣವಾಗಿದೆ.

ಐದೇ ದಿನಕ್ಕೆ 45 ಪ್ರಕರಣ

ತಂತ್ರಜ್ಞಾನ ಹೆಚ್ಚಾದಂತೆ ಅದರಿಂದ ನಾನಾ ಗಂಡಾಂತರಗಳು ಹೆಚ್ಚಾಗಿವೆ. ಮೈಸೂರು ಸೈಬರ್, ಆರ್ಥಿಕ ಮತ್ತು ಮಾದಕ ದ್ರವ್ಯ ಅಪರಾಧ ಪೊಲೀಸ್ ಠಾಣೆಯಲ್ಲಿ 2021ರಲ್ಲಿ 1200 ಸೈಬರ್ ಪ್ರಕರಣಗಳು ದಾಖಲಾಗಿದ್ದು, 2022ರಲ್ಲಿ ಪ್ರಕರಣಗಳ ಸಂಖ್ಯೆ ಎರಡು ಪಟ್ಟು ಹೆಚ್ಚಾಗಿವೆ. ಅದರಂತೆ 2700ಕ್ಕೂ ಅಧಿಕ ಪ್ರಕರಣಗಳು ದಾಖಲಾಗಿದ್ದು, ಇದರಲ್ಲಿ 285 ಪ್ರಕರಣಗಳಿಗೆ ಎಫ್‌ಐಆರ್ ಹಾಕಲಾಗಿದೆ. ಬರೋಬ್ಬರಿ 96,85,984 ರೂ. ಹಣ ಜಪ್ತಿಯಾಗಿ, ಸಂಬಂಧಿಸಿದವರ ಕೈ ಸೇರಿದೆ. 2023 ಆರಂಭವಾಗಿ ಕೇವಲ ಐದು ದಿನಗಳಾಗಿದ್ದು, ಈಗಾಗಲೇ 45 ಪ್ರಕರಣಗಳು ದಾಖಲಾಗಿವೆ. ಬಹುತೇಕ ಪ್ರಕರಣಗಳಲ್ಲಿ ಭಾಗಿಯಾಗಿರುವ ಖದೀಮರು ದೆಹಲಿ, ಗುಜರಾತ್, ಹಿಮಾಚಲ ಪ್ರದೇಶ ಸೇರಿದಂತೆ ಉತ್ತರ ಭಾರತದವರಾಗಿದ್ದು, ಕರ್ನಾಟಕಕ್ಕೆ ಬೆಂಗಳೂರು ಪ್ರಮುಖ ಹಬ್ ಆಗಿದೆ.

ಇನ್ಸ್ಟಾಗ್ರಾಮ್ ಮೂಲ ದಾರಿ

ತಂತ್ರಜ್ಞಾನವನ್ನು ದುರುಪಯೋಗಪಡಿಸಿ ಕೊಳ್ಳುತ್ತಿರುವ ಖದೀಮರು, ಕಾಲಕ್ಕೆ ತಕ್ಕಂತೆ ಹೊಸ ತಂತ್ರಜ್ಞಾನ ಅಳವಡಿಸಿಕೊಂಡಿದ್ದು, ಯುವ ಸಮೂಹ ಹೆಚ್ಚು ಬಳಸುವ ಇನ್ಸ್ಟಾಗ್ರಾಮ್, ಫೇಸ್‌ಬುಕ್‌ಗಳನ್ನು ಟಾರ್ಗೆಟ್ ಮಾಡಿಕೊಂಡಿದ್ದಾರೆ. ಅದರಲ್ಲೂ ಇನ್ಸ್ಟಾಗ್ರಾಮ್ ಫೇಸ್‌ಬುಕ್ ಪ್ರೊಫೈಲ್‌ಗಳನ್ನು ಹ್ಯಾಕ್ ಮಾಡಿ ಅವರ ಸ್ನೇಹಿತರಿಗೆ 'ನಾನು ಸಂಕಷ್ಟದಲ್ಲಿದ್ದೇನೆ, ನನಗೆ ಹಣದ ಸಹಾಯ ಮಾಡಿ' ಎಂಬ ಸಂದೇಶಗಳನ್ನು ಕಳುಹಿಸಿ, ಹಣ ಮಾಡುವ ಮೋಸದ ಜಾಲ ವ್ಯಾಪಕಗೊಳ್ಳುತ್ತಿದೆ.

ಲೋನ್ ಆ್ಯಪ್‌ಗಳ ಚಿತ್ರಹಿಂಸೆ

ಇತ್ತೀಚೆಗೆ ಇಡೀ ದೇಶದಾದ್ಯಂತ ಅಂದರೆ, ಆ್ಯಪ್‌ಗಳ ಮೂಲಕ ಲೋನ್ ಪಡೆದವರಿಗೆ ಮಾನಸಿಕ ಹಿಂಸೆ ನೀಡುವುದು ಹೆಚ್ಚಳವಾಗಿದೆ. ಸಣ್ಣ ಪುಟ್ಟ ಸಮಸ್ಯೆಗಳಿಗಾಗಿ ಲೋನ್ ಪಡೆದುಕೊಂಡವರಿಗೆ ಮರುಪಾವತಿ ಸ್ವಲ್ಪ ಹೆಚ್ಚು-ಕಡಿಮೆ ಆದರೆ ಮುಗಿಯಿತು. ಚಿತ್ರಹಿಂಸೆ ಅನುಭವಿಸಬೇಕಾಗುತ್ತದೆ. ಲೋನ್ ನೀಡಿದ ಸಂಸ್ಥೆಯವರು ಆರಂಭದಲ್ಲಿ ಮೆಸೇಜ್ ಮಾಡಿ ಬೆದರಿಕೆ ಹಾಕುವುದು, ನಂತರ ಅವರ ಮೊಬೈಲ್‌ನಲ್ಲಿರುವ ಸಂಬಂಧಿಕರಿಗೆ ಕರೆ ಮಾಡಿ ಲೋನ್ ಪಡೆದವರ ಬಗ್ಗೆ ಅವಾಚ್ಯ ಶಬ್ದಗಳಿಂದ ನಿಂದಿಸುವುದು, ಹೀನಮಾನವಾಗಿ ಅವರ ಮಾನ ಹರಾಜು ಹಾಕುವುದು. ಹಾಗೇ ಅವರ ಫೋಟೋಗಳನ್ನು ಅಶ್ಲೀಲ ರೀತಿ ತಂತ್ರಜ್ಞಾನದ ಮೂಲಕ ಮಾರ್ಫಾಡು ಮಾಡಿ, ಮಾನಸಿಕ ಚಿತ್ರಹಿಂಸೆ ನೀಡುವುದು ಹೆಚ್ಚಾಗಿತ್ತು. ಇದಕ್ಕೆ ಸರ್ಕಾರ ಮತ್ತು ಪೊಲೀಸ್ ಇಲಾಖೆ ಕಡಿವಾಣ ಹಾಕಿದ ನಂತರ ಈ ರಣ ಹಾವಳಿ ಸ್ವಲ್ಪ ಕಡಿಮೆ ಆಗಿದೆ.



“ಸಾಮಾನ್ಯವಾಗಿ ಇತರೆ ವಂಚನೆ ಪ್ರಕರಣಗಳಿಗಿಂತ ಆನ್‌ಲೈನ್ ವಂಚನೆ ಪ್ರಕರಣಗಳು ತೀರಾ ಭಿನ್ನವಾಗಿವೆ. ಇತ್ತೀಚಿನ ವರ್ಷಗಳಲ್ಲಿ ಆನ್‌ಲೈನ್ ಅಪರಾಧಗಳ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದೆ. ಇವುಗಳನ್ನು ತ್ವರಿತಗತಿಯಲ್ಲಿ ಪತ್ತೆ ಹಚ್ಚಿ ಸಂತ್ರಸ್ತರಿಗೆ ಪರಿಹಾರ ಕಲ್ಪಿಸಲು ಸೈಬರ್ ಕ್ರೈಂ ಪೊಲೀಸ್ ಠಾಣೆಗಳು ಕಾರ್ಯನಿರತವಾಗಿವೆ. ಇವುಗಳಿಗೆ ಎಷ್ಟು ಬೇಗ ಮಾಹಿತಿ ಲಭ್ಯವಾಗುತ್ತದೋ ತನಿಖೆಗೆ ಅಷ್ಟು ಅನುಕೂಲಕಾರಿ. ಮೈಸೂರಿನ ಸೈಬರ್ ಕ್ರೈಂ ಠಾಣೆಯಲ್ಲಿ ನೂತನ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಪ್ರಕರಣಗಳನ್ನು ಭೇದಿಸಲಾಗುತ್ತಿದೆ. ಪ್ರಕರಣಗಳ ಸಂಖ್ಯೆಗೆ ಅನುಗುಣವಾಗಿ ಸಿಬ್ಬಂದಿ ಕೊರತೆ ಇದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ಸಿಬ್ಬಂದಿಗಳನ್ನು ಸೇರ್ಪಡೆ ಮಾಡಿಕೊಂಡು ಪ್ರಕರಣಗಳನ್ನು ತ್ವರಿತವಾಗಿ ಬಗೆಹರಿಸಲಾಗುವುದು. ಇಲಾಖೆ ವತಿಯಿಂದ ವಿವಿಧ ರೀತಿಯಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಅದಕ್ಕೆ ಜನರ ಸಹಕಾರ ಬಹಳ ಮುಖ್ಯ. ಸೈಬರ್ ವಂಚನೆಗೆ ಸಂಬಂಧಿಸಿದಂತೆ ಸಾರ್ವಜನಿಕರು ತಕ್ಷಣ 1930ಕ್ಕೆ ಕರೆ ಮಾಡಿದರೆ, ಅವರನ್ನು ವಂಚನೆಯಿಂದ ತಪ್ಪಿಸಲು ಸಹಕಾರಿಯಾಗಲಿದೆ.

– ಬಿ.ರಮೇಶ್, ಆಯುಕ್ತ, ನಗರ ಪೊಲೀಸ್



ನಿವೃತ್ತರೇ ಟಾರ್ಗೆಟ್

ಇತ್ತೀಚಿನ ದಿನಗಳಲ್ಲಿ ಮತ್ತೊಂದು ಆನ್‌ಲೈನ್ ಕಳ್ಳ ದಂಧೆ ಆರಂಭವಾಗಿದೆ. ಇದರಲ್ಲಿ ನಿವೃತ್ತರೇ ಟಾರ್ಗೆಟ್. ನಿವೃತ್ತ ವಯೋವೃದ್ಧರನ್ನು ಗುರಿ ಮಾಡಿಕೊಂಡು ಅವರ ಮೊಬೈಲ್‌ಗೆ ಬ್ಯಾಂಕಿನಿಂದ ಬಂದ ಸಂದೇಶದಂತೆ ನಿಮ್ಮ ಕೆವೈಸಿ ಅಪ್‌ಡೇಟ್ ಮಾಡಿಕೊಳ್ಳಿ. ನಿಮ್ಮ ವಿದ್ಯುತ್ ಬಿಲ್ ಬಾಕಿ ಇದ್ದು, ಈ ಲಿಂಕ್ ಮೇಲೆ ಕ್ಲಿಕ್ ಮಾಡಿ, ಸುಲಭ ರೀತಿ ಪಾವತಿಸಿ ಇತ್ಯಾದಿ ಸಂದೇಶಗಳನ್ನು ಕಳುಹಿಸಿ, ಅವರು ಆ ಲಿಂಕ್ ಕ್ಲಿಕ್ ಮಾಡಿದ ತಕ್ಷಣ ಅವರ ಖಾತೆಯಿಂದ ಹಣ ದೋಚುತ್ತಿದ್ದಾರೆ. ಕೆಲವರು ಸುಲಭ ಮಾರ್ಗದಲ್ಲಿ ಹಣ ಗಳಿಸುವ ಮಾರ್ಗಕ್ಕಾಗಿ ಕ್ರಿಪ್ಟೋ ಕರೆನ್ಸಿ ಮೇಲೆ ಹಣ ಹೂಡಿಕೆ ಮಾಡುತ್ತಿದ್ದು, ಆರಂಭದಲ್ಲಿ ಅವರಿಗೆ ಲಾಭವಾಗುವಂತೆ ಹೆಚ್ಚಿನ ಆಮಿಷ ತೋರಿ ತದನಂತರ ಹೆಚ್ಚು ಹಣ ಹೂಡಿಕೆ ಮಾಡುವ ಸಂದರ್ಭದಲ್ಲಿ ಕನ್ನ ಹಾಕುವ ಮಾರ್ಗವನ್ನು ಅನುಸರಿಸಿದ್ದಾರೆ.

ವಿಡಿಯೋ ಬ್ಲಾಕ್‌ಮೇಲ್

ಅನಾಮಧೇಯ ನಂಬರ್ ಮೂಲಕ ಯುವಕರು, ಮಧ್ಯ ವಯಸ್ಕರಿಗೆ ಬಲೆ ಬೀಸುವ ಮಹಿಳೆಯರು ವಾಟ್ಸ್‌ಅಪ್ ಚಾಟಿಂಗ್ ಆರಂಭಿಸಿ, ಬಲೆಗೆ ಬೀಳಿಸಿಕೊಂಡು, ನಂತರ ನಗ್ನ, ಅರೆ ನಗ್ನ ಫೋಟೋಗಳನ್ನು ಕಳುಹಿಸುವ ಮೂಲಕ ಅವರನ್ನು ತಮ್ಮ ಮಾಯಾಜಾಲಕ್ಕೆ ಬೀಳಿಸಿಕೊಳ್ಳುತ್ತಾರೆ. ಅವರು ವಿಡಿಯೋ ಕಾಲ್‌ನಲ್ಲಿ ಮಾತನಾಡುವಂತೆ ಪ್ರೇರೇಪಿಸಿ, ತಮ್ಮ ಮೈಮಾಟ ಪ್ರದರ್ಶಿಸಿ, ಅದನ್ನೆಲ್ಲಾ ವಿಡಿಯೋ ರೆಕಾರ್ಡ್ ಮಾಡಿ ತಂತ್ರಜ್ಞಾನ ಬಳಸಿ ಅವರೊಂದಿಗೆ ಸಂಪರ್ಕ ಹೊಂದಿರುವಂತೆ ಸನ್ನಿವೇಶ ಸೃಷ್ಟಿಸಿ, ಬ್ಲಾಕ್‌ಮೇಲ್ ಮಾಡಿ ಲಕ್ಷ ಲಕ್ಷ ಹಣ ಪೀಕುವ ಮಹಾಜಾಲವೇ ಸೃಷ್ಟಿಯಾಗಿದೆ. ಇತ್ತೀಚೆಗೆ ಮೈಸೂರಿನ ಪಿರಿಯಾಪಟ್ಟಣದ ಓರ್ವ ಮಹಿಳೆಯನ್ನು ಪೊಲೀಸರು ಈ ರೀತಿಯ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿಸಿದ ಉದಾಹರಣೆಯೂ ಇದೆ.


ಮಕ್ಕಳ ಚಿತ್ರಕಥೆ

'ಕಲಾಂರವರು ಕನಸನ್ನು ನನಸಾಗಿಸಿಕೊಂಡದ್ದು...!'

–ಹೆಚ್.ಜಿ.ಎನ್.ಪ್ರಸಾದ್, ಮೊ: 9845376199



ನನಗೆ ಆಗ 23 ವರ್ಷ ವಯಸ್ಸಾಗಿತ್ತು. ನಾನು ಯುದ್ಧ ವಿಮಾನದ ಪೈಲಟ್ ಆಗಬೇಕೆಂಬ ಕನಸು (ಆಸೆ) ಇಟ್ಟುಕೊಂಡಿದ್ದೆ.



ಅದಕ್ಕಾಗಿ ನಾನು ಏರೋನಾಟಿಕಲ್ ಎಂಜಿನಿಯರಿಂಗ್ ಓದಿ ಮುಗಿಸಿದೆ. ಪೈಲಟ್ ಆಗಲೇಬೇಕೆಂದು ಕನಸನ್ನು ಹೊತ್ತು ಭಾರತೀಯ ವಾಯು ಪಡೆಗೆ ಸೇರಲು ಹೋದೆ. ಆದರೆ ಅಲ್ಲಿ ನಾನು ಆಯ್ಕೆಯಾಗಲಿಲ್ಲ.




10 ಜನ ಮಾತ್ರ ಆಯ್ಕೆಯಾಗಬಹುದಾದ ಆ ಸಂದರ್ಭದಲ್ಲಿ, ನಾನು 10ನೆಯವನಾಗಿದ್ದೆ.ಆದರೆ ಅಂದು ಕೇವಲ 9 ಸ್ಥಾನಗಳಿಗೆ ತರಬೇತಿ ನೀಡುವಂತೆ ನಿರ್ಧರಿಸಿಬಿಟ್ಟಿದ್ದರು. ಹಾಗಾಗಿ ನಾನು ಆಯ್ಕೆಯಿಂದ ಹೊರಬರಬೇಕಾಯಿತು.



ಮುಂದೆ ನಾನು ರಾಷ್ಟ್ರಪತಿಯಾದಾಗ, ಸೈನ್ಯದ ಸರ್ವೋಚ್ಚ ನಾಯಕನಾದೆ. ಆನಂತರ ನಾನು ವಾಯುಪಡೆಯ ಮುಖ್ಯಸ್ಥನಿಗೆ ನನಗೂ ವಿಮಾನ ಚಾಲನೆ ತರಬೇತಿಯನ್ನು ನೀಡುವಿರಾ ಎಂದು ಕೇಳಿದೆ.




ಆಗ ಆ ಮುಖ್ಯಸ್ಥ ಒಪ್ಪಿ, 6 ತಿಂಗಳ ಕಾಲ ತರಬೇತಿ ನೀಡಿದ.



ಆನಂತರ ನಾನು ಸು–30 ಯುದ್ಧವಿಮಾನ ಚಲಿಸಿ, ನನ್ನ ಆಸೆ ಪೂರೈಸಿಕೊಂಡೆ.

ನೀತಿ:– ಈ ಪ್ರಸಂಗ ಹೇಳಿಕೊಂಡ ನಂತರ ಕಲಾಂರವರೇ ವಿದ್ಯಾರ್ಥಿಗಳಿಗೆ ಹೇಳಿದ್ದು ಹೀಗೆ, ಕನಸು (ಗುರಿ,ಆಸೆ) ಆಲೋಚನೆಗಳಿಗೆ ಕಾರಣವಾಗುತ್ತವೆ. ಆಲೋಚನೆಗಳು ಕ್ರಿಯೆಗೆ ಕಾರಣವಾಗುತ್ತದೆ.



ವಾರಭವಿಷ್ಯ

8.01.2023 ರಿಂದ 14.01.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ಧನುಸ್ಸು, ಚಂದ್ರ–ಕಟಕ, ಸಿಂಹ, ಕನ್ಯಾ, ಕುಜ, ವೃಷಭ, ಬುಧ–ಧನುಸ್ಸು, ಗುರು–ಮೀನ, ಶುಕ್ರ–ಮಕರ, ಶನಿ–ಮಕರ, ರಾಹು–ಮೇಷ ಮತ್ತು ಕೇತು–ತುಲಾ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ' 'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು', ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ,
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು
ಮೊ: 9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಈ ವಾರದಲ್ಲಿ ಧನಾದಾಯ ಮತ್ತು ಖರ್ಚು ಸಮಸಮವಾಗಿರುವುದು. ಬಂಧು ಬಾಂಧವರೊಡಗೂಡಿ ಸಂತೋಷವಾಗಿರುವಿರಿ. ಕ್ಲಿಷ್ಟ ಸಮಸ್ಯೆಯೊಂದಕ್ಕೆ ಹಿರಿಯರ ಮಾರ್ಗದರ್ಶನ ದೊರೆತು ಪರಿಹಾರ ಕಂಡುಕೊಳ್ಳುವಿರಿ. ಜನ್ಮಸ್ಥ ರಾಹು ಇರುವ ಕಾರಣ ಮನೆಯಲ್ಲಿ ಮೌನದಿಂದಿದ್ದರೆ ಕಲಹಗಳು ಉಂಟಾಗದು. ಅನ್ಯಥಾ ನಿಷ್ಠೂರದ ಮಾತು ಕೇಳಬೇಕಾದೀತು. ವಾರಾಂತ್ಯಕ್ಕೆ ಜ್ಯೋತಿಷಿಗಳ ಭೇಟಿಯಿಂದ ಒಳಿತು.
ಶ್ರೀ ಗಣೇಶ ಸ್ತುತಿ. ಶುಭ ಸಂಖ್ಯೆ–1.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಮುಂಬರುವ ದಿನಗಳಲ್ಲಿ ಜೀವನದಲ್ಲಿ ಉಂಟಾಗುವ ಬದಲಾವಣೆಗಳಿಗೆ ಸಿದ್ಧರಾಗಿರಿ. ಬೇರೆಯವರನ್ನು ನಂಬಿ ಯೋಜನೆಗಳನ್ನು ರೂಪಿಸಬೇಡಿ. ಹಣಕಾಸು ಸಂಸ್ಥೆಗಳಿಂದ ಆರ್ಥಿಕ ನೆರವು ದೊರೆಯುವುದು. ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಕಡೆ ಗಮನಕೊಡದೆ, ಅತೀ ನಿರೀಕ್ಷೆ ಇಟ್ಟುಕೊಂಡಲ್ಲಿ ನಿರಾಶೆಯೇ ಆಗುವುದು. ಸತಿ–ಪತಿಯರಲ್ಲಿ ಒಮ್ಮತವಿರಲಿ. ಹುಲ್ಲುಕಡ್ಡಿಯನ್ನು ಬೆಟ್ಟ ಮಾಡುವುದು ಬೇಡ. ಅಜೀರ್ಣ ಸಂಬಂಧಿ ಕಾಯಿಲೆ ಕಾಡಬಹುದು.
ಶ್ರೀ ತ್ರಿಪುರ ಸುಂದರೀ ಉಪಾಸನೆ. ಶುಭ ಸಂಖ್ಯೆ–9.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಶ್ರೇಷ್ಠ ಸಂಕಲ್ಪಗಳು ಸಿದ್ಧಿಸುವ ಸಮಯ ಬಂದಿದೆ. ಬಹಳ ಸಮಯದ ನಂತರ ಸಂತಾನದ ನಿರೀಕ್ಷೆಯಲ್ಲಿದ್ದವರಿಗೆ ಸಿಹಿ ಸುದ್ದಿ ಬಂದೀತು. ಬಂಧು–ಮಿತ್ರರೊಂದಿಗೆ ಸಂತೋಷದಲ್ಲಿ ಸಮಯ ಹೋಗುವುದು. ವೈಯಕ್ತಿಕ ಕೆಲಸ ಕಾರ್ಯಗಳಲ್ಲಿ ಪ್ರಾರಂಭದಲ್ಲಿ ಉಂಟಾಗಿದ್ದ ವಿಘ್ನಗಳು ನಿವಾರಣೆಯಾಗಿ ಯಶಸ್ಸನ್ನು ಸಾಧಿಸಲಿದ್ದೀರಿ. ಸರ್ಕಾರಿ ನೌಕರರಿಗೆ ತನಿಖಾ ಸಂಸ್ಥೆಗಳ ಬಿಸಿ ಮುಟ್ಟುವುದು.
ಶ್ರೀ ಕುಲದೇವತಾ ದರ್ಶನ. ಶುಭ ಸಂಖ್ಯೆ–2.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ)

ವಾರದಾರಂಭಕ್ಕೆ ಹಲವು ಮೂಲಗಳಿಂದ ಧನಾಗಮ. ಸತಿಯ ಸಾಂಗತ್ಯದಲ್ಲಿ ಮುದ ದೊರಕುವುದು. ಪುತ್ರರ ಸಾಧನೆಯಿಂದ ಹೆಮ್ಮೆ ಪಡುವಿರಿ. ಆಸ್ತಿ–ಪಾಸ್ತಿ ಹೊಂದಲು ಗುರು ಬಲವಿದೆ. ವಧು–ವರ ಅನ್ವೇಷಣೆ ಮುಂದುವರೆಯಲಿ, ಧನುರ್ಮಾಸ ಅಡ್ಡ ಬರದು. ವ್ಯಯ ಸ್ಥಾನದಲ್ಲಿರುವ ಕೇತು ಎಡವಟ್ಟು ನಿರ್ಣಯಗಳಿಗೆ ಪ್ರೇರೇಪಿಸಬಹುದು. ನ್ಯಾಯಾಲಯದ ವಿಷಯಗಳು ನಿಮ್ಮ ಪರವಾಗಿ ಬರಬಹುದು. ಆರೋಗ್ಯ ಅಷ್ಟಕಷ್ಟೆ.
ಶ್ರೀ ನೃಸಿಂಹ ಸ್ತುತಿ. ಶುಭ ಸಂಖ್ಯೆ–5.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ವಾರದಾರಂಭಕ್ಕೆ ಮಿತ್ರ ವೃಂದದವರ ಪ್ರಶಂಸೆಗೆ ಪಾತ್ರರಾಗುವಿರಿ. ಸರ್ಕಾರಿ ನೌಕರರಿಗೆ ಜವಾಬ್ದಾರಿಗಳು ಹೆಚ್ಚುವುದು. ಪ್ರಯಾಣಗಳು ಲಾಭಪ್ರದವೆನಿಸಿದರೂ ದೇಹಾಯಾಸ ತಪ್ಪಿದ್ದಲ್ಲ. ದೇಹದಲ್ಲೂ, ಮನಸ್ಸಿನಲ್ಲೂ ಜಢತೆ ಕಾಣಿಸುತ್ತದೆ. ವಾಮಮಾರ್ಗಗಳಿಂದ ಹಣ ಸಂಪಾದನೆ ಆಗುವುದು. ಆದರೆ ಅದು ಅಪಮಾರ್ಗದಲ್ಲಿ ವ್ಯಯವಾಗುವುದು. ಏಜೆನ್ಸಿ ವ್ಯಾಪಾರಿಗಳಿಗೆ ಉತ್ತಮ ಆದಾಯವಿದೆ. ಸಟ್ಟಾ, ಜೂಜುಗಳು ಬೇಡ.
ಶ್ರೀ ಶ್ರೀನಿವಾಸ–ಪದ್ಮಾವತೀ ದರ್ಶನ. ಶುಭ ಸಂಖ್ಯೆ–8.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ನಡೆಯಬೇಕಿದ್ದ ಕಾರ್ಯ ಕಲಾಪಗಳು ಅಲ್ಲಲ್ಲೇ ನಿಂತು ಮನಸ್ಸಿಗೆ ಬೇಸರ. ಆದಾಯ–ವ್ಯಯಗಳನ್ನು ಸರಿದೂಗಿಸಲು ಪರದಾಡುವಿರಿ. ಸ್ಥಿರಾಸ್ತಿ ವಿಲೇವಾರಿ ವಿಷಯಗಳಲ್ಲಿ ಲಾಭವನ್ನು ನಿರೀಕ್ಷಿಸಲಾಗದು. ಸರ್ಕಾರಿ ನೌಕರರು ಕಾನೂನುಬಾಹಿರ ಕೃತ್ಯವೆಸಗಿ ತೊಂದರೆ ಪಡುವರು. ವಾರದ ಕಡೆಗೆ ಸತ್ಕರ್ಮಾಚರಣೆಯಿಂದ ಧನ್ಯತೆಯ ಭಾವ. ಧರ್ಮಕ್ಷೇತ್ರಕ್ಕೆ ಭೇಟಿ ಹಾಗೂ ಪುಣ್ಯನದಿ ಸ್ನಾನ ಮನಃಶಾಂತಿಗೆ ಹೇತುವಾಗುವುದು.
ಶ್ರೀ ಮೃತ್ಯುಂಜಯ ಮಂತ್ರ ಜಪಿಸಿ. ಶುಭ ಸಂಖ್ಯೆ–3.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ನಿಮ್ಮ ವೈಯಕ್ತಿಕ ಪ್ರಭಾವದಿಂದ ಕೆಲಸ ಕಾರ್ಯಗಳು ಮುನ್ನಡೆಯುವುದು. ಬಿಲ್ಡಿಂಗ್ ಕಂಟ್ರಾಕ್ಟರುಗಳಿಗೆ ಹೊಸ ಯೋಜನೆಗಳು ದೊರೆಯುತ್ತವೆ. ವಿದ್ಯಾರ್ಥಿಗಳಿಗೆ ಕ್ಯಾಂಪಸ್ ಸೆಲೆಕ್ಷನ್‌ಗೆ ಅವಕಾಶವಿದೆ. ವಿವಾಹಯೋಗ್ಯರಿಗೆ ಸೂಕ್ತ ವಧು–ವರರು ದೊರೆಯುವ ಸಾಧ್ಯತೆ ಇದೆ. ತೀರ್ಥಯಾತ್ರೆ ಮಾಡಲು ತುಂಬಾ ದಿನದ ಬಯಕೆ ಇದ್ದರೆ ಈ ಧನುರ್ಮಾಸ ಸೂಕ್ತವಾಗಿದೆ. ಸಂಧಿವಾತ, ನರದೌರ್ಬಲ್ಯ ಕಾಡಬಹುದು. ಸೂಕ್ತ ವೈದ್ಯಕೀಯ ಸಲಹೆ ಪಡೆಯಿರಿ.
ಶ್ರೀ ದೇವೀ ಸ್ತುತಿ. ಶುಭ ಸಂಖ್ಯೆ–4.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ಸಪ್ತಾಹದ ಆದಿಗೆ ಅನಿರೀಕ್ಷಿತ ಖರ್ಚುಗಳು ಎದುರಾಗುವುದು. ಪ್ರತಿಫಲವಿಲ್ಲದ ತಿರುಗಾಟಗಳಿಂದ ದೇಹ ಬಳಲುವುದು. ಮನೆಯಲ್ಲಿ ಹಿರಿಯರೊಬ್ಬರ ಆರೋಗ್ಯದಲ್ಲಿ ಏರು–ಪೇರು ಉಂಟಾದೀತು. ವಾರದ ಉತ್ತರಾರ್ಧದಲ್ಲಿ ಚಂದ್ರ ಸಂಚಾರದ ಶುಭ ಫಲದ ನೆರವಿನಿಂದ, ಸ್ಥಾನಮಾನ ಗೌರವಗಳು ಪ್ರಾಪ್ತಿ. ಎಣ್ಣೆ ಧಾನ್ಯ ವ್ಯಾಪಾರದಲ್ಲಿ ಹೆಚ್ಚಿನ ಧನಲಾಭ. ಗೃಹದಲ್ಲಿ ಹರುಷದ ವಾತಾವರಣ. ಅನ್ಯರಿಂದ ಪ್ರೇರಿತರಾಗಿ ನ್ಯಾಯಮಾರ್ಗ ಬಿಡಬೇಡಿ. ಶ್ರೀ ಸುದರ್ಶನ ಚಕ್ರ ಮಂತ್ರ ಪಠಿಸಿ. ಶುಭ ಸಂಖ್ಯೆ–7.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ವಾರದಾರಂಭಕ್ಕೆ ವಾದ–ವಿವಾದಗಳಿಂದ ಪ್ರಯೋಜನವಾಗದು. ಅದರಿಂದ ದೂರವಿದ್ದರೆ ಒಳ್ಳೆಯದು. ಮನೆ ಮಂದಿಯೊಂದಿಗೆ ಮನಸ್ತಾಪವಾಗುವುದು. ಬಂದ ಹಣಕ್ಕೆ ನೂರಾರು ಖರ್ಚಿನ ದಾರಿಗಳು. ಸರ್ಕಾರಿ ಅಧಿಕಾರಿಗಳು ಅಕ್ರಮವೆಸಗಿ ಸಂಕಷ್ಟಕ್ಕೆ ಗುರಿಯಾಗುವರು. ವಾರದ ಕಡೆಗೆ ಚಂದ್ರನ ಶುಭ ಸಂಚಾರದಿಂದ ಮನಸ್ಸಿಗೆ ಮುದ ನೀಡುವ ಪ್ರಸಂಗಗಳು ನಡೆದು, ಮನೆಯಲ್ಲಿ ಹರುಷ ನೆಮ್ಮದಿಗಳನ್ನು ಕಾಣುವಿರಿ.
ಶ್ರೀ ಆದಿತ್ಯ ಹೃದಯ ಪಠಿಸಿ. ಶುಭ ಸಂಖ್ಯೆ–6.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

'ಬಂದದ್ದೆಲ್ಲಾ ಬರಲಿ ಗೋವಿಂದನ ದಯೆ ಇರಲಿ' ಎಂಬ ಭಾವನೆಯಿಂದ ಮುಂದೆ ಸಾಗಿ. ಉನ್ನತಾಧಿಕಾರಿಗಳು ಹಾಗೂ ಮಠಾಧಿಪತಿಗಳ ಸಂಪರ್ಕದಿಂದ ಗಹನವಾದ ಕಾರ್ಯಗಳು ಕೈಗೂಡಲಿದೆ. ವ್ಯಯಸ್ಥ ಶನಿದೇವನ ಕಾರಣ ಕಚೇರಿ ಕೆಲಸಗಳು ನಿಮ್ಮ ಮನಸ್ಸಿಗೆ ವಿರುದ್ಧವಾಗಿ ನಡೆಯುವುದು. ಅನ್ಯರ ದೋಷಾರೋಪಗಳಿಗೂ ಗುರಿಯಾಗುವಿರಿ. ಗುರು ಶುಭನಿರುವುದರಿಂದ ವಿವಾಹಾಕಾಂಕ್ಷಿಗಳಿಗೆ ಶುಭ ಸುದ್ದಿ ದೊರೆತು ಸಂತೋಷ. ಶ್ರೀ ಪದ್ಮಾವತೀ, ಶ್ರೀನಿವಾಸ ದರ್ಶನ. ಶುಭ ಸಂಖ್ಯೆ–5.

ಕನ್ಯಾ (ಟೊ.ಪ.ಪಿ.ಪು.ಫ.ಣ.ಠ.ಪೆ.ಪೊ)

ವಾರದಾರಂಭಕ್ಕೆ ಮನೆಯಲ್ಲಿ ಸಂತೋಷದ ವಾತಾವರಣ. ನಿರೀಕ್ಷೆಯಂತೆ ಧನಾಗಮ ಆಗುವುದರಿಂದ ಮುಂಗಡ, ಸಾಲಗಳನ್ನು ಮಾಡಬೇಕಾದ ಅಗತ್ಯವಿರದು. ಕುಟುಂಬದಲ್ಲಿ ಉಂಟಾಗುವ ಮನಸ್ತಾಪಗಳನ್ನು ಮನೆಯಲ್ಲೇ ಬಗೆಹರಿಸಿಕೊಳ್ಳಿ. ಗುರು ಬಲದ ಜೊತೆಗೆ ನೀವು ಮಾಡುವ ಯಾವುದೇ ಕೆಲಸವನ್ನು ಪ್ರಾಮಾಣಿಕತೆಯಿಂದ ಮಾಡಿದಲ್ಲಿ ಶುಭ ಫಲ ದೊರೆಯುವುದು. ವಾಹನದಲ್ಲಿ ಅನಗತ್ಯವಾಗಿ ಸುತ್ತಾಡುತ್ತಿರಬೇಡಿ.
ಶ್ರೀ ವಿಷ್ಣು ಆರಾಧನೆ. ಶುಭ ಸಂಖ್ಯೆ–5.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ಕೈಗೊಂಡ ಕೆಲಸ ಕಾರ್ಯಗಳು ನಿಧಾನವಾಗಿಯಾದರೂ ಮನಸ್ಸಿನಂತೆ ಫಲಿಸಿ ಸಂತೋಷ. ವಾಹನ ಖರೀದಿಯ ಬಗ್ಗೆ ಯೋಚಿಸಿದ್ದರೆ ಬಯಕೆ ಈಡೇರುವುದು. ಮನೆಯಲ್ಲಿ ಮನಸ್ತಾಪಗಳ ನಿವಾರಣೆಯಾಗಿ ಮನಸ್ಸಿಗೆ ಹರ್ಷ, ಧನಾದಾಯ ಚೆನ್ನಾಗಿದೆ. ಆದರೆ ಅದಕ್ಕೆ ತಕ್ಕಂತೆ ಖರ್ಚುಗಳೂ ಬರುವುದು. ವಯಸ್ಸಿಗೆ ಬಂದ ಮಕ್ಕಳ ಸಲಹೆಯನ್ನು ಸ್ವೀಕರಿಸಿ ಅಷ್ಟಮ ಕೇತು ಕಾರಣ ಹಲವರು ನಿಮ್ಮನ್ನು ಅನುಮಾನಿಸಿ ನೋಡುವರು. ವಾಯು ಸಂಬಂಧ ಕಾಯಿಲೆ ಕಾಡಿಸುತ್ತೆ –ಶ್ರೀ ಮಂತ್ರಾಲಯ ಪ್ರಭುಗಳ ದರ್ಶನ. ಶುಭ ಸಂಖ್ಯೆ–8.

ಮೈಸೂರು ಮಿತ್ರ ಭಾನುವಾರ 8 ಜನವರಿ 2023

ಅಡಗೂರು ಗ್ರಾಮಸ್ಥರಿಗೆ ಇ–ಸ್ವತ್ತು ನೀಡಲು ಕ್ರಮ

ಜನಸಂಪರ್ಕ ಸಭೆಯಲ್ಲಿ ಶಾಸಕ ಸಾ.ರಾ.ಮಹೇಶ್ ಭರವಸೆ



> ಮಾರಗೌಡನಹಳ್ಳಿಗೆ ಕಾಂಕ್ರೀಟ್ ರಸ್ತೆ, ಸಮುದಾಯ ಭವನ ಮತ್ತು ಗ್ರಾಮದೇವತೆ ದೇವಾಲಯಕ್ಕೆ ಅನುದಾನ, ಮುಖ್ಯರಸ್ತೆ ಡಾಂಬರೀಕರಣ, ಶಾಲಾ ಕೊಠಡಿ, ನಾಲೆ ಆಧುನೀಕರಣ, ಜಲ ಜೀವನ್ ಮಿಷನ್ ಯೋಜನೆಯಡಿ 1.30 ಕೋಟಿ ವೆಚ್ಚದಲ್ಲಿ ಮನೆ ಮನೆಗೆ ಗಂಗೆ, ಅತಿ ಸೂಕ್ಷ್ಮ ಅತಿ ಸೂಕ್ಷ್ಮ ಸಮಾಜದ ಸಮುದಾಯ ಭವನಕ್ಕೆ ಅನುದಾನ ನೀಡಿದ್ದರೂ, ಯಾರೋ ಕಾಂಗ್ರೆಸ್‌ನವರು ಏನೂ ಮಾಡಿಲ್ಲ ಎನ್ನುತ್ತಾರೆ. ಅವರನ್ನು ಕರೆದು ನಿಮ್ಮೂರಿಗೆ ನಾನು ಮಾಡಿರುವ ಅಭಿವೃದ್ಧಿ ಕಾರ್ಯ ತೋರಿಸಿ.
> – ಸಾ.ರಾ.ಮಹೇಶ್, ಶಾಸಕ

ಭೇರ್ಯ, ಜ.7– ಅಡಗೂರು ಗ್ರಾಮ ಸ್ಥಳಾಂತರ ಗ್ರಾಮವಾಗಿದ್ದು, ಇದೀಗ ಕಂದಾಯ ಗ್ರಾಮವನ್ನಾಗಿ ಮಾಡಲಾಗಿದೆ. ಮನೆ ಮತ್ತು ನಿವೇಶನಗಳಿಗೆ ಇ–ಸ್ವತ್ತು ಮಾಡುತ್ತಿಲ್ಲ ಎನ್ನುತ್ತೀರಿ. ಆದ್ದರಿಂದ ಸೋಮವಾರ ಮೈಸೂರಿನಲ್ಲಿ ಸರ್ವೆ ಇಲಾಖೆ ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳ ಸಭೆ ಕರೆದು ಅಡಗೂರು ಗ್ರಾಮಸ್ಥರಿಗೆ ಇ–ಸ್ವತ್ತು ನೀಡಲು ಕ್ರಮ ವಹಿಸಲಾಗುವುದು ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು.

ಕೆಆರ್.ನಗರ ತಾಲೂಕಿನ ಅಡಗೂರು ಗ್ರಾಮ ವ್ಯಾಪ್ತಿಯಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಮಾತನಾಡಿದ ಅವರು, ಅಡಗೂರು ಗ್ರಾಮಕ್ಕೆ ಕಾಂಕ್ರೀಟ್ ರಸ್ತೆ ಸೇರಿದಂತೆ ಹೊಸದಾಗಿ 3 ರಸ್ತೆಗಳಿಗೆ ಅನುದಾನ ನೀಡಲಾಗಿದೆ ಜಲಜೀವನ್ ಮಿಷನ್ ಯೋಜನೆಯಡಿ 88 ಲಕ್ಷ ವೆಚ್ಚದ ಮನೆ ಮನೆಗೆ ಗಂಗೆ ಕುಡಿಯುವ ನೀರು ಮತ್ತು ಟ್ಯಾಂಕ್ ನಿರ್ಮಾಣ, 8.50 ಕೋಟಿ ವೆಚ್ಚದಲ್ಲಿ ಅಡಗೂರು, ಮಾರಗೌಡನಹಳ್ಳಿ, ಗಳಿಗೆಕೆರೆ ಗ್ರಾಮಗಳಿಗೆ ಕಾವೇರಿ ನದಿಯಿಂದ ಶಾಶ್ವತ ಕುಡಿಯುವ ನೀರು ಪೂರೈಕೆ ಯೋಜನೆ ಮಂಜೂರಾಗಿದ್ದು, ಶೀಘ್ರ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದರು.

ಇದಕ್ಕೂ ಮೊದಲು ಕರ್ಗಹಳ್ಳಿ, ದೊಡ್ಡಕೊಪ್ಪಲು ಜನರಿಂದ ಶಾಸಕರು ಅಹವಾಲು ಸ್ವೀಕರಿಸಿದರು. ನಂತರ ಗಳಿಗೆಕೆರೆ ಗ್ರಾಮಕ್ಕೆ ಶಾಸಕ ಸಾ.ರಾ.ಮಹೇಶ್ ಭೇಟಿ ನೀಡಿ ಜನರಿಂದ ಅಹವಾಲು ಸ್ವೀಕರಿಸುವಾಗ ಗ್ರಾಮದ ಮಹಿಳೆಯರು ಕೆಲವು ಮನೆಗಳಲ್ಲಿ ಅಕ್ರಮ ಮದ್ಯ ಮಾರಾಟ ಮಾಡಲಾಗುತ್ತಿದ್ದು, ಅಬಕಾರಿ ಅಧಿಕಾರಿಗಳ ಗಮನಕ್ಕೆ ತಂದರೂ ಸಮಸ್ಯೆ ಬಗೆಹರಿದಿಲ್ಲ ಎಂದು ಶಾಸಕರ ಗಮನಕ್ಕೆ ತಂದರು.

ಈ ವೇಳೆ ಶಾಸಕ ಸಾ.ರಾ.ಮಹೇಶ್ ಸ್ಥಳದಲ್ಲಿದ್ದ ಅಬಕಾರಿ ಅಧಿಕಾರಿಗಳಿಗೆ ಇನ್ನು ಮುಂದೆ ಗ್ರಾಮಗಳಲ್ಲಿ ಅಕ್ರಮ ಮದ್ಯ ಮಾರಾಟ ಸಂಬಂಧ ದೂರು ಬಂದರೆ ನಿಮ್ಮ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಇದೇ ವೇಳೆ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ, ಸಮಸ್ಯೆ ಬಗೆಹರಿಸಲು ಸಂಬಂಧಪಟ್ಟವರಿಗೆ ಸೂಚಿಸಿದರು. ಈ ಸಂದರ್ಭ ಸಂಧ್ಯಾ ಸುರಕ್ಷಾ ಯೋಜನೆ, ವಿಧವಾ ವೇತನ, ಅಂಗವಿಕಲರ ವೇತನ, ಇತರೆ ಯೋಜನೆಯಡಿ ಮಂಜೂರಾದ ಅರ್ಹ ಫಲಾನುಭವಿಗಳಿಗೆ ಮಂಜೂರಾತಿ ಪತ್ರ ವಿತರಿಸಿದರು. ಅಲ್ಲದೇ ದೊಡ್ಡಕೊಪ್ಪಲು ಗ್ರಾಮದಲ್ಲಿ ನೂತನ ಶಾಲಾ ಕೊಠಡಿ ಉದ್ಘಾಟಿಸಿದರು.

ಈ ವೇಳೆ ಜಿಪಂ ಮಾಜಿ ಉಪಾಧ್ಯಕ್ಷ ಎ.ಎಸ್.ಚನ್ನಬಸಪ್ಪ, ಗ್ರಾಪಂ ಅಧ್ಯಕ್ಷೆ ಶಿವರಾಜಮ್ಮ, ಉಪಾಧ್ಯಕ್ಷ ರಾಜನಾಯಕ, ಸದಸ್ಯರಾದ ಸಣ್ಣಸ್ವಾಮಿ, ಪ್ರಿಯಾಂಕ, ನಿಂಗರಾಜು, ಉಮೇಶ್ ಬಾಬು, ಕುಮಾರಿ, ಡಿ.ಟಿ.ಮಹೇಶ, ಮಾಜಿ ಸದಸ್ಯ ಕೃಷ್ಣನಾಯಕ, ತಾಪಂ ಮಾಜಿ ಸದಸ್ಯ ನಾಗಣ್ಣ, ತಾಲೂಕು ಯುವ ಜೆಡಿಎಸ್ ಉಪಾಧ್ಯಕ್ಷ ಡಿ.ಎಸ್.ಕಾಂತರಾಜ್, ಜೆಡಿಎಸ್ ಮುಖಂಡರಾದ ಅಡಗೂರು ನಟರಾಜ್, ಎ.ಸಿ.ವಿರೂಪಾಕ್ಷ ಸತ್ತೀಗೌಡ, ಅಂದಾನಿಗೌಡ, ಈರಣ್ಣ ನಾಯಕ, ಜಲೇಂದ್ರ, ದೇವು, ತಹಸೀಲ್ದಾರ್ ಎಸ್.ಸಂತೋಷ್, ಉಪ ತಹಸೀಲ್ದಾರ್ ಕೃಷ್ಣಮೂರ್ತಿ, ತಾಪಂ ಇಓ ಹೆಚ್.ಕೆ.ಸತೀಶ್, ಇನ್ಸ್‌ಪೆಕ್ಟರ್ ಎಂ.ಆರ್.ಲವ, ಆರ್‌ಎಫ್‌ಓ ರಶ್ಮಿ, ಜಿಪಂ ಎಇಇ ವಿನುತ್, ಎಇ ಸ್ವಾಮಿ, ಕೃಷಿ ಸಹಾಯಕ ನಿರ್ದೇಶಕ ಗುರುಪ್ರಸಾದ್, ತೋಟಗಾರಿಕೆ ಸಹಾಯಕ ನಿರ್ದೇಶಕ ಪ್ರಸನ್ನ, ಹಾರಂಗಿ ಕಾರ್ಯಪಾಲ ಅಭಿಯಂತರ ಈರಣ್ಣಯ್ಯ, ಎಇಇ ಗುರುರಾಜ್, ಪಂಚಾಯತ್ ರಾಜ್ ಎಇಇ ರಾಜಕುಮಾರ್, ಲೋಕೋಪಯೋಗಿ ಎಇಇ ವಿಜಯ್ ಕುಮಾರ್, ತಾಲೂಕು ಆರೋಗ್ಯಾಧಿಕಾರಿ ಡಾ.ಮಹೇಂದ್ರಪ್ಪ, ಚೆಸ್ಕಾಂ ಎಇಇ ಅರ್ಕೇಶ್ ಮೂರ್ತಿ, ಸಿಡಿಪಿಓ ಪೂರ್ಣಿಮಾ, ಬಿಇಓ ಗಾಯಿತ್ರಿ, ಪಿಡಿಓ ಸ್ವಾಮಿನಾಯಕ, ರಾಜಸ್ವ ನಿರೀಕ್ಷಕ ಶಶಿಕುಮಾರ್, ಸಮಾಜ ಕಲ್ಯಾಣಾಧಿಕಾರಿ ಅಶೋಕ್ ಸೇರಿದಂತೆ ಅನೇಕರಿದ್ದರು.

ಸರಗೂರಲ್ಲಿ ಹನುಮ ಜಯಂತಿ ಅದ್ಧೂರಿ ಶೋಭಾಯಾತ್ರೆ



ಸರಗೂರು, ಜ.7– ಪಟ್ಟಣದಲ್ಲಿ 5ನೇ ವರ್ಷದ ಹನುಮ ಜಯಂತಿ ಶೋಭಾಯಾತ್ರೆ ಸಾವಿರಾರು ಭಕ್ತರ ಸಮ್ಮುಖದಲ್ಲಿ ಅದ್ಧೂರಿಯಾಗಿ ನಡೆಯಿತು. ಹನುಮ ಜಯಂತಿ ಶೋಭಾಯಾತ್ರೆಗೆ ದಡದಹಳ್ಳಿ ಪಟ್ಟದ ಮಠದ ಷಡಕ್ಷರ ಸ್ವಾಮೀಜಿ, ಹಂಚೀಪುರ ಮಠದ ಚೆನ್ನಬಸವ ಸ್ವಾಮೀಜಿ, ಬಿಡಗಲು ಭರತೇಶ್ ಗುರೂಜಿ ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಿದರು. ಮೆರವಣಿಗೆಯುದ್ದಕ್ಕೂ ಕೇಸರಿ ಶಾಲು, ಹನುಮ ಧ್ವಜ, ಕೇಸರಿ ಬಾವುಟ ಹಿಡಿದ ಹನುಮ ಭಕ್ತರು ಇಡೀ ಪಟ್ಟಣವನ್ನು ಕೇಸರಿಮಯ ಮಾಡಿದ್ದರು. ಅಲ್ಲದೇ ಜೈ ಶ್ರೀರಾಮ್, ಜೈ ಹನುಮಾನ್ ಘೋಷಣೆ ಕೂಗುತ್ತಾ ವಾದ್ಯ, ತಮಟೆ, ನಗಾರಿ ಸದ್ದಿಗೆ ಕುಣಿದು ಕುಪ್ಪಳಿಸಿದರು. ದಾರಿಯುದ್ದಕ್ಕೂ ಭಕ್ತರು ಹನುಮನಮೂರ್ತಿಗೆ ಪೂಜೆ ಸಲ್ಲಿಸಿದರು.

ಶೋಭಾಯಾತ್ರೆಯಲ್ಲಿ ವೀರಗಾಸೆ, ಜೇನುಕುರುಬರ ಕುಣಿತ, ಪೂಜಾ ಕುಣಿತ, ಡೋಲು, ಮಂಗಳವಾದ್ಯ ಸೇರಿದಂತೆ ಇನ್ನಿತರ ಕಲಾ ಪ್ರಕಾರಗಳು ಭಾಗವಹಿಸಿದ್ದವು. ಪುನೀತ್ ಅಭಿಮಾನಿಗಳು ಅವರ ಭಾವಚಿತ್ರ ಹಿಡಿದು ಅಭಿಮಾನ ಮೆರೆದರು. ಮುಸ್ಲಿಂ ಬಾಂಧವರು ಹನುಮ ಭಕ್ತರಿಗೆ ಶುಭಾಶಯ ಕೋರಿ ಮಜ್ಜಿಗೆ ವಿತರಿಸಿದರು. ಯಾವುದೇ ಅಹಿತಕರ ಘಟನೆ ನಡೆಯದಂತೆ ಸಿಪಿಐಗಳಾದ ಲಕ್ಷ್ಮಿಕಾಂತ್, ಬಸವರಾಜು, ಎಸ್‌ಐಗಳಾದ ಶ್ರವಣದಾಸ್ ರೆಡ್ಡಿ, ಜಯಪ್ರಕಾಶ್ ಹಾಗೂ ಸಿಬ್ಬಂದಿ ಸೂಕ್ತ ಬಂದೋಬಸ್ತ್ ಕೈಗೊಂಡಿದ್ದರು.

ಈ ವೇಳೆ ಶಾಸಕ ಅನಿಲ್ ಚಿಕ್ಕಮಾದು, ಜೆಡಿಎಸ್ ಮುಖಂಡ ಜಯಪ್ರಕಾಶ್, ಬಿಜೆಪಿ ಮುಖಂಡ ಡಾ.ಹೆಚ್.ವಿ.ಕೃಷ್ಣಸ್ವಾಮಿ, ಅಪ್ಪಣ್ಣ, ಫಣೀಶ್, ಭಜರಂಗದಳ ರಾಜ್ಯಾಧ್ಯಕ್ಷ ಮಂಜುನಾಥ್, ಶೋಭಾಯಾತ್ರೆ ಸಮಿತಿ ಅಧ್ಯಕ್ಷ ಚನ್ನಪ್ಪ, ಕಾರ್ಯದರ್ಶಿ ವಿನಾಯಕ್, ರವಿಕುಮಾರ್, ನವೀನ್ ಕುಮಾರ್, ರಾಮು, ಜಯರಾಮ್, ತಾಲೂಕು ಬಿಜೆಪಿ ಅಧ್ಯಕ್ಷ ಗುರುಸ್ವಾಮಿ, ತಾಲೂಕು ವೀರಶೈವ ಮಹಾಸಭಾ ಅಧ್ಯಕ್ಷ ಡಿ.ಜಿ.ಶಿವರಾಜು, ಗಣಪತಿ, ಸಿ.ಕೆ.ಗಿರೀಶ್, ಎಸ್.ಎನ್.ಮೋಹನ್ ಕುಮಾರ್, ಜಿಪಂ ಮಾಜಿ ಸದಸ್ಯ ಚಿಕ್ಕವೀರ ನಾಯಕ, ಪಿ.ರವಿ, ಪ್ರಭುಸ್ವಾಮಿ, ಶಂಭುಲಿಂಗನಾಯಕ, ಭಾಗ್ಯಲಕ್ಷ್ಮಿ, ಪಪಂ ಅಧ್ಯಕ್ಷೆ ರಾಧಿಕಾ, ಸದಸ್ಯರಾದ ಶ್ರೀನಿವಾಸ್, ಚೆಲುವ ಕೃಷ್ಣ, ಶಿವಕುಮಾರ್, ನೂರಾಳ ಸ್ವಾಮಿ, ರಮೇಶ್, ನವೀನ್, ನಾರಾಯಣ್, ಪ್ರತಾಪ್, ರಂಗಸ್ವಾಮಿ, ವಾಹನ ಚಾಲಕರ ಸಂಘದ ಗೌರವಾಧ್ಯಕ್ಷ ಹೆಚ್.ಎಸ್.ಲಿಂಗರಾಜು, ನಂದೀಶ್, ಬಿಜೆಪಿ ಟೌನ್ ಅಧ್ಯಕ್ಷ ನಾಗರಾಜರಾಮ್, ಮಹೇಶ್, ಸತೀಶ್, ಎಂ.ನಾಗರಾಜು, ಆನಂದ್ ಮೈಲಾರಿ, ಮುತ್ತಣ್ಣ, ಶೋಹಿಲ್, ಜಲೀಲ್, ಸುಭಾನ್, ಇಬ್ರಾಹಿಮ್ ಇದ್ದರು.

ಶಾಲಾ ಕೊಠಡಿ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ



ಪಿರಿಯಾಪಟ್ಟಣ, ಜ.7– ಚುನಾವಣೆ ಹತ್ತಿರವಾಗುತ್ತಿದ್ದು, ಆರೋಪ–ಪ್ರತ್ಯಾರೋಪ ಸಹಜ. ಹೀಗಾಗಿ ವಿರೋಧಿಗಳ ಮಾತಿಗೆ ಮನ್ನಣೆ ನೀಡದೆ ಜೆಡಿಎಸ್ ಬೆಂಬಲಿಸುವಂತೆ ಶಾಸಕ ಕೆ.ಮಹದೇವ ಮನವಿ ಮಾಡಿದರು. ತಾಲೂಕಿನ ಈಚೂರು ಗ್ರಾಮದಲ್ಲಿ 30 ಲಕ್ಷ ರೂ. ವೆಚ್ಚದ ಶಾಲಾ ಕೊಠಡಿ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ನನ್ನ ಅಧಿಕಾರವಧಿಯ ಮೊದಲ 3 ವರ್ಷ ಕೊರೊನಾ ಹಾಗೂ ಅತಿವೃಷ್ಟಿಯಿಂದಾಗಿ ಸರ್ಕಾರದಿಂದ ಯಾವುದೇ ಅನುದಾನ ಬಿಡುಗಡೆಯಾಗದೇ ತಾಲೂಕಿನ ಅಭಿವೃದ್ಧಿ ಕುಂಠಿತಗೊಂಡಿತ್ತು ಇನ್ನೆರಡು ವರ್ಷ ತಾಲೂಕಿನ ಅಭಿವೃದ್ಧಿಗೆ ಶ್ರಮಿಸಿದ್ದೇನೆ. ಮುಂಬರುವ ದಿನಗಳಲ್ಲಿ ತಾಲೂಕಿಗೆ ಮಾಜಿ ಸಿಎಂ ಕುಮಾರಸ್ವಾಮಿ ನೇತೃತ್ವದಲ್ಲಿ ಪಂಚರತ್ನ ಯಾತ್ರೆ ಆಗಮಿಸುತ್ತಿದ್ದು, ಈ ವೇಳೆ ಜೆಡಿಎಸ್ ಸಾಧನೆ ಪಟ್ಟಿಯನ್ನು ಬಿಡುಗಡೆಗೊಳಿಸಲಾಗುವುದು ಎಂದರು.

ಈ ವೇಳೆ ಗ್ರಾಪಂ ಅಧ್ಯಕ್ಷೆ ಮಮತಾ, ಉಪಾಧ್ಯಕ್ಷೆ ದೀಪು, ಸದಸ್ಯರಾದ ಸರೋಜಾ, ಮಾನಸ, ರಮೇಶ್, ಮುಖಂಡರಾದ ವಿದ್ಯಾಶಂಕರ್, ಕೆಂಪೇಗೌಡ, ಪಶು ಸಂಗೋಪನ ಇಲಾಖೆ ಸಹಾಯಕ ನಿರ್ದೇಶಕ ಡಾ.ಸೋಮಯ್ಯ ಇನ್ನಿತರರಿದ್ದರು.

ಜೀತಗಾರಿಕೆ ನಿರ್ಮೂಲನೆಗೆ ಸಾಮಾಜಿಕ ಕಳಕಳಿ ಅವಶ್ಯಕ

ಹುಣಸೂರು ಉಪವಿಭಾಗಾಧಿಕಾರಿ ರುಚಿ ಜಿಂದಾಲ್



ಹುಣಸೂರು, ಜ.7– ಸಮಾಜದಲ್ಲಿರುವ ಜೀತಗಾರಿಕೆ ನಿರ್ಮೂಲನೆಗೆ ವಿದ್ಯಾವಂತರ ಸಹಕಾರ ಹಾಗೂ ಸಾಮಾಜಿಕ ಕಳಕಳಿ ಅವಶ್ಯಕ ಎಂದು ಹುಣಸೂರು ಉಪವಿಭಾಗಾಧಿಕಾರಿ ರುಚಿ ಜಿಂದಾಲ್ ತಿಳಿಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ತಾಲೂಕು ಆಡಳಿತದಿಂದ ಆಯೋಜಿಸಿದ್ದ ಜೀತಪದ್ಧತಿ ಕಾನೂನು ಅರಿವು ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಮಾನವರನ್ನು ನಿರ್ಬಂಧದಲ್ಲಿಟ್ಟು ಕನಿಷ್ಠ ಕೂಲಿ ನೀಡದೇ ದುಡಿಸಿಕೊಳ್ಳುವುದೇ ಜೀತಪದ್ಧತಿ. ಇಂತಹ ಅನಿಷ್ಟ ಪದ್ಧತಿ ಇಂದಿಗೂ ಗ್ರಾಮೀಣ ಭಾಗದಲ್ಲಿರುವುದು ಬೇಸರದ ಸಂಗತಿ. ಹೀಗಾಗಿ ಎಲ್ಲಾದರೂ ಜೀತಪದ್ಧತಿ ಕಂಡು ಬಂದರೇ ಅಂತಹವರನ್ನು ಬಿಡುಗಡೆಗೊಳಿಸಲು ತಾಲೂಕು ಮಟ್ಟದ ಅಧಿಕಾರಿಗಳು ಮುಂದಾಗಬೇಕು ಎಂದರು.

ಇಂದಿಗೂ ಕೆಲವು ಭೂ ಮಾಲೀಕರು ಹಾಗೂ ಹಣವಂತರು ಅಸಹಾಯಕ ಜನರಿಂದ ಜೀತ ಮಾಡಿಸುವ ಮೂಲಕ ಕಾನೂನು ಉಲ್ಲಂಘನೆ ಮಾಡುತ್ತಿದ್ದಾರೆ. ಅವರ ವಿರುದ್ಧ ಪೊಲೀಸ್ ಠಾಣೆಗೆ ದೂರು ನೀಡಿ ಮುಗ್ಧ ಜನರನ್ನು ರಕ್ಷಿಸುವ ಜವಾಬ್ದಾರಿ ಅಧಿಕಾರಿಗಳ ಮೇಲಿದೆ ಎಂದರು.


ತಹಸೀಲ್ದಾರ್ ಡಾ.ಅಶೋಕ್ ಮಾತನಾಡಿ, ಕಾರ್ಯಾಗಾರದ ಬಳಿಕ ಎಲ್ಲಾ ಗ್ರಾಪಂ ಮಟ್ಟದ ಅಧಿಕಾರಿಗಳಿಂದ ಜೀತಪದ್ಧತಿ ಬಗ್ಗೆ ಸರ್ವೆ ನಡೆಸಲಾಗುವುದು. ಅಂತಹ ಪ್ರಕರಣ ಕಂಡುಬಂದರೆ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದರು.

ತಾಪಂ ಇಓ ಇಓ ಮನು ಮಾತನಾಡಿ, ತಾಲೂಕಿನಲ್ಲಿ ಈಗಾಗಲೇ 23 ಜೀತಗಾರರನ್ನು ಗುರುತಿಸಿ ಉಪವಿಭಾಗಾಧಿಕಾರಿಗಳು ಬಿಡುಗಡೆ ಮಾಡಿದ್ದಾರೆ. ಜೀತ ವಿಮುಕ್ತರಿಗೆ ನಮ್ಮ ಇಲಾಖೆಯಿಂದ ವಾಸಿಸಲು ಮನೆ, ಅಂಬೇಡ್ಕರ್, ವಾಲ್ಮೀಕಿ ನಿಗಮದಿಂದ ಸಾಲ ನೀಡಿ ಮುಖ್ಯ ವಾಹಿನಿಗೆ ತರುವ ಕೆಲಸ ಮಾಡಲಾಗಿದೆ ಎಂದರು.

ಹೆಚ್.ಡಿ.ಕೋಟೆ ಜೀವಿಕ ಸಂಸ್ಥೆ ಸಂಪನ್ಮೂಲ ವ್ಯಕ್ತಿ ಬಸವರಾಜು ಮಾತನಾಡಿ, ಜೀತಪದ್ಧತಿ ನಿರ್ಮೂಲನೆಗೆ 1976ರ ಕಾನೂನು ಇದ್ದರೂ, ಜೀತ ಪದ್ಧತಿ ಇನ್ನು ಜೀವಂತವಾಗಿರುವುದು ಅತ್ಯಂತ ನೋವಿನ ಸಂಗತಿ. ತಾಲೂಕು ಮಟ್ಟದ ಅಧಿಕಾರಿಗಳು ಇದರ ನಿರ್ಮೂಲನೆಗೆ ಕ್ರಮ ಕೈಗೊಳ್ಳಬೇಕು ಎಂದರು.

ದಸಂಸ ಮುಖಂಡ ನಿಂಗರಾಜ ಮಲ್ಲಾಡಿ ಮಾತನಾಡಿದರು. ಆಯುಕ್ತೆ ಮಾನಸ, ಸಿಡಿಪಿಓ ರಶ್ಮಿ, ರೇಷ್ಮೆ ಅಧಿಕಾರಿ ರಮೇಶ್, ಸಮಾಜ ಕಲ್ಯಾಣಾಧಿಕಾರಿ ಮೋಹನ್ ಕುಮಾರ್, ಗಿರಿಜನ ಅಧಿಕಾರಿ ಬಸವರಾಜು, ಕೃಷಿ ಅಧಿಕಾರಿ ವೆಂಕಟೇಶ್, ಯೋಜನಾಧಿಕಾರಿ ರಾಜೇಶ್, ತಾಪಂ ನಟೇಶ್ ಹಾಗೂ ಎಲ್ಲಾ ಪಿಡಿಓಗಳು, ವಿಎ, ಆರ್‌ಐ, ಅಂಗನವಾಡಿ ಕಾರ್ಯಕರ್ತೆರು, ಕಾರ್ಮಿಕ ಅಧಿಕಾರಿಗಳು ಇದ್ದರು.

ಧ್ರುವನಾರಾಯಣ್ ನೇತೃತ್ವದಲ್ಲಿ ಜೆಡಿಎಸ್ ಮುಖಂಡರು 'ಕೈ' ಸೇರ್ಪಡೆ



ನಂಜನಗೂಡು, ಜ.7– ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ನೇತೃತ್ವದಲ್ಲಿ ಮಾಜಿ ಪುರಸಭಾಧ್ಯಕ್ಷ ಶ್ರೀನಿವಾಸ್ ತಮ್ಮ ಬೆಂಬಲಿಗರೊಡನೆ ಜೆಡಿಎಸ್ ತೊರೆದು ಕಾಂಗ್ರೆಸ್‌ಗೆ ಸೇರ್ಪಡೆಗೊಂಡರು.

ನಂತರ ಮಾತನಾಡಿದ ಆರ್.ಧ್ರುವನಾರಾಯಣ್, ಮಾಜಿ ಪುರಸಭಾಧ್ಯಕ್ಷ ಶ್ರೀನಿವಾಸ್ ಕಾಂಗ್ರೆಸ್ ತತ್ವ ಸಿದ್ಧಾಂತ ಒಪ್ಪಿ ಪಕ್ಷಕ್ಕೆ ಸೇರ್ಪಡೆಗೊಂಡಿದ್ದಾರೆ. ಮುಂದಿನ ದಿನಗಳಲ್ಲಿ ಕ್ಷೇತ್ರದ ಬಿಜೆಪಿ ಮತ್ತು ಜೆಡಿಎಸ್‌ನ ಹಲವು ಮುಖಂಡರು ಕಾಂಗ್ರೆಸ್ ಸೇರ್ಪಡೆಗೊಳ್ಳಲಿದ್ದು, ಪಕ್ಷದ ಬಲ ಹೆಚ್ಚಾಗಲಿದೆ ಎಂದರು.

ಕಾಂಗ್ರೆಸ್ ಗೆಲುವು ನಿಶ್ಚಿತ: ಬಿಜೆಪಿ ಸರ್ಕಾರದ ಭ್ರಷ್ಟಾಚಾರ ಮಿತಿಮೀರಿದ್ದು, ಕಳೆದ 4 ವರ್ಷಗಳಲ್ಲಿ ಜನರ ಜೀವನಮಟ್ಟ ಸುಧಾರಿಸುವ ಜನಪರ ಆಡಳಿತ ನೀಡುವಲ್ಲಿ ವಿಫಲವಾಗಿದೆ ಪ್ರಸ್ತುತ ರಾಜ್ಯದೆಲ್ಲೆಡೆ ಕಾಂಗ್ರೆಸ್ ಪಕ್ಷದ ಪರ ಅಲೆಯಿದೆ. ಈ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ನಿಶ್ಚಿತ ಎಂದರು.

ಅಭ್ಯರ್ಥಿಗಳ ಪಟ್ಟಿ ಪ್ರಕಟ: ಈಗಾಗಲೇ ಕೆಪಿಸಿಸಿ ಆಕಾಂಕ್ಷಿಗಳಿಂದ ಅರ್ಜಿ ಸ್ವೀಕರಿಸಿದ್ದು, ಕೆಪಿಸಿಸಿ ಚುನಾವಣಾ ಸಮಿತಿ ಅರ್ಜಿಗಳ ಪರಿಶೀಲನೆ ನಡೆಸಿ, ಕ್ಷೇತ್ರದ ಮುಖಂಡರ, ಆಕಾಂಕ್ಷಿಗಳ, ಜನಾಭಿಪ್ರಾಯ ಸಂಗ್ರಹಿಸಿ ವರದಿಯನ್ನು ದೆಹಲಿಯ ಎಐಸಿಸಿ ಕಚೇರಿಗೆ ರವಾನಿಸಲಾಗಿದೆ. ಹೈಕಮಾಂಡ್ ಸ್ಕ್ರೀನಿಂಗ್ ಸಮಿತಿ ವರದಿ ಆಧಾರದ ಮೇಲೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸಲಿದ್ದಾರೆ. ಮುಂದಿನ 15 ದಿನದೊಳಗೆ 150 ಕ್ಷೇತ್ರಗಳ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಲಾಗುವುದು. ನಂಜನಗೂಡು ಕ್ಷೇತ್ರದಲ್ಲಿ ಯಾವುದೇ ಬಣ ರಾಜಕೀಯ, ಭಿನ್ನಾಭಿಪ್ರಾಯಗಳಿಲ್ಲ. ಎಲ್ಲರೂ ಒಟ್ಟಾಗಿದ್ದೇವೆ. ಎಲ್ಲರೂ ಪಕ್ಷದ ಗೆಲುವಿಗೆ ಶ್ರಮಿಸಲಿದ್ದೇವೆ ಎಂದರು.

ಮಾಜಿ ಪುರಸಭಾಧ್ಯಕ್ಷ ಶ್ರೀನಿವಾಸ್ ಮಾತನಾಡಿ, ಆರ್.ಧ್ರುವನಾರಾಯಣ್ ಅವರ ಕೈ ಬಲಪಡಿಸುವ ಸಲುವಾಗಿ ಕಾಂಗ್ರೆಸ್ ಸೇರ್ಪಡೆಗೊಂಡಿದ್ದೇನೆ. ಜೆಡಿಎಸ್‌ನ ಹಲವು ಮುಖಂಡರು ಕಾಂಗ್ರೆಸ್ ಸೇರ್ಪಡೆಯಾಗಲು ಕಾದಿದ್ದಾರೆ. ಸೂಕ್ತ ವೇದಿಕೆಯಲ್ಲಿ ಎಲ್ಲರನ್ನೂ ಬರಮಾಡಿಕೊಳ್ಳಲಾಗುವುದು ಎಂದರು.

ಈ ವೇಳೆ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಸಿ.ಎಂ.ಶಂಕರ್, ಶ್ರೀಕಂಠನಾಯಕ, ರಂಗಸ್ವಾಮಿ, ನಗರಸಭಾ ಸದಸ್ಯರಾದ ಶ್ರೀಕಂಠಸ್ವಾಮಿ, ಶ್ವೇತಲಕ್ಷ್ಮಿ, ಎಸ್.ಪಿ.ಮಹೇಶ್, ಮುಖಂಡರಾದ ಕುಳ್ಳಯ್ಯ, ಎನ್.ಎಂ.ಮಂಜುನಾಥ್, ವಿಜಯ್ ಕುಮಾರ್, ಪ್ರದೀಪ್, ಶಿವಪ್ಪದೇವರು, ನಾಗರಾಜಯ್ಯ, ಗಿರೀಶ್, ಶ್ರೀಧರ್, ಟಿಎಪಿಸಿಎಂಎಸ್ ಉಪಾಧ್ಯಕ್ಷ ರಾಜು, ಯುವ ಕಾಂಗ್ರೆಸ್ ಅಧ್ಯಕ್ಷ ಅಶೋಕ್, ನಾಗರಾಜು ಸೇರಿದಂತೆ ಇತರರಿದ್ದರು.



ಹುಣಸೂರು ತಾಲೂಕಿನ ಮರದೂರು ಗ್ರಾಪಂ ನೂತನ ಅಧ್ಯಕ್ಷ ಶಿವರಾಜ್ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ, ಕೆಎಂಎಫ್ ನಿರ್ದೇಶಕ ಕೆ.ಎಸ್.ಕುಮಾರ್ ಅವರನ್ನು ಸನ್ಮಾನಿಸಿದರು.

ಕೇಂದ್ರ, ರಾಜ್ಯದಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ

ಮಹಾರಾಷ್ಟ್ರ ಬಿಜೆಪಿ ಎಸ್ಸಿ ಮೋರ್ಚಾ ರಾಜ್ಯಾಧ್ಯಕ್ಷ ಸುಧಾಕರ್ ಭಾಲೇರಾವ್ ವಿಶ್ವಾಸ



ತಿ.ನರಸೀಪುರ ಜ.7– ಮುಂಬರುವ ಚುನಾವಣೆಗಳಲ್ಲಿ ಕೇಂದ್ರ ಹಾಗೂ ರಾಜ್ಯದಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬರಲಿದೆ ಎಂದು ಚುನಾವಣೆ ಉಸ್ತುವಾರಿ ಮಹಾರಾಷ್ಟ್ರ ಬಿಜೆಪಿ ಎಸ್ಸಿ ಮೋರ್ಚಾ ರಾಜ್ಯಾಧ್ಯಕ್ಷ ಸುಧಾಕರ್ ಭಾಲೇರಾವ್ ವಿಶ್ವಾಸ ವ್ಯಕ್ತಪಡಿಸಿದರು.

ಪಟ್ಟಣದ ಗೋಪಾಲಪುರದಲ್ಲಿ ನಡೆದ ಬೂತ್ ವಿಜಯ ಅಭಿಯಾನದಲ್ಲಿ ಬೂತ್ ಅಧ್ಯಕ್ಷರ ನಿವಾಸಕ್ಕೆ ಪಕ್ಷದ ಬಾವುಟ ಕಟ್ಟಿ ಬಳಿಕ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ದೇಶದ ಜನರು ಬಿಜೆಪಿ ಆಡಳಿತ ಮೆಚ್ಚಿಕೊಂಡಿರುವುದರಿಂದ ಮತ್ತೆ ಆಡಳಿತ ಚುಕ್ಕಾಣಿ ಕಮಲದ ವಶವಾಗಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಸಾಮಾನ್ಯ ಕಾರ್ಯಕರ್ತರಿಂದಲೇ ಅಧಿಕಾರಕ್ಕೆ ಬಂದಿರುವ ಬಿಜೆಪಿ ಸರ್ಕಾರ ರಾಷ್ಟ್ರದಲ್ಲಿ ಸರ್ವವ್ಯಾಪಿಯಾಗಿದೆ. ಪ್ರಧಾನಿ ಮೋದಿ ಭಾರತಕ್ಕೆ ಜಾಗತಿಕ ಮಟ್ಟದಲ್ಲಿ ಗೌರವ ಸಿಗುವಂತೆ ಆಡಳಿತ ನಡೆಸುತ್ತಿದ್ದಾರೆ. ಅಲ್ಲದೆ ಇಂದಿನ ಯುವಜನತೆ ಬಿಜೆಪಿಯತ್ತ ಒಲವು ಹೊಂದಿರುವುದರಿಂದ ಮುಂಬರುವ ಚುನಾವಣೆಗಳಲ್ಲಿ ಬಿಜೆಪಿ ಗೆಲ್ಲಲು ಸಹಕಾರಿಯಾಗಲಿದೆ ಎಂದರು.

ವಿಧಾನಪರಿಷತ್ ಮಾಜಿ ಸದಸ್ಯ ಸಿ.ರಮೇಶ್ ಮಾತನಾಡಿ, ಕೇಂದ್ರ ಅಥವಾ ರಾಜ್ಯದಲ್ಲಿ ಬಿಜೆಪಿ ಸರ್ಕಾರವನ್ನು ತೆಗೆಯುವಂತಹ ನಾಯಕರು ಕಾಂಗ್ರೆಸ್ ಮತ್ತು ಇನ್ನಿತರ ವಿಪಕ್ಷಗಳಲ್ಲಿ ಯಾರೂ ಇಲ್ಲ. ಆದ್ದರಿಂದ ಮುಂಬರುವ ಚುನಾವಣೆಗಳಲ್ಲಿ ಮತ್ತೆ ಬಿಜೆಪಿ ಎರಡೂ ಕಡೆ ಅಧಿಕಾರಕ್ಕೆ ಬರಲಿದೆ. ಶೋಷಿತರು ಹಾಗೂ ಹಿಂದುಳಿದ ವರ್ಗಗಳ ಸಮುದಾಯಗಳ ಜನರು ಬಿಜೆಪಿ ಮೆಚ್ಚಿಕೊಂಡಿರುವುದರಿಂದ ರಾಜ್ಯದಲ್ಲಿ ಯಾವುದೇ ಕಾರಣಕ್ಕೂ ಕಾಂಗ್ರೆಸ್ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ. ಬಿಜೆಪಿಯ ಬೇರು ಆಳವಾಗಿ ಬೇರೂರಿರುವುದರಿಂದ ಕಮಲ ಅರಳಲಿದೆ ಎಂದು ಭವಿಷ್ಯ ನುಡಿದರು.

ಇದೇ ವೇಳೆ ಸುಧಾಕರ್ ಭಾಲೇರಾವ್ ಸೇರಿದಂತೆ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ಅಶೋಕ ಕರಟಮಲ್ಲ ಹಾಗೂ ಮುಂಬೈ ಎಸ್ಸಿ ಮೋರ್ಚಾ ಅಧ್ಯಕ್ಷ ಶರದ್ ಕಾಮ್ಳೆ ಅವರಿಗೆ ಮೈಸೂರು ಪೇಟ ತೊಡಿಸಿ ಸನ್ಮಾನಿಸಲಾಯಿತು. ನಂತರ ತಾಲೂಕು ಕಚೇರಿ ಮುಂಭಾಗದ ಉದ್ಯಾನವನದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಲಾಯಿತು.

ಈ ವೇಳೆ ಪುರಸಭೆ ಸದಸ್ಯರಾದ ಆರ್.ಅರ್ಜುನ್, ಎಸ್.ಕೆ.ಕಿರಣ, ಕೆ.ನಂಜುಂಡಸ್ವಾಮಿ, ಎನ್.ಲೋಕೇಶ್, ಬಿಜೆಪಿ ಕ್ಷೇತ್ರಾಧ್ಯಕ್ಷ ಕೆ.ಸಿ.ಲೋಕೇಶ್, ಪ್ರಧಾನ ಕಾರ್ಯದರ್ಶಿ ಸಿದ್ಧಮಲ್ಲಪ್ಪ, ಯುವ ಮೋರ್ಚಾ ಜಿಲ್ಲಾ ಉಪಾಧ್ಯಕ್ಷ ಬಿ.ಎಂ.ವಿಜಯ್ ಕುಮಾರ್, ಎಸ್ಸಿ ಮೋರ್ಚಾ ಅಧ್ಯಕ್ಷ ಎ. ಶಿವಕುಮಾರ್, ಮಾಜಿ ಅಧ್ಯಕ್ಷ ಚೌಹಳ್ಳಿ ಸಿದ್ದರಾಜು, ತಾಪಂ ಮಾಜಿ ಸದಸ್ಯ ಬಿ.ಎಲ್.ಮಹದೇವ, ಬಾಬೂಜಿ ಸಂಘದ ಅಧ್ಯಕ್ಷ ಬಲ್ಲಯ್ಯ, ಮುಖಂಡರಾದ ಸೋಮಶೇಖರಪ್ಪ, ಮರಡೀಪುರ ನಾಗರಾಜು, ಪುಟ್ಟಸ್ವಾಮಿ, ಇನ್ನಿತರರಿದ್ದರು.




ಬೀದರ್‌ನಲ್ಲಿ ಕರ್ನಾಟಕ ಸ್ವಾಭಿಮಾನಿ ಎಸ್ಸಿ, ಎಸ್ಟಿ ಸಂಘಟನೆಗಳ ಒಕ್ಕೂಟ ಮತ್ತು ಮೀಸಲಾತಿ ಹೆಚ್ಚಳ ಹೋರಾಟ ಸಮಿತಿಯಿಂದ ನಡೆದ ಭೀಮ ಕೋರೆಗಾಂವ್ ವಿಜಯೋತ್ಸವದಲ್ಲಿ ತಿ.ನರಸೀಪುರ ತಾಲೂಕು ಶ್ರೀಮಹರ್ಷಿ ವಾಲ್ಮೀಕಿ ಚಾರಿಟಬಲ್ ಟ್ರಸ್ಟ್ ದಿನದರ್ಶಿಕೆಯನ್ನು ರಾಜನಹಳ್ಳಿ ಶ್ರೀಪ್ರಸನ್ನಾನಂದ ಸ್ವಾಮೀಜಿ ಬಿಡುಗಡೆಗೊಳಿಸಿದರು. ಮೈಸೂರಿನ ಉರಿಲಿಂಗ ಪೆದ್ದಿಮಠದ ಶ್ರೀಜ್ಞಾನ ಪ್ರಕಾಶ್ ಸ್ವಾಮೀಜಿ, ಚಿತ್ರದುರ್ಗದ ಮಾದಾರ ಚನ್ನಯ್ಯ ಸ್ವಾಮೀಜಿ, ಬಸವಕಲ್ಯಾಣದ ಶಾಂತ ಬಸವ ಸ್ವಾಮೀಜಿ, ಬೀದರ್‌ನ ಬಂತೇಜಿ, ಮುನಿಯಪ್ಪ, ರಾಜ್ಯ ವಾಲ್ಮೀಕಿ ನಾಯಕ ಸಂಘಗಳ ಒಕ್ಕೂಟದ ಮೈಸೂರು ಜಿಲ್ಲಾಧ್ಯಕ್ಷ ತಾಯೂರು ಪ್ರಕಾಶ್, ಮಹರ್ಷಿ ವಾಲ್ಮೀಕಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಮಹೇಶ್ ನಾಯಕ್ ಇತರರಿದ್ದರು.



ಹೆಚ್.ಡಿ.ಕೋಟೆ ತಾಲೂಕಿನ ಕೆ.ಬೆಳ್ತೂರು ಮಹಾಶಕ್ತಿ ಕೇಂದ್ರ ವ್ಯಾಪ್ತಿಯ ಹೈರಿಗೆ ಗ್ರಾಮದಲ್ಲಿ ಕಾರ್ಯಕರ್ತರ ಮನೆ ಮೇಲೆ ಬಿಜೆಪಿ ಬಾವುಟ ಹಾರಿಸುವ ಮೂಲಕ ಬೂತ್ ವಿಜಯ ಅಭಿಯಾನಕ್ಕೆ ಬಿಜೆಪಿ ಮುಖಂಡ ಡಾ.ಹೆಚ್.ವಿ.ಕೃಷ್ಣಸ್ವಾಮಿ ಚಾಲನೆ ನೀಡಿದರು. ಈ ವೇಳೆ ನಿಕಟಪೂರ್ವ ಅಧ್ಯಕ್ಷ ಸಿ.ಕೆ.ಗಿರೀಶ್, ತೋಟಗಾರಿಕೆ ಬೆಳೆಗಾರರ ಸಂರಕ್ಷಣಾ ಸಮಿತಿ ಅಧ್ಯಕ್ಷ ನಂದೀಶ್, ಶಕ್ತಿ ಕೇಂದ್ರದ ಅಧ್ಯಕ್ಷ ದಿನೇಶ್, ಗೋಪಾಲಯ್ಯ, ಮಹದೇವಯ್ಯ, ಸೋಮು, ಶಿವಕುಮಾರ್, ಶಿವು, ಅಂಬೇಡ್ಕರ್ ಸಂಘದ ಯುವಕರು ಇನ್ನಿತರರಿದ್ದರು.

ವರುಣಾ ನಾಲೆ ಅಭಿವೃದ್ಧಿಗೆ ಅನುದಾನ ನೀಡುವಂತೆ ಸಿಎಂಗೆ ಶಾಸಕ ಜಿಟಿಡಿ ಮನವಿ

ಮೈಸೂರು, ಜ.7–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ಶನಿವಾರ ಮೈಸೂರಿನಲ್ಲಿ ಕಾರ್ಯಕ್ರಮ ಮುಗಿಸಿಕೊಂಡು ಬೆಂಗಳೂರಿಗೆ ತೆರಳಲು ಕಾರು ಹತ್ತಿ ಕುಳಿತಿದ್ದ ವೇಳೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಸಿಎಂ ಜೊತೆ ಕೆಲ ಸಮಯ ಪಿಸುಪಿಸು ಮಾತನಾಡಿದ್ದು ತೀವ್ರ ಕುತೂಹಲಕ್ಕೆ ಕಾರಣವಾಗಿತ್ತು.

ಆದರೆ, ಮುಖ್ಯಮಂತ್ರಿಗಳಲ್ಲಿ ಜಿ.ಟಿ.ದೇವೇಗೌಡರು ತಮ್ಮ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳಿಗೆ ಅನುದಾನ ಒದಗಿಸಬೇಕೆಂಬ ಬೇಡಿಕೆಯನ್ನಿಟ್ಟಿದ್ದಾರೆ.

ವರುಣಾ ನಾಲೆ ಅಭಿವೃದ್ಧಿಗೆ ಅನುದಾನವನ್ನೇ ಬಿಡುಗಡೆ ಮಾಡಿಲ್ಲ ಎಂದು ಜಿಟಿಡಿ ಮುಖ್ಯಮಂತ್ರಿಗಳ ಬಳಿ ಹೇಳಿದಾಗ ಅವರು ಕಬಿನಿ ಯೋಜನೆಗೆ ಅನುದಾನ ನೀಡಿರುವುದಾಗಿ ತಿಳಿಸಿದ್ದಾರೆ. ಅದಕ್ಕೆ ಪ್ರತಿಕ್ರಿಯಿಸಿದ ಗೌಡರು, ಕಬಿನಿ ಯೋಜನೆಗೆ ಅನುದಾನ ಕೊಟ್ಟಿರುವುದು ನಿಜ, ಆದರೆ ವರುಣಾ ನಾಲೆ ಅಭಿವೃದ್ಧಿಗೆ ಅನುದಾನ ನೀಡಿಲ್ಲ ಎಂದಾಗ ಮುಖ್ಯಮಂತ್ರಿಗಳು ಅವರ ಈ ಮಾತನ್ನು ಒಪ್ಪಿದರು.

ಮುಂದುವರೆದು ಮಾತನಾಡಿದ ಜಿಟಿಡಿ, ವರುಣಾ ನಾಲೆಗೆ ಸಂಬಂಧಿಸಿದ ತೂಬುಗಳ ದುರಸ್ತಿ ಮಾಡಬೇಕಾಗಿದೆ. ನಾಲೆಯನ್ನು ಅಭಿವೃದ್ಧಿಪಡಿಸಿ, ಕೊನೇ ಹಂತದ ಜಮೀನಿಗೂ ನೀರು ತಲುಪುವ ವ್ಯವಸ್ಥೆ ಮಾಡಬೇಕಾಗಿದೆ. ಈ ನಾಲಾ ವ್ಯಾಪ್ತಿಯ ಕೆರೆ–ಕಟ್ಟೆಗಳಿಗೆ ನೀರು ತುಂಬಿಸುವ ಕೆಲಸ ಆಗಲೇಬೇಕಾಗಿದೆ. ಈ ಕಾರ್ಯವಾದರೆ ಮೈಸೂರು ತಾಲೂಕಿನ ಜಯಪುರ ಹೋಬಳಿ ಮತ್ತು ಹೆಚ್.ಡಿ.ಕೋಟೆ ತಾಲೂಕಿನ ಹಂಪಾಪುರ ಹೋಬಳಿಗೆ ಅನುಕೂಲವಾಗುತ್ತದೆ ಎಂದು ತಿಳಿಸಿದರು. ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ ಮುಖ್ಯಮಂತ್ರಿಗಳು ವರುಣಾ ನಾಲೆ ಅಭಿವೃದ್ಧಿಗೆ ಶೀಘ್ರದಲ್ಲೇ ಅನುದಾನ ಬಿಡುಗಡೆ ಮಾಡುವುದಾಗಿ ಭರವಸೆ ನೀಡಿದ್ದಾರೆ.

ಬೆಳಗಾವಿಯಲ್ಲಿ ಶ್ರೀರಾಮ ಸೇನೆ ಮುಖಂಡರ ಮೇಲೆ ಗುಂಡಿನ ದಾಳಿ

ಬೆಳಗಾವಿ: ಸಮೀಪದ ಹಿಂಡಲಗಾ ಗ್ರಾಮದಲ್ಲಿ ಶನಿವಾರ ರಾತ್ರಿ ವಿರಾಟ್ ಹಿಂದೂ ಸಮಾವೇಶದ ಸಿದ್ಧತೆಯಲ್ಲಿ ತೊಡಗಿದ್ದ ಶ್ರೀರಾಮ ಸೇನೆಯ ಜಿಲ್ಲಾ ಘಟಕದ ಅಧ್ಯಕ್ಷ ಹಾಗೂ ಮುಖಂಡನ ಮೇಲೆ ಗುಂಡಿನ ದಾಳಿ ನಡೆದಿದೆ. ಶ್ರೀರಾಮ ಸೇನೆಯ ಜಿಲ್ಲಾ ಘಟಕದ ಅಧ್ಯಕ್ಷ ರವಿ ಕೋಕಿತ್ಕರ್ ಹಾಗೂ ಹಿಂದೂ ರಾಷ್ಟ್ರ ಸೇನಾ ಮುಖಂಡ ಮನೋಜ್ ದೇಸೂರಕರ್ ಗುಂಡೇಟಿನಿಂದ ಗಾಯಗೊಂಡವರು. ರವಿ ಅವರ ಕುತ್ತಿಗೆ ಭಾಗಕ್ಕೆ ಗುಂಡು ತಗಲಿದ್ದು, ತೀವ್ರ ರಕ್ತಸ್ರಾವವಾಗಿದೆ. ಮನೋಜ್ ಅವರ ಕೈಯಲ್ಲಿ ಗುಂಡು ಹೊಕ್ಕಿದೆ. ಇಬ್ಬರನ್ನೂ ಇಲ್ಲಿನ ಕೆಎಲ್‌ಇ ಆಸ್ಪತ್ರೆಗೆ ದಾಖಲಿಸಲಾಗಿದೆ.



ನಗರದಲ್ಲಿ ಜನವರಿ 8ರಂದು ಶ್ರೀರಾಮ ಸೇನೆಯಿಂದ ವಿರಾಟ್ ಹಿಂದೂ ಸಮಾವೇಶದ ಸಿದ್ಧತೆ ಮಾಡಲಾಗಿದೆ. ಇದರ ನೇತೃತ್ವ ವಹಿಸಿದ ರವಿ ಹಾಗೂ ಅವರ ಸಹವರ್ತಿ ಮನೋಜ್ ರಾತ್ರಿ 8ರ ಸುಮಾರಿಗೆ ಕಾರಿನಲ್ಲಿ ಸ್ಥಳಕ್ಕೆ ಹೊರಟಿದ್ದರು. ಕಾರು ಹಿಂಡಲಗಾದ ಮರಾಠಿ ಸರ್ಕಾರಿ ಶಾಲೆಯ ಬಳಿ ಬಂದಾಗ, ಅಲ್ಲೇ ಕಾಯುತ್ತಾ ನಿಂತಿದ್ದ ಇಬ್ಬರು ದುಷ್ಕರ್ಮಿಗಳು ಏಕಾಏಕಿ ಗುಂಡಿನ ದಾಳಿ ನಡೆಸಿದರು.

ಮುಂದಿನ ಎಡಬದಿ ಸೀಟಿನಲ್ಲಿ ಕುಳಿತಿದ್ದ ರವಿ ಅವರ ಕುತ್ತಿಗೆಯ ಕೆಳಭಾಗಕ್ಕೆ ತಾಗಿ ದಾಟಿದ ಗುಂಡು, ಕಾರು ಓಡಿಸುತ್ತಿದ್ದ ಮನೋಜ್ ಅವರ ಕೈಗೆ ಸಿಕ್ಕಿಕೊಂಡಿದೆ ಎಂದು ಮೂಲಗಳು ತಿಳಿಸಿವೆ. ಗುಂಡೇಟು ಬಿದ್ದ ತಕ್ಷಣ ದುಷ್ಕರ್ಮಿಗಳು ಬೈಕ್ ಹತ್ತಿ ಪರಾರಿಯಾದರು. ಸ್ಥಳದಲ್ಲಿ ಸೇರಿದ ಜನ ಇಬ್ಬರನ್ನೂ ಆಸ್ಪತ್ರೆಗೆ ಸಾಗಿಸಲು ನೆರವಾದರು. ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿದ್ದು, ಹೆಚ್ಚಿನ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದೆ.




ಅವಧಿ ವಿಸ್ತರಣೆ

ಮೈಸೂರು,ಜ.7– ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ಜಿಲ್ಲೆಯಲ್ಲಿ ವಾಸಿಸುವ ಪರಿಶಿಷ್ಟ ಪಂಗಡದವರಿಗೆ 2022–23ನೇ ಸಾಲಿನ ನೇರಸಾಲ ಯೋಜನೆ, ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆ (3.50 ಲಕ್ಷ ಸರಕು ಸಾಗಣೆ ವಾಹನ) ಮತ್ತು ದ್ವಿಚಕ್ರ ವಾಹನ ಯೋಜನೆಗಳಿಗೆ ಆನ್‌ಲೈನ್ ಅರ್ಜಿ ಸಲ್ಲಿಸುವ ದಿನಾಂಕವನ್ನು ಜ.16 ವರೆಗೆ ವಿಸ್ತರಿಸಲಾಗಿದೆ. ಆಸಕ್ತಿಯುಳ್ಳವರು ಆನ್‌ಲೈನ್ ಮೂಲಕ ಇಲಾಖೆಯ https://sevasindhu.karnataka.gov.in. ವೆಬ್‌ಸೈಟ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ನಂ.40, ಮಹರ್ಷಿ ವಾಲ್ಮೀಕಿ ಭವನ, ವಿಜಯನಗರ 2ನೇ ಹಂತ, ಮೈಸೂರು ದೂರವಾಣಿ ಸಂಖ್ಯೆ 0821–2430022 ಅನ್ನು ಸಂಪರ್ಕಿಸಬಹುದು ಎಂದು ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

5ನೇ ವರ್ಷದ ಸವಿನೆನಪು



ಪಿ.ಸೋಮಶೇಖರ್
PRO, BEML

ನೀವು ನಮ್ಮನ್ನಗಲಿ ಇಂದಿಗೆ 5 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು:
ಮಂಜುಳ ಧ್ವನಿ & ಬೆಳಕು ಕುಟುಂಬ, ಸುಣ್ಣದಕೇರಿ, ಮೈಸೂರು

Vehicle Type	BLR Airport / Pickup	BLR City Drop / Pickup
Etios / Dzire	2600/-	2300/-
Innova	4000/-	3800/-
Innova Crysta	4500/-	4300/-

ಮೊದಲನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ನಾಗಮ್ಮನವರು

STG PUBLIC SCHOOL

SCHOOL WITH A DIFFERENCE
AFFILIATION NO: 830836

STEP AHEAD IN YOUR TEACHING CAREER WITH AN OPPORTUNITY TO WORK AT STG PUBLIC SCHOOL

We are looking for enthusiastic and creative teachers for the following positions.

SECTION	SUBJECT	QUALIFICATION
Primary School	Mathematics Science Computer Science Hindi	B.Sc, B Ed B.Sc, B Ed B.Sc IT, BCA BA / MA. B Ed
Middle School	English Social Computer Science	MA, B Ed BA / MA, B Ed B.Sc IT / BCA
High School	Science (CBZ) Computer Science	M Sc B Ed B.Sc / IT / BCA / MCA/BE (CS /IS)/ B Tech
Co-Curricular Activities	Skating Teacher Dance Teacher Theatre / Drama Keyboard Teacher Drawing Teacher	Trained
All Sections	Counsellor	B.Sc / M.Sc Psychology PG Diploma in Guidance & Counselling

send your resume to **info@stgpublicschool.com**
along with a passport size photograph within 15th Jan 2023.

TRANSPORTATION will be given to the deserving candidates.
Proficiency in English and knowledge of computers is a prerequisite.
Only short listed candidates will be called for the INTERVIEW

Chinakurali, Pandavapura Taluk, Mandya - 571455
www.stgpublicschool.com
FOR QUERIES CALL : 9108481695

PUBLIC NOTICE

Notice is given to the general public at large that my client is intending to take on lease (lease cum sale) the schedule property mentioned in the schedule below from Karnataka Industrial Areas Development Board (KIADB). Any family members, individuals, banks, etc having any objections for my client entering into any transaction with the said Authority is hereby required to communicate their objections in writing to my office with documentary evidence within **07 days** from the date of this publication. In the absence of any authenticated objections/claims, my client will proceed to complete the transaction and no claim in this regard will be entertained thereafter.

SCHEDULE OF THE PROPERTY

All that piece and parcel of Industrial Plot No. 152/2 measuring about 27 acres. situated at Immavu Industrial Areas, Immavu Village, Chikkayanachathra Hobli Taluk, Mysuru District – Measuring East to West 298.46 m, 102.22 & 296.02m and North to South 250.50m, 14.78 & 29.66, 82.55, 60.50, 163.49m totally measuring 109281.51 sqm. East By: 30.0m Wide 2nd Cross Road, West By: 15 m Wide Buffer Area and Plot no. 152/1, North By: Storm Water Drain & 30m, 5th Main Road and South By: Plot no. 152/2.

Sd/- **Dinesh Solanki** B.Com, LL.M. Advocate
1197, 12/2, K.R.B. Road, Behind Palyam Printers, Chamarajapuram, Mysuru – 570005.
Mob: 9343430011.
Date: 06.01.2023

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಜೆ.ಎಲ್.ಬಿ.ರಸ್ತೆ, ಮೈಸೂರು
ಸಂಖ್ಯೆ: ಮೈನಪ್ರಾ/ವಿ.ಕ–5ಬಿ/2022-23 ದಿನಾಂಕ:06.01.2023

ಪ್ರಕಟಣೆ

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ ವತಿಯಿಂದ ಶ್ರೀ.ಮಾದವ ರಾವ್.ಎಂ.ಆರ್.ರವರಿಗೆ ದೇವನೂರು 2ನೇ ಹಂತ ಬಡಾವಣೆ ನಿವೇಶನ ಸಂಖ್ಯೆ: 1888 ವಿಸ್ತೀರ್ಣ: 21.09.1991 ರಂದು ಮಂಜೂರಾಗಿದ್ದು, ದಿನಾಂಕ: 22.11.1991 ರಂದು ಸ್ವಾಧೀನ ಪತ್ರ ನೀಡಲಾಗಿದೆ.

ಶ್ರೀ.ಮಾದವ ರಾವ್.ಎಂ.ಆರ್. ರವರು 1ನೇ ಪುಸ್ತಕದ ದಸ್ತಾವೇಜು ಸಂಖ್ಯೆ: ಎಂವೈಎ–1–09880–2013–14 ಆಗಿ ದಿನಾಂಕ: 22.01.2014ರಂದು ಶ್ರೀಮತಿ.ಆರ್.ಮುಕ್ತಾ ಬೇಗಂ ರವರಿಗೆ ಖಚಿತ್ತ ಕ್ರಯಕ್ಕೆ ಮಾರಾಟ ಮಾಡಿರುತ್ತಾರೆ.

ಅನಂತರ ಶುದ್ಧ ಕ್ರಯ ಪತ್ರದ ಆಧಾರದ ಮೇಲೆಗೆ ಶ್ರೀಮತಿ.ಆರ್.ಮುಕ್ತಾ ಬೇಗಂ ರವರು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ ಸದರಿ ನಿವೇಶನಕ್ಕೆ ಕ್ರಯಪತ್ರ ನೀಡಬೇಕೆಂದು ಕೋರಿರುತ್ತಾರೆ. ಆದರಿಂದ ಸದರಿಯವರ ಹೆಸರಿಗೆ ಮೇಲ್ಕಂಡ ನಿವೇಶನಕ್ಕೆ ಕ್ರಯಪತ್ರ ನೀಡುವ ಕುರಿತು ಯಾರಿಂದಾದರೂ ತಕರಾರು ಏನಾದರು ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 15 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ಆಕ್ಷೇಪಣೆ ಸಲ್ಲಿಸಬಹುದು. ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಿಯಮಾನುಸಾರ ಕ್ರಮ ವಹಿಸಲಾಗುವುದು.

ಸಹಿ/- ವಿಶೇಷ ತಹಸೀಲ್ದಾರ್, ವಲಯ ಕಛೇರಿ 5ಬಿ,
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.

ಕಳೆದಿದೆ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಹುಯಿಲಾಳು ಗ್ರಾಮದ ಸರ್ವೆ ನಂ.20 ರ ಜಮೀನಿನ ಕ್ರಯಪತ್ರದ ನೋಂದಣಿ ಸಂಖ್ಯೆ: MYN-1-25124-2006-07, ಸಿ.ಡಿ.ಸಂಖ್ಯೆ MYND125 ದಿನಾಂಕ:21–12–2006 ರಂದು ಶ್ರೀ ಎಂ. ವಿ ಗೋಪಿನಾಥ್ ಬಿನ್ ಲೇಟ್ ಶ್ರೀ ಎಂ ಎಸ್ ವೆಂಕಟನಾರಾಯ್ಣ ರವರಿಗೆ ನೋಂದಣಿಯಾಗಿರುತ್ತದೆ. ಈ ಜಮೀನಿನ ಮೂಲ ಕ್ರಯಪತ್ರ ದಿನಾಂಕ:26.12.2022 ರಂದು ಮೈಸೂರು ಸಿಟಿ, ಕುವೆಂಪುನಗರದಲ್ಲಿ ಕಳೆದುಹೋಗಿದ್ದು, ಈ ವಿಚಾರವಾಗಿ ದಿನಾಂಕ:06.01.2023 ರಂದು, ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ಸದರಿ ದೂರಿನ ಸಂಖ್ಯೆ : 16465232300000023 ಆಗಿರುತ್ತದೆ, ಯಾರಿಗಾದರು ಸಿಕ್ಕಿದ್ದಲ್ಲಿ ಸಂಪರ್ಕಿಸಿ ಮೊಬೈಲ್ ನಂ. 9108285061.

ಪುರಸಭಾ ಕಾರ್ಯಾಲಯ, ಪಿರಿಯಾಪಟ್ಟಣ ಮೈಸೂರು ಜಿಲ್ಲೆ –571107

ಈ-ಮೇಲ್ :itstaff_ulb_periyapatna@yahoo.com Phone(O): 08223-273036
ಸಂ:ಪಿಪುಸ/ತಾಂತ್ರಿಕ/ಜಿಇ.2/ಟೆಂಡರ್–16/2022–23 ದಿನಾಂಕ: 05.01.2023

ಟೆಂಡರ್ ಪ್ರಕಟಣೆ

ಈ ಮೂಲಕ ಪ್ರಕಟಿಸುವುದೇನೆಂದರೆ 2022–23ನೇ ಸಾಲಿನ ಪುರಸಭಾ ನಿಧಿ ಅನುದಾನದಡಿ ಈ ಕೆಳಕಂಡ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟಿರುವ ಅರ್ಹ ಗುತ್ತಿಗೆದಾರರಿಂದ ಕನಿಷ್ಟ ದರಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು, ಟೆಂಡರ್‌ಗಳನ್ನು ನಿಗಧಿತ ಇ.ಎಂ.ಡಿ. (ಮುಖ್ಯಾಧಿಕಾರಿಗಳ ಹೆಸರಿಗೆ ಡಿ.ಡಿ.)ಯನ್ನು ಲಕೋಟೆಯಲ್ಲಿಟ್ಟು ಸೀಲ್ ಮಾಡಿ ಸೂಚಿತ ದಿನಾಂಕದೊಳಗೆ ಮುಖ್ಯಾಧಿಕಾರಿಗಳು, ಪುರಸಭೆ, ಪಿರಿಯಾಪಟ್ಟಣ ಇವರಿಗೆ ತಲುಪಿಸತಕ್ಕದ್ದು.

ಟೆಂಡರ್ ಸಲ್ಲಿಸುವ ವಿವರ: 1) ಟೆಂಡರ್ ಫಾರಂಗಳಿಗೆ ಕೋರಿಕೆ ಅರ್ಜಿ ಸಲ್ಲಿಸಲು ಮತ್ತು ಟೆಂಡರ್ ಫಾರಂ ಪಡೆಯಲು ಕೊನೆಯ ದಿ: 23.01.2023ರ ಸಾಯಂಕಾಲ 03.30 ಗಂಟೆವರೆಗೆ. 2) ಭರ್ತಿ ಮಾಡಿದ ಸೀಲ್ಡ್ ಟೆಂಡರ್‌ಗಳನ್ನು ಕಛೇರಿಗೆ ಸಲ್ಲಿಸುವ ಕೊನೆಯ ದಿ: 25.01.2023ರ ಸಾಯಂಕಾಲ 04.00 ಗಂಟೆವರೆಗೆ. 3) ಟೆಂಡರ್ ತೆರೆಯುವ ದಿ: 25.01.2023 ರ ಸಾಯಂಕಾಲ 05.00 ಗಂಟೆ ಅಥವಾ ಸೂಚಿಸಿದ ದಿನದಂದು

ಕ್ರ. ಸಂ.	ಕಾಮಗಾರಿ ಹೆಸರು	ಅಂದಾಜು ಮೊತ್ತ (ರೂ.ಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ)	ಟೆಂಡರ್ ಫಾರಂ ಬೆಲೆ (ರೂ.ಗಳಲ್ಲಿ)
1	ಪಿರಿಯಾಪಟ್ಟಣ ಪುರಸಭಾ ವ್ಯಾಪ್ತಿಯ ದೊಡ್ಡನಾಯಕರ ಬೀದಿಯ ಸಮುದಾಯ ಭವನದ ಮುಂಭಾಗದಲ್ಲಿರುವ ಹ್ಯಾಂಡ್‌ಪಂಪ್‌ಗೆ ಮೋಟಾರ್ – ಪಂಪ್ ಅಳವಡಿಸುವುದು ಮತ್ತು ದೊಡ್ಡಬೀದಿ ಸರ್ಕಲ್‌ನಲ್ಲಿ ವಾಲ್ವ್‌ನ್ನು ಅಳವಡಿಸುವ ಕಾಮಗಾರಿ.	80,000/–	2,000/–	100/– (+ ಜಿಎಸ್‌ಟಿ)
2	ಪಿರಿಯಾಪಟ್ಟಣ ಪುರಸಭಾ ವ್ಯಾಪ್ತಿಯ ಅಬ್ಬೂರು, ವಿನಾಯಕ ಬಡಾವಣೆ, ನೌಕರ ಬಡಾವಣೆ, ರಾಜಾಪುರ, ಟ್ಯಾಂಕ್ ಬಡಾವಣೆ ಮತ್ತು ಹರವೆ ಮಲ್ಲರಾಜಪಟ್ಟಣದಲ್ಲಿರುವ ಮೇಲ್ಮಟ್ಟದ ಜಲಸಂಗ್ರಹಾಗಾರ ಟ್ಯಾಂಕ್‌ಗಳನ್ನು ಶುದ್ಧೀಕರಣಗೊಳಿಸುವ ಕಾಮಗಾರಿ.	4,87,000/–	12,175/–	500/– (+ ಜಿಎಸ್‌ಟಿ)

ಗುತ್ತಿಗೆದಾರರ ದರ್ಜೆ: 4ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರು. **ಕೆಲಸ ಮುಗಿಸಬೇಕಾದ ಅವಧಿ:** 90 ದಿನಗಳು

ಸೂಚನೆ: ಈ ಕಛೇರಿಯಿಂದ ನೀಡುವ ಇತರೆ ಎಲ್ಲಾ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು ಮತ್ತು ಹೆಚ್ಚಿನ ಮಾಹಿತಿ ಹಾಗೂ ಕಾಮಗಾರಿಗಳ ವಿವರಗಳಿಗೆ ಕಛೇರಿಯ ವೇಳೆಯಲ್ಲಿ ಈ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ಸಹಿ/- (ಶ್ರೀ. ಕೆ. ಮಹೇಶ್) ಅಧ್ಯಕ್ಷರು, ಪುರಸಭೆ, ಪಿರಿಯಾಪಟ್ಟಣ	ಸಹಿ/- (ಶ್ರೀಮತಿ ಆಶಾ ಪಿ.ಕೆ.) ಉಪಾಧ್ಯಕ್ಷರು, ಪುರಸಭೆ, ಪಿರಿಯಾಪಟ್ಟಣ	ಸಹಿ/- (ಶ್ರೀ ಪಿ.ಸಿ. ಕೃಷ್ಣ) ಸ್ಥಾಯಿ ಸಮಿತಿ ಅಧ್ಯಕ್ಷರು, ಪುರಸಭೆ, ಪಿರಿಯಾಪಟ್ಟಣ	ಸಹಿ/- (ಶ್ರೀ ಮಹೇಂದ್ರ ಬಿ) ಮುಖ್ಯಾಧಿಕಾರಿ, ಪುರಸಭೆ, ಪಿರಿಯಾಪಟ್ಟಣ

DIPR/DDMYS/KSMCA/862/2022-23